Mr. SPEAKER.—Tomorrow during the discussion, if both the Chief Minister and the Finance Minister are absent, proper arrangements have to be made.

Sri S. NIJALINGAPPA.—Yes, Sir, we have made proper arrangements.

BUDGET ESTIMATES FOR 1965-66.

General discussion (not concluded)

2-00 P. M.

†ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಮಾನ್ಯ ಸಭಾಪತಿಗಳೇ, ಮಾನ್ಯ ಅರ್ಥ ಸಚಿವರು ಈಗ ನಮ್ಮ ಸಭೆಯ ಮುಂದೆ 1965-66 ನೇ ಸಾಲಿಗೆ ಸಂಬಂಧಪಟ್ಟ ಬಡ್ಜೆಟ್ಟನ್ನು ಮಂಡಿಸಿದ್ದಾರೆ. ಇವರು ಸಭೆಯ ಮುಂದೆ ಮಂಡಿಸಿರತಕ್ಕ ಬಡ್ಜಟ್ಟಿನ ಬಗ್ಗೆ ನಾನು ಒಂದೇ ವಾಕ್ಯದಲ್ಲಿ ಹೇಳುವುದಾದರೆ ಈ ಅರ್ಥ ಸಚಿವರು ಮಂಡಿಸಿರತಕ್ಕ ಬಡ್ಜೆಟ್ ನಮ್ಮ ದೇಶ ಈ ದಿವಸ ಎಷ್ಟು ನಿರಾಶ ನಿರುತ್ಸಾಹ ನಿಸ್ತೇಜದಿಂದ ಕೂಡಿದ್ದಾಗಿ ದೇಶದ ಪೂರ್ಣ ಚಿಂತಾಜನಕ ಪರಿಸ್ಥಿತಿಯನ್ನು ವ್ಯಕ್ತಪಡಿಸತಕ್ಕ ಒಂದು ದೊಡ್ಡ ಪಟ್ಟಿ ಆಗಿದೆ ಎಂಬುದಾಗಿ ಹೇಳಬಹುದು. ಈಗ ನಮ್ಮ ಅರ್ಥ ಸಚಿವರು ಮಂಡಿಸಿರತಕ್ಕ ಚಿಂತಾಜನಕ ಆಯವ್ಯಯ ಪಟ್ಟಿಯ ವಿಷಯವಾಗಿ ನಾವೀದಿವಸ ನಮ್ಮ ಸರ್ಕಾರ ಇಂಥ ಒಂದು ಚಿಂತಾಜನಕ ಪರಿಸ್ಥಿತಿಯಲ್ಲದೆಯಲ್ಲಾ ಎಂದು ನಾವು ನಮ್ಮ ಅನುತಾಪವನ್ನು ವ್ಯಕ್ತಪಡಿಸಬೇಕೇ ಅಥವಾ ಬೇಡವೇ ಎಂಬುದನ್ನು ನಾವು ತೀವ್ರವಾಗಿ ಆಲೋಚನೆ ಮಾಡಬೇಕಾಗಿದೆ.

ಈ ದಿವಸ ನಮ್ಮ ರಾಜ್ಯದ ವರಮಾನ ಅಂದರೆ, ಮುಂದಿನ ಸಾಲಿಗೆ 1965-1966ಕ್ಕೆ 12,151.69 ಲಕ್ಷ ರೂಪಾಯಿಗಳ ವರಮಾನವೂ ಮತ್ತು 12,542,93 ಲಕ್ಷ ರೂಪಾಯಿಗಳ ವೆಚ್ಚವೂ ಇದ್ದು, ನಮ್ಮ ಆಯವ್ಯಯವು ಸುಮಾರು 391.24 ಲಕ್ಷ ರೂಪಾಯಿಗಳ ಖೋತಾ ಬಡ್ಜೆಟ್ಟಾಗಿರುತ್ತದೆಂದು ಅವರು ತಿಳಿಸಿದ್ದಾರೆ. ಈ ಹಿಂದೆ ನಾನು ಇದೇ ಬಡ್ಜೆಟ್ ಅಧಿವೇಶನದ ಕಾಲದಲ್ಲಿ ಮಾನ್ಯ ಆರ್ಥಿಕ ಸಚಿವರು ಕಳೆದ ಸಾಲಿನ ಬಡ್ಜೆಟ್ಟನ್ನು ಮಂಡಿಸಿದ್ದ ಕಾಲಕ್ಕೆ ಅವರು 7 ಲಕ್ಷ ರೂಪಾಯಿಗಳ ಸರ್‌ಪ್ಲಸ್ ಬಡ್ಜೆಟನ್ನು ಸಭೆಯ ಮುಂದೆ ಮಂಡಿಸಿದ್ದಾಗ ನಾನು ಅದು ನಿಜವಾಗಿಯೂ ಸರ್‌ಪ್ಲಸ್ ಬಡ್ಜೆಟ್ಟಲ್ಲ, ಇವರು ನಿಜಪರಿಸ್ಥಿತಿಯನ್ನು ಇಲ್ಲಿ ನಿರೂಪಿಸಿಲ್ಲ ಇದು ಖಂಡಿತವಾಗಿಯೂ ಖೋತಾ ಬಡ್ಜೆಟ್ಟೇ ಎಂಬುದಾಗಿ ತಿಳಿಸಿದ್ದೇನೆ. ಹಾಗೆ ನಾನು ಕಳೆದ ಸಾಲಿನಲ್ಲಿ ಏನು ಹೇಳಿದ್ದೆನೋ ಆ ನಿಜಸ್ವರೂಪವನ್ನೇ ಈ ದಿವಸ ಮಾನ್ಯ ಆರ್ಥಿಕ ಸಚಿವರು ಸಭೆಯ ಮುಂದಿಟ್ಟಿದ್ದಾರೆ. ಆದರೆ ಅವರು ಹಿಂದಿನ ಸಾಲಿನಲ್ಲಿ ಬಡ್ಜೆಟ್ಟನ್ನು ಮಂಡಿಸುವಾಗ ಈ ಸಾಲಿಗೆ 111 ಕೋಟಿ ರೂಪಾಯಿಗಳ ಆದಾಯವನ್ನೂ ಮತ್ತು 109 ಚಿಲ್ಲರೆ ಕೋಟಿ ವೆಚ್ಚವನ್ನೂ ಅಂದಾಜ ಮಾಡಿದ್ದರು. ಆದರೆ ಅವರ ಅಂದಾಜು ತಪ್ಪಿ ಹೋಗಿ ಬರಬೇಕಾಗಿದ್ದ ಆದಾಯ 111 ಕೋಟಿಗೆ ಬದಲು 100 ಕೋಟಿಗಿಳಿಯಿತು. ಅದಕ್ಕೆ ತಕ್ಕಂಥ ಖರ್ಚು ನಿರೀಕ್ಷಿಸಿದ್ದುದಕ್ಕಿಂತ ಅಂದರೆ 109 ಕೋಟಿಯ ಬದಲು ಅದು 112 ಕೋಟಿಗೇ ಕೋಟಿಗೇರಿತು. ಹೀಗಾಗಿ ಅದು 15 ಲಕ್ಷ ಖೋತಾ ಬಡ್ಜೆಟ್ಟಾಯಿತು. ಅಂದರೆ ಇದು ಏನನ್ನು ಸೂಚಿಸುತ್ತಿದೆ ಎಂದರೆ, ಸರ್ಕಾರದವರಿಗೆ ಸರಿಯಾದ ವಿವೇಚನೆಯನ್ನಿಟ್ಟುಕೊಂಡು ಈ ಬಡ್ಜೆಟ್ಟನ್ನು ತಯಾರಿಸುವುದಕ್ಕೆ ಬರುವುದಿಲ್ಲವೆಂಬುದನ್ನು ಇದು ಸೂಚಿಸುತ್ತದೆ. ಇವರಿಗೆ ಶಾಸ್ತ್ರೀಯವಾದ ರೀತಿಯಲ್ಲಿ ಬಡ್ಜೆಟ್ಟನ್ನು ತಯಾರಿಸುವುದಕ್ಕೆ ಬರುವುದಿಲ್ಲವೆಂಬುದನ್ನು ಇದು ಎತ್ತಿ ತೋರಿಸುತ್ತಿದೆ. ಅಂತೂ ನಾವು ಹಿಂದಿನಿಂದಲೂ ಹೇಳುತ್ತಿದ್ದ ಹಾಗೆ ಈ ಸರ್ಕಾರ ದೇಶದ ಹಣಕಾಸಿನ ಪರಿಸ್ಥಿತಿಯನ್ನು ಇಂಥ ಒಂದು ಚಿಂತಾಜನಕ ಮಟ್ಟಕ್ಕೆ ತಂದು ನಿಲ್ಲಿಸಿದೆ. ಈ ವಿಚಾರವಲ್ಲಿ ಮಾನ್ಯ ಮಂತ್ರಿಗಳೇ ತಮ್ಮ ವರದಿಯಲ್ಲಿ ಪೀಠಿಕಾರೂಪವಾಗಿ ಹೀಗೆ ಹೇಳಿದ್ದಾರೆ.

[Mr. DEPUTY SPEAKER in the Chair].

"The heavy investments on developmental activities during the successive Plans without appreciable returns immediately, the mounting expenditure on Welfare Departments coupled with the growing debt burden,..."

ಹೀಗೆ ಅವರು ದೇಶದ ಹಣಕಾಸಿನ ಪರಿಸ್ಥಿತಿ ಬಹಳ ಹದಗೆಡುತ್ತಿದೆ ಎಂಬುದಾಗಿ ಹೇಳಿದ್ದಾರೆ. ಅಷ್ಟೇ ಅಲ್ಲದೆ ಅವರು ಮುಂದೆ ಇನ್ನೂ ಒಂದು ಮಾತನ್ನು ಹೇಳಿದ್ದಾರೆ:—

> "In embarking on big Plans it is true that there are bound to be shortcomings but we have to march ahead rectifying the same."

ಇದೇ ಮಾತನ್ನು ನಾವು ಇದೇ ಸಭೆಯಲ್ಲಿ ಅನೇಕಾವರ್ತಿ ಹೇಳಿದ್ದೇವೆ. ಅದನ್ನು ಇಂದು ನಮ್ಮ ಆರ್ಥಿಕ ಸಚಿವರು ಕಣ್ಣುಬಿಟ್ಟು ನೋಡುತ್ತಿದ್ದಾರೆ. ಅಂತೂ ನಮ್ಮ ಹಣಕಾಸಿನ ಪರಿಸ್ಥಿತಿ ಬಹಳ ಚಿಂತಾಜನಕವಾಗಿದೆ; ಹಾಗೂ ಬಹಳ ಶೋಚನೀಯವಾಗಿದೆ. ಈ ಬಗ್ಗೆ ನಾನೀಗ ಕೆಲವಾರು ವಿಷಯಗಳನ್ನು ಈ ಮಾನ್ಯ ಸಭೆಯ ಮುಂದೆ ಇಡಬೇಕೆಂದು ನಿಂತಿದ್ದೇನೆ.

ಈ ದಿವಸ ನಮ್ಮ ದೇಶದ ಸಾಲದ ಪರಿಸ್ಥಿತಿ ಹೇಗಿದೆ ಎಂಬುದನ್ನು ಹೇಳುವುದಾದರೆ, ಹಿಂದೆ 231 ಕೋಟಿ 3 ಲಕ್ಷ ಇದ್ದ ಸಾಲದ ಹೊರೆ 64–65ಕ್ಕೆ 265 ಕೋಟಿ 48 ಲಕ್ಷಕ್ಕೇರಿದ್ದು ಈ ಸಾಲಿಗೆ ಇದು 309 ಕೋಟಿಗೇರಿದೆ. ಈ ಮಟ್ಟದಲ್ಲಿ ನಾವು ನಮ್ಮ ದೇಶದ ಮೇಲೆ ಸಾಲದ ಒಂದು ಹೊರೆಯನ್ನು ದಿನಂಪ್ರತಿ ಏರಿಸುತ್ತಿದ್ದೇವೆ. ಇಲ್ಲಿ ಸರ್ಕಾರದವರು ಕೊಟ್ಟಿರತಕ್ಕ ಅಂಕಿ ಅಂಶಗಳಿಂದಲೇ ನಮ್ಮ ಅಸೆಟ್ಸ್ ಮತ್ತು ಲೈಬಲಿಟೀಸ್ ಯಾವ ರೀತಿ ಷ್ರಿಂಕಾಗುತ್ತಿದೆ ಎಂಬುದನ್ನು ತಾವೆಲ್ಲರೂ ನೋಡಬಹುದಾಗಿದೆ. ನಮ್ಮಲ್ಲಿ ವರ್ಷಂಪ್ರತಿ ಆಗತಕ್ಕ ವೆಚ್ಚಕ್ಕೆ ಅದು ಅಂದಾಜಕ್ಕೂ ಮೀರಿ ಹೋಗುತ್ತಿದ್ದು, ನಮ್ಮ ಆಸ್ತಿಯಲ್ಲಿ ವರ್ಷಂಪ್ರತಿ ಇಳಿಮುಖವಾಗುತ್ತಿದೆ. 1963—64ರಲ್ಲಿ ನಿರೀಕ್ಷಿಸಿದ್ದ ಖರ್ಚಿಗಿಂತ ಹೆಚ್ಚಿಗೆ ಖರ್ಚಾಗಿದ್ದು ಆಸ್ತಿಯಲ್ಲಿ 58 ಕೋಟಿ ಖೋತಾ ಆಯಿತು. ಹೀಗೆ ಈ ಖೋತಾ ವರ್ಷಂಪ್ರತಿಯೂ ಹೆಚ್ಚುತ್ತಿದೆ. ಹೀಗೆ ಪ್ರತಿವರ್ಷವೂ ಖರ್ಚಿನ ಅಂದಾಜು ಹೆಚ್ಚಾಗುತ್ತಿದ್ದು, ಆಸ್ತಿಯ ಅಭಿವೃದ್ಧಿ ಇಳಿಮುಖವಾಗುತ್ತಿದೆ. ಹೀಗಿದ್ದಾಗ್ಯೂ ನಮ್ಮ ಸಾಲದ ಹೊರೆ ಸತತವಾಗಿ ಏರುತ್ತಲೇ ಇದೆ. ನಾವು ಈ ಸಾಲದ ಬಗ್ಗೆ 1963—64ರಲ್ಲಿ ಎಷ್ಟು ಬಡ್ಡಿಯನ್ನು ಕೊಡಬೇಕಾಗಿತ್ತೆಂದರೆ ಎಂಟೂವರೆ ಕೋಟಿ ರೂಪಾಯಿಗಳನ್ನು ಕೊಡಬೇಕಾಗಿತ್ತು. ಇದು 1965—66ಕ್ಕೆ 10 ಕೋಟಿಗೇರಿದೆ. ಮುಂದಿನ ಸಾಲಿನಲ್ಲಿ ಇದು ಹನ್ನೊಂದೂವರೆ ಕೋಟಿಗೇರುತ್ತದೆ. ಈ ವಿಚಾರಗಳನ್ನೆಲ್ಲಾ ಈ ವರದಿಯ ಪುಟ 160ರಲ್ಲಿ ತಿಳಿಸಿದ್ದಾರೆ. ಈ ಸಾಲ ತೀರ್ಪಿಗಾಗಿ ನಾವು ಬಡ್ಡಿ ಹಣದ ಜೊತೆಯಲ್ಲಿ ತೆರಬೇಕಾಗಿರತಕ್ಕ ಹಣ ಎಷ್ಟೆಂದರೆ, ಅದು 14ಕೋಟಿ. ಅಂತೂ ನಾವು ಈ ವರ್ಷದ ಬಡ್ಜೆಟ್ಟಿನಲ್ಲಿ ಈ ಒಂದು ಬಾಬಿಗಾಗೇ 25ಕೋಟಿ ರೂಪಾಯಿಗಳನ್ನು ತೆರಬೇಕಾಗಿದೆ. ಹೀಗಾದರೆ ಯಾವ ದೇಶತಾನೆ ಮುಂದುವರೆಯುತ್ತದೆ? ನಾವು ಇಲ್ಲಿಯವರೆಗೂ ಸುಮಾರು 309 ಕೋಟಿ ರೂಪಾಯಿಗಳನ್ನು ಸಾಲ ಮಾಡಿ ಅಷ್ಟು ಹಣವನ್ನೂ ದೊಡ್ಡ ದೊಡ್ಡ ಪ್ರಾಜೆಕ್ಟುಗಳ ಮೇಲೂ ಮತ್ತು ಕಾರ್ಖಾನೆಗಳ ಮೇಲೂ ಹಾಕಿದ್ದೇವೆ. ಹೀಗೆ ನಮ್ಮ ದೇಶ ಕಳೆದ 10—18 ವರ್ಷಗಳಿಂದ ಸಾಲ ಮಾಡಿ ತಂದ ಹಣದಿಂದ ಪಡೆದಂಥ ಲಾಭವೇನೆಂಬುದನ್ನು ನಾವೀಗ ಪರಿಶೀಲಿಸಬೇಕಾದ್ದು ಮುಖ್ಯ. ನಾವು 309 ಕೋಟಿ ರೂಪಾಯಿಗಳನ್ನು ಸಾಲ ಮಾಡಿ, ಆ ಬಗ್ಗೆ 14 ಕೋಟಿಯನ್ನು ಅಸಲಿಗೂ ಮತ್ತು ಬಡ್ಡಿಗಾಗಿ 12ಕೋಟಿ ರೂಪಾಯಿಗಳನ್ನು ತರುತ್ತಿರುವಾಗ ನಾವು ಯಾವ ಮಟ್ಟದಲ್ಲಿದ್ದೇವೆ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕಾಗಿದೆ. ನಾವು ಈವರೆಗೂ ಡೆವಲಪ್‌ಮೆಂಟ್ ಬಾಬಿಗಾಗಿ ಬಹಳ ಹಣವನ್ನು ಖರ್ಚುಮಾಡಿದ್ದೇವೆ. ನಮ್ಮ ದೇಶದ ವಿದ್ಯಾಭ್ಯಾಸದ ಬಾಬಿನಲ್ಲಿ 1959-60ರಲ್ಲಿ 44 ಕೋಟಿ ಖರ್ಚು ಮಾಡುತ್ತಿದ್ದ ಕಡೆ ಈಗ ಅದನ್ನು 76 ಕೋಟಿಗೇರಿಸಿದ್ದೇವೆ. ಆದರೆ ಇದೇ ರೀತಿಯಲ್ಲಿ ಮೈಸೂರು ರಾಜ್ಯದಲ್ಲಿರತಕ್ಕ ನಮ್ಮ ಜನರು ತೆರಿಗೆಯನ್ನು ಯಾವ ರೀತಿ ಕೊಡುತ್ತಾ ಬಂದಿದ್ದಾರೆಂಬುದನ್ನೂ ನೋಡಬೇಕಾಗಿದೆ. 1959—60ರಲ್ಲಿ ಪ್ರತ್ಯಕ್ಷ ಹಾಗೂ ಅಪ್ರತ್ಯಕ್ಷ ರೂಪದಲ್ಲಿ ಕೊಡುತ್ತಿದ್ದ ತೆರಿಗೆ ಹಣ 31ಕೋಟಿ ಇದ್ದುದು ಅದು 1965—66ಕ್ಕೆ 60 ಕೋಟಿಗೇರಿದೆ. ಇದು ಒಂದಕ್ಕೆರಡರಷ್ಟಾಯಿತು. ಕೇವಲ 5 ವರ್ಷಗಳಲ್ಲಿ ಜನರ ಮೇಲೆ ಇಷ್ಟು ತೆರಿಗೆಯನ್ನು ಹೇರಿದ್ದಾರೆ. ಇಷ್ಟು ತೆರಿಗೆಯನ್ನು ಜನರ ಮೇಲೆ ಹೇರತಕ್ಕ ಕಾಲದಲ್ಲಿ ಸರ್ಕಾರದವರು ಏನು ಹೇಳಿದ್ದಾರೆಂದರೆ ಈ ಹಣದಿಂದ ತಾವು ಜನರಿಗೆ ಹೆಚ್ಚು ಆಹಾರವನ್ನು ಒದಗಿಸುವುದಾಗಿಯೂ, ಜನರಿಗೆ ಬೇಕಾದ ಇತರ ಅನುಕೂಲಗಳನ್ನು ಒದಗಿಸಿ ಜನರ ಸಂಪನ್ಮೂಲಗಳನ್ನು ಹೆಚ್ಚಿಸುವುದಾಗಿ ಹೇಳಿದ್ದರು. ಮತ್ತು ಮಾಡಬಾರದ ಸಾಲವನ್ನೂ ಕೂಡ ಮಾಡಿದ್ದಾರೆ. ಇದರಿಂದಾಗಿ ಇವತ್ತು ನಮ್ಮ ದೇಶದ ಪರಿಸ್ಥಿತಿ ಯಾವ ಮಟ್ಟಕ್ಕೆ ಬಂದಿದೆ ಎಂಬುದನ್ನು ಆರ್ಥಿಕ ಸಚಿವರನ್ನು ಕೇಳಬೇಕು, ಅವರಿಗೆ ಹೆದರಿಕೆಯಾಗಿ ಹೊರಟು ಹೋಗುತ್ತಾ ಇದ್ದಾರೆ, ಈ ಚಿಂತಾಜನಕ ಪರಿಸ್ಥಿತಿಯನ್ನು ಅವರು ಕೇಳಬೇಕು.

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯ ಮಂತ್ರಿಗಳು).—ನಿಮ್ಮ ಮಾತಿಗೆ ಯಾರೂ ಗಾಬರಿ ಪಡುವುದಿಲ್ಲ, ಅಂತಹ ಹೆದರಿಕೆಗೂ ಅವಕಾಶ ಕೊಡುವುದಿಲ್ಲ.

ಶ್ರೀ ಎಸ್. ಶಿವಪ್ಪ.—ತಾವು ಸ್ವಲ್ಪ ಸಾವಧಾನದಿಂದ ಕೇಳಬೇಕು. ಇವತ್ತು ಈ ದೇಶದಲ್ಲಿ 3 ಯೋಜನೆಗಳನ್ನು ಕಾರ್ಯಗತ ಮಾಡಿದ್ದೀರಿ. 250ಕೋಟಿ ರೂಪಾಯಿಗಳ ಪೈಕಿ 200 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ ಮುಂದಿನ ಕೊನೇ ವರ್ಷದಲ್ಲಿ ಸುಮಾರು 60ಕೋಟಿ ರೂಪಾಯಿಗಳು ನಮಗೆ ಬೇಕಾಗಿವೆ. ಅದಕ್ಕೆ ಕೇಂದ್ರ ಸರ್ಕಾರದವರು 34 ಕೋಟಿ ರೂಪಾಯಿಗಳನ್ನು ಕೊಡುತ್ತಾರೆ, ಉಳಿದ 14 ಕೋಟಿ ರೂಪಾಯಿಗಳನ್ನು ನಾವು ಕೊಡಬೇಕು ಎಂದು ಹೇಳಿದ್ದೀರಿ. 3ನೇ ಯೋಜನೆಯ ಕೊನೆ ವರ್ಷ ಬರುವುದಕ್ಕಿಂತ ಮುಂಚೆ ಇದುವರೆಗೂ ನೀವೇ ಹೇಳಿದಿರಿ, ಹೇರಳ ವಾಗಿ ಡೆವಲಪ್‌ಮೆಂಟ್ ಆಕ್ಟಿವಿಟೀಸ್, ನೀರಾವರಿ ಯೋಜನೆಯನ್ನು ಮಾಡುವುದಕ್ಕೆ, ದೇಶದಲ್ಲಿ ಆಹಾರ ಉತ್ಪನ್ನವನ್ನು ಜಾಸ್ತಿ ಮಾಡತಕ್ಕ ಕಾರ್ಯಕ್ರಮಗಳಿಗೆ ಹೇರಳವಾಗಿ ಹಣವನ್ನು ಖರ್ಚು ಮಾಡಿದ್ದೇವೆ ಎಂದು ಹೇಳಿದ್ದೀರಿ. ಮೈನರ್ ಇರಿಗೇಷನ್ ಒಂದನ್ನು ತೆಗೆದುಕೊಳ್ಳೋಣ, ತಮ್ಮ ಬಡ್ಜೆಟ್ ಭಾಷಣದಲ್ಲಿ ಹೇಳಿರುವಂತೆ 3ನೇ ಯೋಜನೆಯ ಕೊನೆ ಒಳಗೆ 850 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಈಗಿರತಕ್ಕ ಅಚ್ಚುಕಟ್ಟನ್ನು 92 ಸಾವಿರ ಎಕರೆಯನ್ನು ಉತ್ತಮಗೊಳಿಸಿದ್ದೇವೆ, ಹೊಸದಾಗಿ 78 ಸಾವಿರ ಎಕರೆಗೆ ನೀರನ್ನು ಒದಗಿಸಿದ್ದೇವೆ ಎಂದು ಹೇಳುತ್ತೀರಿ. ಕೊನೇ ವರ್ಷ ಎಂದರೆ ಈ ವರ್ಷ 42 ಲಕ್ಷ ರೂಪಾಯಿ ಖರ್ಚು ಮಾಡಿ 60 ಸಾವಿರ ಎಕರೆ ಉತ್ತಮ ಪಡಿಸಿದ್ದೇವೆ, ಹೊಸದಾಗಿ 35 ಸಾವಿರ ಅಚ್ಚುಕಟ್ಟು ತಯಾರು ಮಾಡಿದ್ದೇವೆ ಎಂದು ಹೇಳಿದ್ದೀರಿ. ಎರಡನೆಯ ದಾಗಿ ಮೇಜರ್ ಇರಿಗೇಷನ್ ತೆಗೆದುಕೊಂಡರೆ 3ನೇ ವರ್ಷದ ಕೊನೆಯ ಹೊತ್ತಿಗೆ ಸುಮಾರು 26 ಕೋಟಿ ರೂಪಾಯಿ ಖರ್ಚು ಮಾಡಿ ಗ್ರಾಸ್ ಪೊಟೆನ್ಷಿಯಲ್ 14 ಲಕ್ಷ ಎಕರೆಗೆ ನೀರನ್ನು ಕೊಡಬೇಕೆಂದು ಅಂದಾಜು ಇಟ್ಟುಕೊಂಡಿದ್ದೀರಿ. ಹೊಸ ಸ್ಕೀಂ ಅಂದಾಜು 99 ಕೋಟಿ ರೂಪಾಯಿ ಖರ್ಚು ಮಾಡಬೇಕೆಂದು ಅಂದಾಜು ಇಟ್ಟುಕೊಂಡಿದ್ದಿರಿ, 3ನೇ ಯೋಜನೆ ಮತ್ತು ಒಂದು ಎರಡನೆಯ ಯೋಜನೆಯಲ್ಲಿ ಕೆಲಸ ಆಗದೇ ಇರುವುದು. ಎಲ್ಲಾ ಸೇರಿಸಿದರೆ 228 ಕೋಟಿ ರೂಪಾಯಿ ಖರ್ಚು ಮಾಡಬೇಕೆಂದು ಅಂದಾಜು ಇಟ್ಟುಕೊಂಡಿದ್ದೀರಿ. ಇದುವರೆಗೂ ಖರ್ಚು ಮಾಡಿರತಕ್ಕ ಹಣಕ್ಕೆ 25 ಲಕ್ಷ ಎಕರೆ ಆಗಬೇಕೆಂದು ಅಂದಾಜು ಇದೆ, ನಿಮ್ಮ ಲೆಕ್ಕದ ಪ್ರಕಾರ ನಿಮ್ಮ ಪೂರೈಕೆ ಏನು ಎಂದರೆ, ಸುಮಾರು 6 ಲಕ್ಷ ಪೊಟೆನ್ಷಿಯಾಲಿಟಿ ಇದೆ. ಯುಟಿಲೈಸೇಷನ್ ಪಾಯಿಂಟ್ ನಿಂದ 4 ಲಕ್ಷ ಎಕರೆ ಮಾಡಿದ್ದೀರಿ ಇದು ತಮ್ಮ ಅಂಕಿ ಅಂಶದ ಪ್ರಕಾರ ತಮ್ಮ ಲೆಕ್ಕದ ಪ್ರಕಾರ. ಇದು ಒಂದು ಪಕ್ಷ ನಿಜವಾಗಿದ್ದ ಪಕ್ಷದಲ್ಲಿ ನೀವು ಹೇಳಿದ ಅಂಕಿಅಂಶದ ಪ್ರಕಾರ ಸುಮಾರು 4 ಲಕ್ಷ ಮೈನರ್ ಇರಿಗೇಷನ್‌ನಲ್ಲಿ ಎರಡೂವರೆ ಲಕ್ಷ ಎಕರೆ ಹೀಗೆ ಒಟ್ಟು ಸುಮಾರು 7 ಲಕ್ಷ ಎಕರೆ ನೀರಾವರಿಗೆ ತಯಾರು ಮಾಡಿದಂತಾಯಿತು. ಇವತ್ತು 7 ಲಕ್ಷ ಎಕರೆಯನ್ನು ನೀರಾವರಿಗೆ ಕೊಟ್ಟಮೇಲೆ ಆಹಾರದ ಪರಿಸ್ಥಿತಿ ಎಷ್ಟುಮಟ್ಟಿಗೆ ಉತ್ತಮವಾಗಿದೆ ಎಂಬುದನ್ನೂ ಕೂಡ ಯೋಚನೆ ಮಾಡಬೇಕಾ ಗಿದೆ. ಮಾನ್ಯ ಅರ್ಥಿಕ ಸಚಿವರು ತಮ್ಮ ಒಂದು ಭಾಷಣದಲ್ಲಿ ಈ ಆಹಾರದ ಪರಿಸ್ಥಿತಿ 1962-63ಕ್ಕಿಂತ 1963-64ರಲ್ಲಿ ಕೆಳಮಟ್ಟಕ್ಕೆ ಇಳಿದಿದೆ ಎಂದು ಹೇಳಿದ್ದಾರೆ. ಅದು ಎಷ್ಟು ಎಂದರೆ 1962-63ರಲ್ಲಿ ಸೀರಿಯಲ್ಸ್ 95 ಲಕ್ಷ 93 ಸಾವಿರದ 543 ಟನ್ ಉತ್ಪನ್ನವಾಯಿತು, 1963-64ರಲ್ಲಿ 37 ಲಕ್ಷ 19 ಸಾವಿರಕ್ಕೆ ಇಳಿಯಿತು ಅಂದರೆ ಪರ್ಸೆಂಟೇಜ್ ಆಫ್ ವೇರಿಯೇಷನ್ ಶೇಕಡ ಎರಡರಷ್ಟು ಆಯಿತು. ತಾವು ಹೇಳಿರುವ ರೀತಿಯಲ್ಲಿ ಮೈನರ್ ಇರಿಗೇಷನ್, ಮೇಜರ್ ಇರಿಗೇಷನ್ ಮೇಲೆ ಹೇರಳವಾಗಿ ಹಣವನ್ನು ಖರ್ಚು ಮಾಡಿದ್ದೇವೆ, ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ ಎನ್ನತಕ್ಕ ಮಾತು ಏನಿದೆ ಇದು ಒಂದು ಸಾಧನೆಯಾದ ಮೇಲೆ ಏನಾಗುತ್ತದೆ ಎಂದು ಕೇಳಿದ ಪ್ರಶ್ನೆಗೆ ಉತ್ತರ ಆಹಾರದ ರೂಪದಲ್ಲಿ ಬಂತು. ನೀವು ಈ ಯೋಜನೆಗಳನ್ನು ಮಾಡುವುದಕ್ಕೆ ನಿಮ್ಮ ಕೈಗೆ ತೆರಿಗೆಗಳ ಮೂಲಕ ಹಣವನ್ನು ಕೊಟ್ಟು ತಾವು ಈ ದೇಶದಲ್ಲಿ ಆಹಾರದ ಉತ್ಪನ್ನವನ್ನು ಜಾಸ್ತಿ ಮಾಡುತ್ತೇವೆ, ದೇಶದಲ್ಲಿರತಕ್ಕ ನಿರುದ್ಯೋಗವನ್ನು ಕಡಿಮೆ ಮಾಡುತ್ತೇವೆ ಎಂದು ಹೇಳುತ್ತಾ ಇರತಕ್ಕ ಏಕೈಕವಾದ ಅಳತೆ ಕೋಲು ಏನಿದೆ ಅದನ್ನು ನೋಡಿದ್ದೇ ಆದರೆ ನೀವು ನಿಮ್ಮ ಭುಜವನ್ನೇ ತಟ್ಟಿಕೊಂಡಂತೆ ಭಾಸವಾಗುತ್ತದೆಯೇ ಹೊರತು ಮತ್ತೇನೂ ಅಲ್ಲ. 1959-60ರಿಂದ ಈಚೆಗೆ ಈ ಅಭಿವೃದ್ಧಿಕಾರ್ಯ ಗಳಿಗೆ ಈ ದೇಶದಲ್ಲಿ 76 ಕೋಟಿ 7 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ ಎಂದು ಹೇಳಿದ್ದೀರಿ. ವಿದ್ಯಾಭ್ಯಾಸ, ಕೈಗಾರಿಕೆ ಕೊ-ಆಪರೇಟೀವ್ ಮೂವ್‌ಮೆಂಟ್, ವ್ಯವಸಾಯ ಇತ್ಯಾದಿ, ಇತ್ಯಾದಿ ಅಭಿವೃದ್ಧಿ ಕಾರ್ಯಗಳಿಗೆ ಸುಮಾರು 76 ಕೋಟಿ ರೂಪಾಯಿಗಳನ್ನು ಒದಗಿಸಿದ್ದೀರಿ. ಏಕಪ್ರಕಾರ ವಾಗಿ 59 ರಿಂದ ಈಚೆಗೆ ಒಂದಕ್ಕೆ ಎರಡು ಪಟ್ಟು ಆಗಿದೆ. ಇದು ನಿಜ. ಹಣಕಾಸನ್ನು ಖರ್ಚು ಮಾಡು ವುದರಲ್ಲಿ ನೀವು ಹಿಂದೆ ಬಿದ್ದಿದ್ದೀರಿ ಎಂದು ನಾವು ಯಾವತ್ತೂ ಹೇಳಿಲ್ಲ. ಹೇರಳವಾಗಿ ಖರ್ಚು ಮಾಡುತ್ತಾ ಇದ್ದೀರಿ. ಇಷ್ಟು ಖರ್ಚು ಮಾಡಿದರೂ ಕೂಡ ಅದು ಸ್ಕ್ಯಾಂಡರ್ಲ್ಡ ಮನಿ ಅಂತೆ ಆಗ ಬಾರದು ಎಂಬ ಪ್ರಶ್ನೆ ಇದೆ. ಹಣ ಖರ್ಚು ಮಾಡಿದ್ದಕ್ಕೆ ಅದರಿಂದ ಪ್ರಾಜೆಕ್ಟುಗಳು ಆಗಬೇಕು, ಅದರಿಂದ ಅನ್ನ ಉತ್ಪನ್ನವಾಗಬೇಕು ಮತ್ತು ಕೈಗಾರಿಕಾ ಉತ್ಪನ್ನ ಜಾಸ್ತಿಯಾಗಬೇಕು. ನಾನು ಹೇಳುವುದು ಇಷ್ಟೆ ನಾವು ನಿರೀಕ್ಷೆ ಮಾಡಿದೆವೋ ಅಷ್ಟು ಉತ್ಪನ್ನ ಬರಲಿಲ್ಲ. ಇವತ್ತು 18 ವರ್ಷ

ಆದಮೇಲೆ ಇದನ್ನು ತಿಳಿದುಕೊಳ್ಳಬೇಕಾಯಿತಲ್ಲಾ, ಎಂತಹ ಚಿಂತಾಜನಕ ಪರಿಸ್ಥಿತಿ ಬಂದಿದೆ ಎಂಬುದನ್ನು ತಾವು ಆಲೋಚನೆ ಮಾಡಬೇಕಾಗಿದೆ. ತಮಗೆ ಬರಬೇಕಾದ ರಿಟರ್ನ್ಸ್ ಯಾವಾಗ ಬರುತ್ತದೆ ? ಈಗಾಗಲೇ 18 ವರ್ಷ ಆಯಿತು. ನೀವು ಯೋಜನೆಗಳನ್ನು ಮಾಡತಕ್ಕ ಕಾಲದಲ್ಲಿ ಕೆಲ ಕೆಲವು ಅಪವ್ಯಯಗಳನ್ನು ಮಾಡುವುದು ಸ್ವಾಭಾವಿಕ, ಎಂದು ಹೇಳಿದ್ದೀರಿ. ಈ ಒಂದು ಹೇಳಿಕೆಯೇ ನಮ್ಮ ದೇಶದಲ್ಲಿ ಒಂದು ದೊಡ್ಡ ವಿಪತ್ತನ್ನು ತಂದೊಡ್ಡಿದೆ. ನಾವು ಶಾಸನ ಸಭೆಯಲ್ಲಿ ಆಗಿಂದಾಗ್ಯೆ ಎಚ್ಚರಿಕೆಯನ್ನು ಕೊಡುತ್ತಾ ಬಂದಿದ್ದೇವೆ, ದೇಶದಲ್ಲಿ ದೊಡ್ಡ ದೊಡ್ಡ ಯೋಜನೆಗಳನ್ನು ಕಾರ್ಯಗತ ಮಾಡತಕ್ಕ ಕಾಲದಲ್ಲಿ ಇಂತಹ ಅಪವ್ಯಯ ದೇಶದಲ್ಲಿ ಆಗಬಾರದು ಆದರಿಂದಾಗಿ ನಾವು ಎಷ್ಟು ಹಣವನ್ನು ಖರ್ಚು ಮಾಡುತ್ತೇವೆಯೋ ಅದಕ್ಕೆ ತಕ್ಕಂತೆ ಉತ್ಪನ್ನವೂ ಕೂಡ ಜಾಸ್ತಿಯಾಗುತ್ತದೆ ಎಂದು ತಿಳಿಸಿದ್ದೇವೆ.

Sri S. NIJALINGAPPA.—Is the word 'apavyaya' used there ?

Sri S. SIVAPPA.—The word used is 'shortcomings'.

Sri S. NIJALINGAPPA.—Short-comings is not apavyaya.

Sri S. SIVAPPA.—Shortcomings may be due to mismanagement or over-estimates or change of estimates or scheming of estimates.

ದೇಶದಲ್ಲಿ ನಾವು ದೊಡ್ಡ ದೊಡ್ಡ ಯೋಜನೆಗಳನ್ನು ಕಾರ್ಯಗತ ಮಾಡುತ್ತಿರುವ ಕಾಲದಲ್ಲಿ ನಮ್ಮ ಯೋಜನೆಗಳನ್ನು ತಯಾರು ಮಾಡುವುದರಲ್ಲಿ ದೊಡ್ಡ ಲೋಪವಿದೆ ಎಂದು ಹೇಳಿದ್ದಾರೆ. ಏನು ಲೋಪ ಎಂದರೆ, ನಾವು ಯೋಜನೆಗಳನ್ನು ತೆಗೆದುಕೊಳ್ಳಲು ಪ್ಲಾನ್ ಮತ್ತು ಅಂದಾಜುಗಳನ್ನು ತಯಾರು ಮಾಡುವುದರಲ್ಲಿ ನಿರ್ದಿಷ್ಟವಾದ ರೀತಿಯಲ್ಲಿ ಮಾಡುತ್ತಿಲ್ಲ. ಯಾವ ಯೋಜನೆಯನ್ನು ತೆಗೆದುಕೊಂಡರೂ ಕೂಡ ಸಮಯಕ್ಕೆ ತಕ್ಕಂತೆ ಮಾರ್ಪಾಟು ಆಗುತ್ತ ಹೋಗುತ್ತವೆ. ಒಂದು ಯೋಜನೆ ತಯಾರಾಗುವಾಗ ಅದರ ಅಂದಾಜು ಎಷ್ಟಿರುತ್ತದೆಯೋ ಅದು ಕಾರ್ಯಗತವಾಗುವುದರೊಳಗೆ ಅಂತರ ಹೆಚ್ಚಾಗಿರುತ್ತದೆ. ಹತ್ತು ಕೋಟಿ ರೂಪಾಯಿಗಳಿಗೆ ತಯಾರಾದ ಅಂದಾಜು ಕಾರ್ಯ ಪೂರ್ಣಗೊಳ್ಳುವುದರೊಳಗೆ 20 ಕೋಟಿ ಆಗಬಹುದು, 30 ಕೋಟಿ ಆಗಬಹುದು. ಈ ರೀತಿ ಲಂಗುಲಗಾಮು ಇಲ್ಲದ ರೀತಿಯಲ್ಲಿ ಆಗಾಗ ಅಂದಾಜುಗಳು ಪರಿವರ್ತನೆಯಾಗಿ ಬೆಳೆಯುತ್ತ ಹೊಗುತ್ತವೆ. ಇದರಿಂದ ನಮ್ಮ ದೇಶದ ಆರ್ಥಿಕಪರಿಸ್ಥಿತಿಯ ಮೇಲೆ ಕೆಟ್ಟ ಪರಿಣಾಮ ಆಗುತ್ತದೆ. ಈರೀತಿ ಆಗುತ್ತಿರುವುದನ್ನು ನೋಡಿದರೆ ನಮ್ಮ ದೇಶವನ್ನು ಯಾವ ದಿಕ್ಕಿಗೆ ತೆಗೆದುಕೊಂಡು ಹೋಗುತ್ತಾರೆಯೋ ಗೊತ್ತಾಗುವುದಿಲ್ಲ. ಸರ್ಕಾರದವರು ಯೋಚನೆ ಮಾಡತಕ್ಕ ಪವಿತ್ರವಾದ ಕರ್ತವ್ಯ ಇದಾಗಿದೆ ಎಂದು ನಾನು ಮೇಲಿಂದ ಮೇಲೆ ಹೇಳುತ್ತಿದ್ದೇನೆ.

18 ವರ್ಷಗಳಾದ ಮೇಲೆ ಇವತ್ತು ಯೋಜನೆಗಳು ಯಾವರೀತಿ ಕಾರ್ಯಗತವಾಗಬೇಕೋ ಆ ರೀತಿ ಆಗದೆ ಅದರಲ್ಲಿ ಲೋಪವಿದೆ, ಜಾಗ್ರತೆಯಾಗಿ ಲಾಭದಾಯಕವಾಗಿ ಪರಿಣಾಮವಾಗುತ್ತಿಲ್ಲ, ನಿರೀಕ್ಷಿಸಿದಷ್ಟು ಫಲವನ್ನು ಈ ಯೋಜನೆಗಳು ಕೊಡುತ್ತಿಲ್ಲ ಎಂದು ಹೇಳಿದ್ದಾರೆ. ಇದಕ್ಕೆ ಕಾರಣವೇನು, ಎಲ್ಲಿ ತಪ್ಪಿದೆ, ಇದಕ್ಕೆ ಯಾರು ಕಾರಣರು, ಯಾರು ಜವಾಬ್ದಾರರು ಎಂದು ನೀವು, ನಾವು ಸೇರಿ ಪತ್ತೆ ಮಾಡಬೇಕಾಗಿದೆ. ನಮ್ಮ ದೇಶದ ದೊಡ್ಡ ಹೊಣೆಗಾರಿಕೆಯನ್ನು ತಾವು ಹೊರಬೇಕಾಗಿದೆ. ಇದನ್ನು ನಾವು ಅನೇಕ ಸಾರಿ ಈ ಸಭೆಯಲ್ಲಿ ಹೇಳಿದ್ದೇವೆ.

ಶರಾವತಿ ಯೋಜನೆಯನ್ನು ಕಾರ್ಯಗತ ಮಾಡುವ ವಿಚಾರದಲ್ಲಿ ಹೆಚ್ಚಿಗೆ ಖರ್ಚಾಗುತ್ತಿದೆ ಎನ್ನುವ ವಿಷಯವನ್ನು ನಾವು ಈ ಸಭೆಯಲ್ಲಿ ಹೇಳಿದ್ದೇವೆ. ಇದನ್ನು ಕಾರ್ಯಗತ ಮಾಡುವಾಗ ಏನು ಪ್ಲಾನ್ ಮಾಡಿದ್ದರೋ, ಏನು ಅಂದಾಜು ಮಾಡಿದ್ದರೋ ಆ ಕೆಲಸ ಅಂತಿಮವಾಗಿ ಪೂರ್ಣವಾಗುವುದರೊಳಗಾಗಿ ಅದರ ವೆಚ್ಚ ಎಷ್ಟಾಗುತ್ತದೆಯೋ ಹೇಳುವುದಕ್ಕಾಗುವುದಿಲ್ಲ. ನಮ್ಮ ದೇಶದಲ್ಲಿ ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ಕಟ್ಟಬೇಕು, ಅದಕ್ಕೆ ಹಣವನ್ನು ಕೊಡಬೇಕು ಎನ್ನುವುದನ್ನು ಎಲ್ಲರೂ ಒಪ್ಪುತ್ತಾರೆ. ಆದರೆ 1959 ರಲ್ಲಿ ದೇಶದ ಮೇಲೆ ಇದ್ದಂಥ ಹೊರೆ ಏನು ಈಗ ಎಷ್ಟು ಹೊರೆ ಆಗಿದೆ ಎಂದರೆ ಒಂದಕ್ಕೆ ಎರಡರಷ್ಟು ತೆರಿಗೆಯನ್ನು ಜನ ಹೊರುತ್ತಿದ್ದಾರೆ. ಈ ರೀತಿ ತೆರಿಗೆಗಳಿಂದ ಬರುವ ಹಣ ಬಹಳ ಚೆನ್ನಾಗಿ ಖರ್ಚಾಗಬೇಕು. ಅದನ್ನು ಯಾವಾಗ ಅಲಕ್ಷ್ಯವಾದ ರೀತಿಯಲ್ಲಿ, ಪೋಲಾಗುವ ರೀತಿಯಲ್ಲಿ ಖರ್ಚುಮಾಡುತ್ತೇವೆಯೋ ಅದರ ತಪ್ಪು ನಿಮ್ಮದು ಮತ್ತು ನಮ್ಮದು ಎಲ್ಲರದೂ ಆಗಿದೆ. ಶರಾವತಿ ಯೋಜನೆಯಲ್ಲಿ ಹಣ ಪೋಲಾಗುವುದಕ್ಕೆ ಕಾರಣಕರ್ತರು ಯಾರು, ಅವರು ಯಾರೇ ಆಗಿರಲಿ ಅವರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು ಎಂದು ನಾವು ಹೇಳಿದಾಗ ಅದನ್ನು ಬಹಳ ಲಘುವಾಗಿ ತೆಗೆದುಕೊಂಡರು. ಕೋಟ್ಯಂತರ ರೂಪಾಯಿ ಖರ್ಚು ಆಗುವಂಥ ಯೋಜನೆಯಲ್ಲಿ ಸ್ವಲ್ಪ ಹಣ ದುರ್ವ್ಯಯ ಆದರೆ ಅದನ್ನು ದೊಡ್ಡದಾಗಿ ಮಾಡಬಾರದು ಎಂದು ಲಘುವಾದ ಧೋರಣೆಯನ್ನು ತೋರಿಸಿದರು. ಇದರಿಂದ ಮೈಸೂರು ದೇಶದಲ್ಲಿ ಯಾವುದೇ ಯೋಜನೆಯಾಗಲೀ ಯಾರೇ ಕಂಟ್ರಾಕ್ಟರಾಗಲೀ ಯಾರೇ

(ಶ್ರೀ ಎಸ್. ಶಿವಪ್ಪ)

ಇಂಜಿನಿಯರಾಗಲೀ ಅವರ ಮೇಲೆ ಕಟ್ಟುನಿಟ್ಟಾದ, ಬಿಗಿಮುಷ್ಟಿಯ ನೀತಿಯನ್ನು ಅನುಸರಿಸುವುದಕ್ಕೆ ಸಾಧ್ಯವೇ ಎಂಬುದನ್ನು ಯೋಚನೆ ಮಾಡಬೇಕು. ಮುಖ್ಯ ಮಂತ್ರಿಗಳ ಮೂಗಿನ ಕೆಳಗೆ ಇರುವ ಶರಾವತಿ ಯೋಜನೆಯಲ್ಲಿಯೇ ಈ ರೀತಿ ಆದರೆ ಬೇರೆ ಕಡೆಗಳಲ್ಲಿ ಯಾವ ರೀತಿ ಆಗಬಹುದು ಎನ್ನುವುದನ್ನು ಯೋಚನೆ ಮಾಡಬಹುದಾಗಿತ್ತು. ಅದಕ್ಕೋಸ್ಕರವಾಗಿ ನಾವು ಈ ಸಭೆಯಲ್ಲಿ ಎರಡು ವರ್ಷಗಳ ಹಿಂದೆ ಹೇಳಿದೆವು, ದಯವಿಟ್ಟು ನ್ಯಾಯಾಂಗ ವಿಚಾರಣೆಯನ್ನು ಮಾಡಿ, ನಿಷ್ಪಕ್ಷತವಾದ ಒಂದು ವಿಚಾರಣೆಯನ್ನು ಮಾಡಿ, ತಪ್ಪಿತಸ್ಥರು ಯಾರೇ ಆಗಿರಲಿ, ಎಷ್ಟೇ ದೊಡ್ಡವರಾಗಿರಲಿ ಅವರಿಗೆ ಶಿಕ್ಷೆಯನ್ನು ವಿಧಿಸಿ ಎಂದು. ಒಂದು ವೇಳೆ ಯಾರದೂ ತಪ್ಪಿಲ್ಲದೆ ಹೋದರೆ ದೇಶಕ್ಕೆ ಯಾರದೂ ತಪ್ಪಿಲ್ಲ, ಎಲ್ಲರೂ ನಿರಪರಾಧಿಗಳು ಎಂದು ತಿಳಿಯುತ್ತದೆ, ಜನತೆಯ ಮನಸ್ಸಿನಲ್ಲಿರುವ ಸಂಶಯ ನಿವಾರಣೆಯಾಗುತ್ತದೆ ಎಂದು ಹೇಳಿದೆವು. ಇದಲ್ಲದೆ ಅಲ್ಲಿ ನಡೆಯುವ ಕೆಲಸದ ಮೇಲೆ ಮತ್ತು ಸಿಬ್ಬಂದಿಯ ಮೇಲೆ ಒಂದು ಹಿಡಿತವನ್ನು ಇಟ್ಟುಕೊಳ್ಳುವುದಕ್ಕೆ ಅವಕಾಶ ಸಹ ಆಗುತ್ತದೆ ಎಂದು ಹೇಳಿದೆವು. ಬಿಗಿ ಇಲ್ಲದ ರೀತಿಯಲ್ಲಿ ವ್ಯವಹಾರಗಳು ನಡೆಯುತ್ತಿವೆ ಎನ್ನುವುದನ್ನು ಅವರೇ ಇವತ್ತು ಒಪ್ಪಿಕೊಳ್ಳುತ್ತಿದ್ದಾರೆ.

ನಾವು ಈಗ ಮೂರನೆಯ ಯೋಜನೆಯ ಕೊನೆ ವರ್ಷದಲ್ಲಿದ್ದೇವೆ. ಈ ವರ್ಷ ನಮಗೆ ಬೇಕಾಗಿರತಕ್ಕ 50-60 ಕೋಟಿ ರೂಪಾಯಿ ಪೈಕಿ ಕೇಂದ್ರ ಸರ್ಕಾರದವರು ಕೊಡತಕ್ಕ ಹಣ ಕೇವಲ 34 ಕೋಟಿ ರೂಪಾಯಿಗಳು. ಮೂರನೆಯ ಯೋಜನೆಯ ನಾಲ್ಕು ವರ್ಷಗಳಲ್ಲಿ ಕೇಂದ್ರ ಸರ್ಕಾರದವರು ಏನು ಕೊಡಬೇಕಾಗಿತ್ತೋ ಅದನ್ನು ಕೊಟ್ಟು ಅವರ ಜವಾಬ್ದಾರಿಯನ್ನು ಪೂರೈಸಿಕೊಂಡು ಬಂದಿದ್ದಾರೆ. ಕೊನೇ ವರ್ಷದಲ್ಲಿ ಅವರು 34 ಕೋಟಿರೂಪಾಯಿಗಳನ್ನು ಕೊಡುತ್ತಾರೆ ಮತ್ತು ನಮ್ಮ ಸರ್ಕಾರದವರು 14 ಕೋಟಿ ರೂಪಾಯಿಗಳನ್ನು ಕೊಡಬೇಕು. ಇನ್ನುಳಿದ ಸುಮಾರು 8 ಕೋಟಿ ರೂಪಾಯಿಗಳನ್ನು ಯಾವ ರೀತಿಯಲ್ಲಿ ಕೊಡಬೇಕೆಂಬುದನ್ನು ಮುಂದೆ ನೋಡೋಣ ಎಂದು ಹೇಳಿದ್ದಾರೆ. ಅದರಲ್ಲಿ 14 ಕೋಟಿ ರೂಪಾಯಿಗಳನ್ನು ಯಾವ ರೀತಿ ಒದಗಿಸಿಕೊಡುತ್ತೇವೆಂದೂ ಹೇಳಿದ್ದಾರೆ. ಮುಂದೆ ಭೂಕಂದಾಯದಿಂದ ನಾಲ್ಕೈದು ಕೋಟಿ ರೂಪಾಯಿ ಬರಬಹುದು, ವಾಟರ್ ಸೆಸ್ ಇತ್ಯಾದಿಗಳಿಂದ ಗಳಿಸಬಹುದು ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಕೊನೆಗೆ ಏನಾಗುತ್ತದೆಂದರೆ ಮೂರನೆಯ ಯೋಜನೆಯ ಕೊನೆ ವರ್ಷ 50-60 ಕೋಟಿ ರೂಪಾಯಿ ಬೇಕಾಗಿರುವುದಕ್ಕೆ ಯಾವ ರೀತಿ ಕಾರ್ಯಗತ ಮಾಡಬೇಕು ಎನ್ನುವುದಕ್ಕೆ ದಿಕ್ಕು ತೋಚದ ರೀತಿಯಲ್ಲಿ ಕೇಂದ್ರದವರ ಕಡೆಗೆ ಕೈ ತೋರಿಸಿ, ಅವರ ಹಣದ ಭರವಸೆಯಿಂದ ನಾವು ಇದನ್ನು ಪ್ರಾರಂಭಿಸಿದೆವು ಎಂದು ಹೇಳಿ ಜಾರಿಕೊಳ್ಳತಕ್ಕ ನೀತಿಯನ್ನು ಸಹ ಹೇಳಿದ್ದಾರೆ. ಇದು ನಮ್ಮ ಅಶಕ್ತತೆಯೋ ಅಥವಾ ನಮ್ಮ ದೇಶದ ಹಣಕಾಸಿನ ದುಸ್ಥಿತಿಯೋ ಎಂದು ನೋಡಬೇಕು. ಕೇಂದ್ರದವರು ಕೊಡಬೇಕಾದ ಹಣವನ್ನು ಎಲ್ಲರೂ ಸೇರಿ ಕೇಳೋಣ. ಮೈಸೂರು ದೇಶಕ್ಕೆ ಕೇಂದ್ರದಿಂದ ಏನೇನು ಯಾವ ರೀತಿಯಿಂದ ಸಲ್ಲಬೇಕೋ ಅದನ್ನು ಅವರು ಕೊಡಲೇ ಕೊಡಬೇಕಾಗಿದೆ. ಬೇರೆ ಪ್ರಾಂತದವರಿಗೆ ಜಾಸ್ತಿ ಹಣವನ್ನು ಕೊಟ್ಟು ಮೈಸೂರು ರಾಜ್ಯಕ್ಕೆ ಕಡಮೆ ಹಣವನ್ನು ಕೊಟ್ಟರೆ ಕೇಂದ್ರದಲ್ಲಿರತಕ್ಕ ಪಕ್ಷಪಾತವನ್ನು ನಾವು ದಿಟ್ಟತನದಿಂದ ಎದುರಿಸಬೇಕಾಗಿದೆ. ಕೇಂದ್ರದವರು ಅಕ್ಕಪಕ್ಕದ ಪ್ರಾಂತಗಳಿಗೆ ಕೊಡುವುದಕ್ಕಿಂತ ಮೈಸೂರಿಗೆ ಕಡಮೆ ಕೊಡಲು ಕಾರಣವೇನು ಎನ್ನುವುದನ್ನು ಕಂಡುಹಿಡಿಯಬೇಕಾಗಿದೆ. ಮೈಸೂರು ದೇಶ ಯಾವ ರೀತಿ ಪ್ರಗತಿಯನ್ನು ಹೊಂದಬೇಕಾಗಿತ್ತೋ ಆ ಪ್ರಗತಿಯನ್ನು ಹೊಂದಿಲ್ಲ. ಮದ್ರಾಸ್ ಸರ್ಕಾರಕ್ಕಾಗಲೀ, ಆಂಧ್ರಕ್ಕಾಗಲೀ ಕೇಂದ್ರ ಸರ್ಕಾರದಿಂದ ಹೆಚ್ಚು ಪ್ರಮಾಣದ ಸಹಾಯ ಬರುತ್ತಿದ್ದು ನಮ್ಮ ರಾಜ್ಯಕ್ಕೆ ಕಡಮೆ ಬರುವುದಕ್ಕೆ ಕಾರಣವೇನೆಂಬುದನ್ನು ಕಂಡುಹಿಡಿಯಬೇಕಾಗಿದೆ. ಇದಕ್ಕೆ ಸರ್ಕಾರದ ಅಲಕ್ಷ್ಯ ನೀತಿ, ಅನಾಸಕ್ತಿ ಎಂದು ನಾನು ಹೇಳಬೇಕಾಗಿದೆ. ಕೇಂದ್ರದಲ್ಲಿ ಸರ್ಕಾರ ಪ್ರಭಾವವನ್ನು ಬೀರಿ, ನಮ್ಮ ರಾಜ್ಯಕ್ಕೆ ಕೊಟ್ಟ ಹಣವನ್ನು ಸರಿಯಾಗಿ ವಿಚಕ್ಷಣೆಯಿಂದ ಖರ್ಚು ಮಾಡಿದ್ದೇವೆ, ಇನ್ನೂ ಹೆಚ್ಚಿನ ಹಣವನ್ನು ಕೊಡಬೇಕು ಎಂದು ಕೇಳತಕ್ಕ 'ಮಾರಲ್ ಕರೇಜ್' ಇಲ್ಲ, ಧೈರ್ಯವಿಲ್ಲ. ಕೇಂದ್ರದಲ್ಲಿ ಯಾವ ಮೊರೆ ಹಾಕಿಕೊಂಡು ಹೋಗಿ ಕೇಳಬೇಕು ಎಂದು ಹಿಂತೆಗೆಯತಕ್ಕದ್ದು. ಮೈಸೂರಿಗೆ ಈಗ ಬೇಕಾದದ್ದು 'ಡೈನಾಮಿಕ್ ಪಾಲಿಸಿ' ಮೈಸೂರು ಸರ್ಕಾರ ದೇಶದಲ್ಲಿ ಹೆಚ್ಚು ಸಂಪನ್ಮೂಲಗಳನ್ನು ಬೆಳೆಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಈ ಧೃಡ ನಿರ್ಧಾರಕ್ಕೆ ನಮ್ಮ ಸರ್ಕಾರ ಬರಬೇಕಾಗಿದೆ. ನಾವು ಬಹಳ ಅಪಾಯ ಸ್ಥಿತಿಯಲ್ಲಿದ್ದೇವೆ, ನಮ್ಮ ಸಾಲದ ಹೊರೆ ದಿನೇ ದಿನೇ ಏರುತ್ತಿದೆ. ಸಾಲವನ್ನು ತೆಗೆದುಕೊಂಡು ಹಣವನ್ನು ಒದಗಿಸುತ್ತಿದ್ದಾರೆ. ಇದು ಮುಂದೆ ನಮ್ಮ ಮಕ್ಕಳ ಮೇಲೆ ಸಾಲದ ಹೊರೆಯನ್ನು ಹೊರಿಸತಕ್ಕ ನೀತಿ ಆಗಿದೆ. ನೂರಾರು ಕೋಟಿ ರೂಪಾಯಿಗಳನ್ನು ಸಾಲಮಾಡಿರುವ ಮೈಸೂರು ದೇಶ ಈ ಆರ್ಥಿಕ ನೀತಿಯ ಬಗ್ಗೆ ಕಟ್ಟುನಿಟ್ಟಾದ ಧೋರಣೆ ತೆಗೆದುಕೊಳ್ಳದೇ

ಹೋದರೆ ನಮ್ಮ ಪರಿಸ್ಥಿತಿ ಇನ್ನೂ ಚಿಂತಾಜನಕವಾಗುತ್ತದೆ. ಸರ್ಕಾರದವರು ಈವೊತ್ತು ಒಳ್ಳೆಯ ಕೆಲಸ ಮಾಡಬೇಕಾದರೂ ಅವರಲ್ಲಿ ದುಡ್ಡು ಇಲ್ಲವೆಂದು ಹೇಳುತ್ತಾರೆ. ಇನ್ನು ವಿದ್ಯಾಭ್ಯಾಸಕ್ಕಾಗಿ ಈಗ ಇವರು ಹಣವನ್ನು ಖರ್ಚು ಮಾಡದಿರುವ ರೀತಿ ನೀತಿ ನೋಡಿದರೆ ವೆಂಕಟೇಶ್ವರ ಯೂನಿವರ್ಸಿಟಿಯನ್ನು ಸ್ಥಾಪನೆಮಾಡಿದ ಹಾಗೆ ಬೆಂಗಳೂರು ಯೂನಿವರ್ಸಿಟಿಯನ್ನು ಸ್ಥಾಪನೆ ಮಾಡಿ ಕೇಂದ್ರಸರ್ಕಾರದವರನ್ನು ದುಡ್ಡುಬೇಕು ಎಂದು ಕೇಳಿದ್ದೇವೆಂದು ಹೇಳುತ್ತಿದ್ದಾರೆ. ಇವರು 18 ಲಕ್ಷ ರೂಪಾಯಿಗಳನ್ನು ಈ ಬಾಬಿಗೆ ಒದಗಿಸಿದ್ದಾರೆ. ಬೆಂಗಳೂರು ಯೂನಿವರ್ಸಿಟಿಯಲ್ಲಿ ಆಗುವ ಕೆಲಸಕ್ಕೆ ಕೇವಲ 18 ಲಕ್ಷ ರೂಪಾಯಿಗಳಷ್ಟು ಸಾಕು ಎಂದರೆ ಹೇಗೆ? ಫೆಡರಲ್ ಯೂನಿವರ್ಸಿಟಿ.....

2-30 P. M.

ಶ್ರೀ ಎಸ್. ಆರ್. ಕಂಠಿ.—18 ಲಕ್ಷ ರೂಪಾಯಿಗಳನ್ನು ಮೊದಲು ಪ್ರಾರಂಭದಲ್ಲಿ ಖರ್ಚು ಮಾಡಿದ್ದು. 16 ವರ್ಷಗಳ ಹಿಂದೆ ಕರ್ಣಾಟಕ ಯೂನಿವರ್ಸಿಟಿ ಪ್ರಾರಂಭವಾದಾಗಲೂ 18 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೆವು. ಮೈಸೂರು ಯೂನಿವರ್ಸಿಟಿಗೆ 29 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಈ ವಿಚಾರವನ್ನು ಸ್ವಲ್ಪ ನೋಡಬೇಕು.

ಶ್ರೀ ಎಸ್. ಶಿವಪ್ಪ.—ಬಹಳ ಕಾಲದಿಂದಲೂ ನಡೆದುಕೊಂಡು ಬಂದಿರತಕ್ಕ ಮೈಸೂರು ಯೂನಿವರ್ಸಿಟಿಗೆ 29 ಲಕ್ಷ. ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆದರೆ ಬೆಂಗಳೂರು ಯೂನಿವರ್ಸಿಟಿ ಹೊಸದಾಗಿ ಸ್ಥಾಪನೆಯಾಗಿದೆ. ಬೆಂಗಳೂರು ಯೂನಿವರ್ಸಿಟಿಯಲ್ಲಿ ಮೈಸೂರು ಯೂನಿವರ್ಸಿಟಿಯ ಅರ್ಧದಷ್ಟು ವಿದ್ಯಾರ್ಥಿಗಳು ಇದ್ದಾರೆ. ಮೈಸೂರು ಯೂನಿವರ್ಸಿಟಿಯಲ್ಲಿ 50 ಸಾವಿರ ವಿದ್ಯಾರ್ಥಿಗಳು ಇದ್ದಾರೆ ಬೆಂಗಳೂರು ಯೂನಿವರ್ಸಿಟಿಯಲ್ಲಿ ಸುಮಾರು 20-25 ಸಾವಿರ ವಿದ್ಯಾರ್ಥಿಗಳು ಇದ್ದಾರೆ. ಎಂದು ಹೇಳಬಹುದು. ಯಾವಾಗಲೂ ಹೊಸದಾಗಿ ಪ್ರಾರಂಭವಾಗತಕ್ಕ ಯೂನಿವರ್ಸಿಟಿಗೆ ಖರ್ಚು ಜಾಸ್ತಿ ಇರುತ್ತದೆ. ಹಣಕಾಸಿನ ಅಭಾವ ಇವರಿಗೆ ಇರಬಹುದು ಇವರ ಈಗಿನ ಹಣಕಾಸಿನ ಪರಿಸ್ಥಿತಿಯಿಂದ ಇವರು ಏನು ಮಾಡುವುದಕ್ಕೂ ಸಾಧ್ಯವಿಲ್ಲ. ಕೇಂದ್ರ ಸರ್ಕಾರದಿಂದ ಹಣ ಸಹಾಯ ಪಡೆದು ಇವರು ಬೆಂಗಳೂರು ಯೂನಿವರ್ಸಿಟಿಗೆ ಸೌಕರ್ಯವನ್ನು ಎಲ್ಲಾ ವಿಧದಲ್ಲೂ ಕಲ್ಪಿಸಿ ಕೊಡಬೇಕು. ದೆಹಲಿ ವಿಶ್ವವಿದ್ಯಾನಿಲಯದ ಮಾದರಿಯಲ್ಲಿ ಇದು ಆಗಬೇಕು ದೆಹಲಿಯ ಯೂನಿವರ್ಸಿಟಿಗೆ ಕೇಂದ್ರ ಸರ್ಕಾರದವರು ಎಷ್ಟು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೋ ಅದೇ ಮಾದರಿಯಲ್ಲಿ ಫೆಡರಲ್ ಯೂನಿವರ್ಸಿಟಿಯ ಹಾಗೆ ಇವರೂ ಸಹ ಇಲ್ಲಿ ಖರ್ಚು ಮಾಡಬೇಕು. ಅದಕ್ಕಾಗಿ ಇವರು ಕೇಂದ್ರ ಸರ್ಕಾರದಲ್ಲಿ ಒತ್ತಾಯಮಾಡಿ ಕೇವಲ 18 ಲಕ್ಷ ರೂಪಾಯಿಗಳಿಂದ ಇದು ಸಾಧ್ಯವಾಗುವುದಿಲ್ಲ ಎಂದು ಹೇಳಿ, ಸುಮಾರು ಒಂದು ಕೋಟಿ ರೂಪಾಯಿಗಳ ಹಣ ಸಹಾಯ ತಂದರೆ ಆಗ ಫೆಡರಲ್ ಯೂನಿವರ್ಸಿಟಿ ಮಾದರಿಯ ಹಾಗೆ ಬೆಂಗಳೂರು ವಿಶ್ವವಿದ್ಯಾನಿಲಯವನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇವರು ಈಗ ಇಲ್ಲ ಏನೊಂದು ವಿಶ್ವವಿದ್ಯಾನಿಲಯವನ್ನು ಸ್ಥಾಪನೆಮಾಡಿದ್ದಾರೋ ಅದರಿಂದ ಹೆಚ್ಚಿನ ಪ್ರಯೋಜನವನ್ನು ಹೊಂದುವುದಕ್ಕೆ ಸಾಧ್ಯವಾಗುವುದಿಲ್ಲ.

ಇನ್ನು ಡೆವಲಪ್‌ಮೆಂಟ್ ಆಕ್ಟಿವಿಟೀಸ್‌ನಲ್ಲಿ 76 ಕೋಟಿ ರೂಪಾಯಿಗಳನ್ನು ಬೇರೆ ಬೇರೆ ಬಾಬುಗಳಿಗೆ ಒದಗಿಸಲಾಗಿದೆ ಎಂಬುದಾಗಿ ಹೇಳಿರುತ್ತಾರೆ. ಇದರಲ್ಲಿ ಕೇವಲ ಒಂದೆರಡು ಇಲಾಖೆಗಳು ಅಂದರೆ, ಮುಖ್ಯವಾದ ಇಲಾಖೆಗಳ ಬಗ್ಗೆ ನಾನು ಕೆಲವು ಅಂಶಗಳನ್ನು ಹೇಳಬಯಸುತ್ತೇನೆ. ಡೆವಲಪ್‌ಮೆಂಟ್ ಇಲಾಖೆಗಳಿಗೆ 1959-60ರಲ್ಲಿ ಏನು ಹಣವನ್ನು ಕೊಟ್ಟಿದ್ದರೋ ಅದರ ಎರಡರಷ್ಟು ಈಗ ಕೊಟ್ಟಿದ್ದಾರೆ. ಹಿಂದೆ ಎಲ್ಲಾ ಇಲಾಖೆಗಳಿಗೂ ಸುಮಾರು 47 ಕೋಟಿ ರೂಪಾಯಿಗಳ ವರೆಗೆ ಖರ್ಚಾಗುತ್ತಿತ್ತು. ಇವತ್ತಿನ ದಿವಸ 70 ಕೋಟಿ ರೂಪಾಯಿಗಳು ಖರ್ಚಾಗುತ್ತಿವೆ. ಎರಡರಷ್ಟು ಹಣವನ್ನು ಈಗ ಖರ್ಚುಮಾಡುತ್ತಿದ್ದಾರೆ. ಈ ಬಾಬುಗಳಿಂದ ಮೈಸೂರು ದೇಶಕ್ಕೆ ಎಷ್ಟರಮಟ್ಟಿಗೆ ಪ್ರಯೋಜನವಾಗಿದೆಯೆಂಬುದನ್ನು ನೋಡಿದರೆ ಜನತೆಗೆ ಏನು ಸೌಕರ್ಯಗಳೂ ಆಗಿಲ್ಲ. ಇನ್ನು ಕೊ-ಆಪರೇಟಿವ್ ಇಲಾಖೆಯಲ್ಲೂ ಹಣ ಖರ್ಚುಮಾಡಿದ್ದಾರೆ. ಇದು ಬಂದ ಮೇಲೆ ಬಡ ರೈತರಿಗೆ ಏನು ಅನುಕೂಲಗಳಾಗಿವೆ? ಈ ಕೊ-ಆಪರೇಟಿವ್ ಇಲಾಖೆ ಬಂದ ಮೇಲೆ ಇವರ ಪಕ್ಷದ ಅನೇಕ ಮಿತ್ರರು ಸೊಸೈಟಿಗಳನ್ನು ಮಾಡಿ ಯಾವುದಾದರೂ ಒಂದು ರೀತಿಯಲ್ಲಿ ಈ ಸೊಸೈಟಿಗಳ ಹಣವನ್ನು ಕಳೆಯಬೇಕೆಂಬ ಮನೋಭಾವ ಉಳ್ಳವರಾಗಿದ್ದಾರೆ. ಅಂತಹ ಮನೋಭಾವ ಇತ್ತೀಚೆಗೆ ಅನೇಕ ಕಡೆಗಳಲ್ಲಿ ಕಂಡು ಬಂದಿದೆ. ಕೊ-ಆಪರೇಟಿವ್ ಇಂಡಸ್ಟ್ರೀಸನ್ನು ಬೆಳೆಸಿ ಸಂಪನ್ಮೂಲವನ್ನು ಜಾಸ್ತಿಮಾಡಬೇಕೆಂಬುದು ಈಗಿನ ಒಂದು ತತ್ವ. ಅದನ್ನು ಇವರು ಮಾಡಲಿಲ್ಲ. ಇವತ್ತಿನ ದಿವಸ ಇವರು ಸೊಸೈಟಿಗಳನ್ನು ಮಾಡಿರಬಹುದು. ಅವಕ್ಕೆ ಸಬ್ಸಿಡಿ ಗ್ರಾಂಟು, ಸಾಲ-

(ಶ್ರೀ ಎಸ್. ಶಿವಪ್ಪ)

ಹೀಗೆ ಅನೇಕ ವಿಧವಾದ ಸೌಕರ್ಯಗಳನ್ನು ಒದಗಿಸಿರಬಹುದು. ಈರೀತಿ ಮಾಡಿ ಕೆಲವು ಜನಗಳಿಗೆ ಒಂದು ರೀತಿಯಾದ ಹುದ್ದೆಗಳನ್ನು ಕೊಟ್ಟಿದ್ದಾರೆ. ಈ ದೇಶದಲ್ಲಿರತಕ್ಕ ದೊಡ್ಡ ದೊಡ್ಡ (ಗೂಳಿ) ಗಳಿಗೆ ಈ ಕೊ-ಆಪರೇಟಿವ್ ಇಲಾಖೆ ಒಂದು ಹುಲ್ಲುಗಾವಲು ಆಗಿದೆ. ಅದಕ್ಕೋಸ್ಕರವೇ ಸಹಕಾರ ಇಲಾಖೆ ಹಾಗೂ ಅನೇಕ ಮಾದರಿ ಕೈಗಾರಿಕೆಗಳು ಹುಲ್ಲುಗಾವಲುಗಳಾಗಿವೆ, ಈಗಿನ 76 ಕೋಟಿ ರೂಪಾಯಿಗಳ ಯೋಜನೆಯೂ ಕೂಡ ಅಂತಹ ಹುಲ್ಲುಗಾವಲಿನ ಕೆಲವು ಜನ ಗೂಳಿಗಳಿಗೆ ನಿರ್ಮಾಣ ವಾಗಿದೆ ಎಂಬ ಒಂದು ಮನೋಭಾವದಿಂದ ಇವತ್ತಿನ ದಿವಸ ದೇಶದಲ್ಲಿ ನಮ್ಮ ಎಲ್ಲಾ ಯೋಜನೆಗಳು ಕಾರ್ಯಗತ ವಾಗದೆ ದೇಶಕ್ಕೆ ಒಂದು ದೊಡ್ಡ ಪೆಟ್ಟು ಆಗಿದೆ. ಯಾರು ಉತ್ಸಾಹ ದಿಂದ ಕೆಲಸಮಾಡಬೇಕೆಂದು ಮುಂದ ಬರುತ್ತಾರೋ ಅಂತಹವರಿಗೆ ಯಾವ ವರ್ಗದಲ್ಲೂ ಮನ್ನಣೆ ಇಲ್ಲ. ಈ ವಿಚಾರವನ್ನು ಇವರು ತಿಳಿದುಕೊಳ್ಳಬೇಕು. ಅದಕ್ಕೆ ಕಾರಣ ಇವರ ಆಡಳಿತದ ಪಕ್ಷಪಾತ ನೀತಿ ಎಂಬುದಾಗಿ ಹೇಳಬಹುದು. ಕೊ-ಆಪರೇಟಿವ್ ಇಲಾಖೆಯೂ ಹಾಗೆಯೇ ಇದೆ, ಲೋಕೋಪಯೋಗಿ ಶಾಖೆ, ಎನ್. ಇ. ಎಸ್. ಶಾಖೆ, ಕೈಗಾರಿಕೆ ಇಲಾಖೆ ಇವೆಲ್ಲವೂ ಹಾಗೆಯೇ ಇವೆ. ಇವತ್ತು ಯಾವ ಇಲಾಖೆಗೆ ಹೋದರೂ ಪಕ್ಷಪಾತ ದೃಷ್ಟಿಯೆಂಬುದು ತಾಂಡವವಾಡುತ್ತಿದೆ. ಇದರಿಂದ ನಿಷ್ಠಾವಂತ ವ್ಯಕ್ತಿಗಳು ಅಧಿಕಾರಕ್ಕೆ ಯಾರೇ ಬರಲಿ ಅವರಿಗೆ ಕೊಡಬೇಕಾದಂಥ ರಕ್ಷಣೆ ದೊರಕುತ್ತಾ ಇಲ್ಲ, ಅಲ್ಲದೆ ಅವರಿಗೆ ತಲುಪ ಬೇಕಾದ ಸೌಕರ್ಯಗಳು ನಿಜವಾಗಿ ತಲುಪುತ್ತಾ ಇಲ್ಲ. ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ದೊಡ್ಡ ದೊಡ್ಡ ಯೋಜನೆಗಳು ಕಾರ್ಯಗತವಾಗುವ ಕಾಲದಲ್ಲಿ ಟಾನಿನಲ್ಲಿ ಯಾವ ರೀತಿ ಅವು ವಿಲೇವಾರಿ ಯಾಗುತ್ತಿದೆಂಬುದನ್ನು ನೋಡಿದರೆ ಯಾವನು ಶ್ರದ್ಧೆ ಯಿಂದ ಕೆಲಸ ಮಾಡುತ್ತಾನೋ ಅಂತಹವನಿಗೆ ಯೋಜನಾ ಕೆಲಸಗಳನ್ನು ಕೊಡುವುದಿಲ್ಲ. ಇವತ್ತಿನ ದಿವಸ ನಿಷ್ಠಾವಂತರಾದ ಅಧಿಕಾರಿಗಳು ಧೈರ್ಯವಾಗಿ ಬಂದು ಕೆಲಸ ಮಾಡಬೇಕು. ಕೆಲವು ಅಧಿಕಾರಿಗಳಲ್ಲಿ ದರ್ಪ ಮನೋಭಾವ ಬೆಳೆದು ಬಂದಿದೆ. ಈ ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಹಾಗೂ ಸಹಕಾರ ಇಲಾಖೆಗಳಲ್ಲಿ ಅನೇಕ ಅಧಿಕಾರಿಗಳು ಕಂಟ್ರಾಕ್ಟರುಗಳ ಕೈಗೆ ಒಳಗಾಗಿದ್ದಾರೆ. ಆ ಕಂಟ್ರಾಕ್ಟರುಗಳು ಗೂಳಿಗಳ ಹಾಗೆ ಬೆಳೆದು ಬಿಟ್ಟಿದ್ದಾರೆ. ಅನೇಕ ಸೊಸೈಟಿಗಳಲ್ಲಿ ಕೊಟ್ಟಂಥ ಹಣವೆಲ್ಲ ಬಡ ಜನರ ಹೆಬ್ಬೆರಳು ಗುರ್ತುಹಾಕಿಸಿಕೊಂಡು ಲಕ್ಷಾಂತರ ರೂಪಾಯಿಗಳನ್ನು ಮೋಸ ಮಾಡಿರತಕ್ಕ ನಿದರ್ಶನಗಳು ನಮ್ಮಲ್ಲಿ ಅನೇಕವಿವೆ. ಇದರಲ್ಲಿ ಯಾವ ಒಂದು ಪವಿತ್ರವಾದ ಉದ್ದೇಶ ಸಾಧನೆಯಾಗಬೇಕೋ ಅದು ಸಾಧನೆಯಾಗುತ್ತಾ ಇಲ್ಲ ಅನೇಕ ವೇಳೆ ಕೆಲವು ಸೊಸೈಟಿ ಗಳಲ್ಲಿರತಕ್ಕ ಕಾರ್ಯದರ್ಶಿಗಳು ಏನು ಹೇಳುತ್ತಾರೆಂದರೆ, ನಮ್ಮ ಮೇಲೆ ಏನೂ ಕ್ರಮ ತೆಗೆದು ಕೊಳ್ಳುವುದಕ್ಕಾಗುವುದಿಲ್ಲ, ಯಾರೂ ನಮ್ಮನ್ನು ಕೇಳುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತಾರೆ. ಅಂತಹ ಪ್ರಭಾವಶಾಲಿಗಳಾದ ಸೆಕ್ರೆಟರಿಗಳು ಈಗ ಸೊಸೈಟಿಗಳಲ್ಲಿದ್ದಾರೆ. ಅಂತಹವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಇನ್ನು ಅಸಿಸ್ಟೆಂಟ್ ರಿಜಿಸ್ಟ್ರಾರ್ ಅವರು ಒಂದು ವೇಳೆ ಅಂತಹವನನ್ನು ಟ್ರಾನ್ಸ್‌ಫರ್ ಮಾಡಿದರೆ ಅವನು ವಾಪಸೆ ಮೇಲೆ ಕೈಹಾಕಿ ಪುನಃ ಬರುತ್ತಾನೆ. ಇನ್ನು ಕೆಲವು ಕಡೆಗಳಲ್ಲಿ ಒಬ್ಬ ತಹಸೀಲ್‌ದಾರ್‌ನಾಗಿರುವವನು ಯಾವ ಒಬ್ಬ ನಿಷ್ಠಾವಂತ ಅಧಿಕಾರಿಗೆ ಒಳ್ಳೆಯ ಕೆಲಸ ಮಾಡುವುದಕ್ಕೆ ಬಿಡುವುದಿಲ್ಲ. ಇವತ್ತಿನ ದಿವಸ ಕೆಲವು ಇಲಾಖೆಗಳಲ್ಲಿ ಇಂತಹ ಒಂದು ಮನೋಭಾವ ಬೆಳೆದು ಬರುತ್ತಿದೆ. ಆಡಳಿತದಲ್ಲಿ ಇವರು ದಿನಚರಿಯ ಕಾರ್ಯಕ್ರಮ ಗಳಲ್ಲಿ ಕೈಹಾಕುವ ರೀತಿ ನೀತಿಯಿಂದ ಏನಾಗಿದೆಯೆಂದರೆ, ಕಾನೂನು ಕಟ್ಟಲೆಗಳಿಗೆ ಬೆಲೆಯಿಲ್ಲ. ಕಾನೂನುಗಳಿಗೆ 2 ಕಣ್ಣುಗಳಿವೆ. ಒಂದು ಅಧಿಕಾರವರ್ಗ ಕಾನೂನು ರಿತ್ಯಾ ಅವರ ಕೆಲಸಗಳನ್ನು ನಿರ್ವಹಿಸುವುದು, ಮತ್ತೊಂದು ಯಾವ ರಾಜಕೀಯವಿಲ್ಲದೆ ಬಡ ಜನರಾದವರು ತಮ್ಮ ಬಡತನವನ್ನು ಮುಂದಿಟ್ಟು ಕೊಂಡು ಹೋಗುವಾಗ ಅವರಿಗೆ ರಕ್ಷಣೆಕೊಡುವಂಥಾದ್ದು. ಆದರೆ ಈ ದೇಶದಲ್ಲಿ ಸರ್ಕಾರ ಮಾಡತಕ್ಕ ಕಾನೂನುಗಳಿಂದ ಸರ್ಕಾರಕ್ಕೆ ನಿಜವಾಗಿ ಮಾನ್ಯತೆ ದೊರೆಯುತ್ತಾ ಇಲ್ಲ. ಯಾವ ಇಲಾಖೆಗೆ ಹೋದರೂ ಸಹ ಪಕ್ಷಪಾತ ನೀತಿಯೆಂಬುದೇ ಇದೆ. ಕೆಲಸಗಳು ಸಾಮಾನ್ಯವಾಗಿ, ಅದರಲ್ಲೂ ಪರಿಪಕ್ವವಾಗಿ ಆಗತಕ್ಕ ಕಾರ್ಯಾಚರಣೆಯಲ್ಲಿ ಯಾವಾಗಲೂ ಒಂದು ದೊಡ್ಡ ಆತಂಕ ಅಥವಾ ಒಂದು ದೊಡ್ಡ ಪೆಟ್ಟು ಇದ್ದೇ ಇರುತ್ತದೆಂದು ನಾನು ತಮ್ಮ ಮುಂದೆ ಹೇಳಬೇಕಾಗಿದೆ. ನಿಷ್ಠಾವಂತ ನೌಕರರಿಗೆ ರಕ್ಷಣೆಯಿಲ್ಲ ಹಾಗೂ ಪ್ರೋತ್ಸಾಹವಿಲ್ಲ. ಹಿಂದೆ ಬ್ರಿಟಿಷರ ಕಾಲದಲ್ಲಿ ಬ್ಯೂರೋ ಕ್ರಸಿ ಸರ್ಕಾರವಿತ್ತು. ಆಗಿನ ಕಾಲದಲ್ಲಿ ಜನಸಾಮಾನ್ಯರಿಗೆ ನ್ಯಾಯವಾದ ಸೌಲಭ್ಯಗಳು ದೊರೆಯುತ್ತಿದ್ದವು. ಆಗಿನ ಕಾಲದ ಅಧಿಕಾರಶಾಹಿ ಹೋದರೂ ಅದಕ್ಕಿಂತ ಅಪಾಯಕಾರಿಯಾದ ಶಕ್ತಿಯೊಂದು ಈಗ ಬೆಳೆದು ಬಂದಿದೆ. ಅದರಿಂದ ಸಾಮಾನ್ಯ ಜನತೆಗೆ ಪ್ರಜಾಪ್ರಭುತ್ವವನ್ನು ಬೆಳೆಸಲಿಕ್ಕೆ ದೊಡ್ಡ ಆತಂಕವಾಗಿದೆ ಎಂದು ಹೇಳಬಹುದು. ಇವರು ತಮ್ಮ ಪಕ್ಷಕ್ಕೆ ಸೇರಿದಂಥ ಜನ ಯಾವ ತಾಲ್ಲೂಕಿನಲ್ಲಿಯೇ ಇರಲಿ ಅಲ್ಲಿ ಅವರೇ ದೊಡ್ಡ ಮಂತ್ರಿಗಳು

ಅವರದೇ ಸರ್ಕಾರ, ಇಡೀ ದೇಶವೇ ಅವರದು ಎಂದು ಹೇಳುವ ಒಂದು ದರ್ಪ ಅವರಿಗೆ ಬರುತ್ತಿದೆ. ಅಧಿಕಾರಿಗಳೆಲ್ಲರೂ ತಮ್ಮ ಆಳುಗಳು ಎಂದು ಹೇಳತಕ್ಕ ಭಾವನೆ ಬರುತ್ತಿದೆ. ಆ ರೀತಿ ಹೇಳಿಕೊಂಡು ಕೆಲಸ ಮಾಡುವುದನ್ನು ತಪ್ಪಿಸಬೇಕು ಆದರೆ ಅಂತಹವರನ್ನು ಮುಟ್ಟತಕ್ಕ ಶಕ್ತಿ ಇವರಿಗೆ ಯಾರಿಗೂ ಇಲ್ಲ. ಇವರ ಹಿಂಬಾಲಕರೇ ಬಂದು ಇವರ ಮೇಲೆ ಚಾಡಿ ಮಾತು ಹೇಳುತ್ತಾರೆ. ಇವರ ಕಿವಿಯನ್ನು ಮುರಿಯುತ್ತಾರೆ. ಇವರನ್ನು ನಂಬಿಸಿ ಕೆಲಸ ಮಾಡುತ್ತಾರೆ. ಇವರ ವಿಚಾರವನ್ನು ಬೇರೆ ಕಡೆ ಹೋಗಿ ಹೊಗಳುತ್ತಾರೆ. ಆದರೆ ವಿರೋಧ ಪಕ್ಷದ ಸದಸ್ಯರೂ ಯಾರೂ ಇವರ ಮುಂದೆ ಬಂದು ಆ ರೀತಿ ಹೇಳುತ್ತಿಲ್ಲ.

ಶ್ರೀ ಎಸ್. ನಿಜಲಿಂಗಪ್ಪ.—ಅವರೇ ಜಾಸ್ತಿ ಬರುತ್ತಾರೆ. ನಮ್ಮ ಮನೆಯಲ್ಲಿ ಒಂದು ಸಾರಿ ಬಂದು ಕುಳಿತುಕೊಳ್ಳಿ. ಎಷ್ಟು ಜನ ವಿರೋಧಪಕ್ಷದವರು ಬರುತ್ತಾರೆಂಬುದು ಗೊತ್ತಾಗುತ್ತದೆ.

ಶ್ರೀ ಎಸ್. ಶಿವಪ್ಪ.—ಇದು ಸಾಮಾನ್ಯ ಒಂದು ಕಾಂಗ್ರೆಸ್ ಸರ್ಕಾರ. ವಿರೋಧಪಕ್ಷದವರ ಜೊತೆಯಲ್ಲಿ ಮಂತ್ರಿಗಳು ಈಗ ಮಾತನಾಡಿದರು, ಅವರ ಜೊತೆಯಲ್ಲಿಯೇ ಹೊರಟರು ಎಂಬುದಾಗಿ ದೂರು ಮಾಡುತ್ತಿದ್ದಾರೆ.

ಸಾಮಾನ್ಯವಾಗಿ ನಮ್ಮ ತಾಲ್ಲೂಕಿನಲ್ಲಿ ನಡೆಯತಕ್ಕಂಥ ಸಾರ್ವಜನಿಕ ಸಭೆಗಳಿಗೆ ನಾನು ಹೋಗುವುದಿಲ್ಲ. ಯಾವುದಾದರೂ ಒಂದು ಸಂದರ್ಭದಲ್ಲಿ ನಾನು ಯಾವುದಾದರೂ ಒಂದು ಸಭೆಯಲ್ಲಿ ಭಾಗವಹಿಸುವುದಾದರೆ ಆ ಸಭೆಯಲ್ಲಿ ಭಾಗವಹಿಸಲು ಕೆಲವು ಅಧಿಕಾರಿಗಳೇ ಬಂದು ನನ್ನನ್ನು ಕರೆಯುತ್ತಾರೆ ಎಂದು ಕೆಲವರು ತಿಳಿದುಕೊಂಡಿದ್ದಾರೆ. ವಿರೋಧ ಪಕ್ಷದವರು ಭಾಗವಹಿಸುವ ಸಾರ್ವಜನಿಕ ಸಭೆಗಳಲ್ಲಿ ಅಧಿಕಾರಿಗಳು ಭಾಗವಹಿಸಿದರೆ ಆ ಸಭೆಯಲ್ಲಿ ನಾವೇನಾದರೂ ಮಾತನಾಡಿದರೆ ಅಧಿಕಾರಿಗಳು ಏನು ಹೇಳುತ್ತಾರೆಂದರೆ, ಇವರೇನು ಈ ಸಭೆಯಲ್ಲಿ ಈರೀತಿ ಮಾತನಾಡುತ್ತಾರೆ ಎಂದು ಹೇಳುತ್ತಾರೆ. ಮತ್ತು ಸರ್ಕಾರಕ್ಕೆ ದೂರು ಕೊಡುತ್ತಾರೆ. ಆಡಳಿತ ಪಕ್ಷದವರು ಮತ್ತು ಅಧಿಕಾರಿಗಳೂ ಸೇರಿ ಇಡೀ ದೇಶವೇ ಕಾಂಗ್ರೆಸ್, ಇಡೀ ಸರ್ಕಾರವೇ ಕಾಂಗ್ರೆಸ್ ಸರ್ಕಾರ ಎಂದು ತಿಳಿದುಕೊಂಡಿದ್ದಾರೆ. ಆ ರೀತಿ ಹೇಳತಕ್ಕಂಥ ಮನೋಭಾವ ಹೋಗಬೇಕು.

ಶ್ರೀ ಕೆ. ಪುಟ್ಟಸ್ವಾಮಿ.—ಸರ್ಕಾರ ಎಂದರೆ ಕಾಂಗ್ರೆಸ್ ಸರ್ಕಾರವೇ.

ಶ್ರೀ ಎಸ್. ಎಂ. ಕೃಷ್ಣ.—ಅಧಿಕಾರಿಗಳಿಗೂ ಬಿಳಿ ಟೋಪಿ ಹಾಕಿ ಅವರನ್ನು ನಿಮ್ಮ ಸರ್ವೆಂಟ್ಸ್ ಆಗಿ ಮಾಡಿಕೊಳ್ಳಬೇಡಿರಿ.

Sri S. NIJALINGAPPA.—One has to pity your sense of Government.

Sri S. M. KRISHNA (Maddur).—If my sense of Government is appreciated by the Chief Minister, I welcome it. Nonetheless, I must say that Government servants are not their servants. Sir, I would like to get a clarification; let us be frank about it. The Minister for Municipal Administration said, the Government is a Congress Government. Do you concede, do you want all these Government servants who work under you...........

Sri K. PUTTASWAMY (Minister for Municipal Administration).—Sir, I refuse to be cross-examined. I assert that the Government that is being run is a Congress Government.

ಶ್ರೀ ಎಸ್. ಶಿವಪ್ಪ.—ಇದು ಕಾಂಗ್ರೆಸ್ ಸರ್ಕಾರ ಎಂದು ಹೇಳುವುದರಲ್ಲಿ ಅನುಮಾನವೇ ಇಲ್ಲ. ಆದರೆ ಸರ್ಕಾರಿದ ಮೆಷನರಿಏನಿದೆ ಇದು ಜನತೆಯ ಮೆಷನರಿ. ಆದರೆ ಸರ್ಕಾರಿ ಅಧಿಕಾರಿಗಳನ್ನು ಕಾಂಗ್ರೆಸ್ ಮಾಡಬೇಡಿ.

ಶ್ರೀ ಕೆ. ಪುಟ್ಟಸ್ವಾಮಿ.—ಸರ್ಕಾರ ಮಾತ್ರ ಕಾಂಗ್ರೆಸ್ ಸರ್ಕಾರವೇ.

ಶ್ರೀ ಎಸ್. ಶಿವಪ್ಪ.—ತಪ್ಪು ಕಲ್ಪನೆ ಉಂಟಾಗಿ ಪ್ರಜಾಪ್ರಭುತ್ವಕ್ಕೆ ನಾವೆಲ್ಲರೂ ಹೊಸಬರು ಎಂದು ನಿಮ್ಮ ಅನುಯಾಯಿಗಳಲ್ಲಿ ತಪ್ಪು ಅಭಿಪ್ರಾಯ ಮೂಡಿದೆ. ಕಾಂಗ್ರೆಸ್ ಸರ್ಕಾರ ಎಂದರೆ ಸರ್ಕಾರಿ ಅಧಿಕಾರಿಗಳೂ ಕೂಡ ಕಾಂಗ್ರೆಸ್ಸಿನವರು ಎನ್ನುವ ಮನೋಭಾವ ಅವರಲ್ಲಿ ಬೆಳೆದುಬಂದಿದೆ.

ಶ್ರೀ ಕೆ. ಪುಟ್ಟಸ್ವಾಮಿ.—ವಿರೋಧಪಕ್ಷದಲ್ಲಿರುವವರಲ್ಲಿರುವ ಭ್ರಾಂತಿ ಅದು.

ಶ್ರೀ ಎಸ್. ಶಿವಪ್ಪ.—ಪ್ರಜಾಪ್ರಭುತ್ವದಲ್ಲಿ ಆ ರೀತಿ ಅವರು ಮನೋಭಾವವನ್ನು ಇಟ್ಟುಕೊಂಡರೆ ಅದು ಅಪಾಯಕಾರಿ. ಆ ರೀತಿಯ ಮನೋಭಾವನನ್ನು ಇಟ್ಟುಕೊಂಡರೆ ಯಾವ ಸರ್ಕಾರವೂ ಸರಿಯಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ. ಇವೊತ್ತು ಕಾಂಗ್ರೆಸ್ಸಿನವರು ಕೆಲವರು ಮತ್ತು ಸರ್ಕಾರಿ ಅಧಿಕಾರಿಗಳು ನೀವು ಹೇಳಿದಂತೆ ಕೇಳಬಹುದು. ಬೇರೆಯವರು ಹೇಳಿದಂತೆ ಕೇಳಬೇಕಾದ್ದಿಲ್ಲ ಎಂದು ಅವರು ತೀರ್ಮಾನ ಮಾಡಿಕೊಂಡಿದ್ದಾರೆ. ಯಾವ ಇಲಾಖೆಯಲ್ಲಿಯೇ ಆಗಲೀ

(ಶ್ರೀ ಎಸ್. ಶಿವಪ್ಪ)

ಯಾರಾದರೂ ಏನಾದರೂ ತಪ್ಪು ಮಾಡಿದರೆ ಅವನನ್ನು ವಿಚಾರಣೆ ಮಾಡತಕ್ಕಂಥ ಶಕ್ತಿ ಮೇಲ್ಪಟ್ಟ ಅಧಿಕಾರಿಗಳಿಗೆ ಇಲ್ಲವಾಗಿದೆ. ಕಾಂಗ್ರೆಸ್‌ನವರು ಅಧಿಕಾರಿಗಳನ್ನು ನಾವು ಹೇಳಿದಹಾಗೆ ಕೇಳಬೇಕು ಎಂದು ಹೆದರಿಸಿ ಬೆದರಿಸುತ್ತಿದ್ದಾರೆ.

ಶ್ರೀ ಕೆ. ಪುಟ್ಟಸ್ವಾಮಿ.—ಅದು ನಿಮ್ಮ ಊಹೆ.

ಶ್ರೀ ಎಸ್. ಶಿವಪ್ಪ.—ಅದನ್ನ ಅಷ್ಟು ಲಘುವಾಗಿ ತಿಳಿದುಕೊಳ್ಳಬೇಡಿ. ಅಂಥಾದ್ದನ್ನು ನೀವು ವಿಚಾರಣೆ ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.– ಅಂಥ ಪ್ರಕರಣಗಳಿದ್ದರೆ ಬರೆದು ಕಳುಹಿಸಿ, ಆ ಬಗ್ಗೆ ನಾವು ಕ್ರಮ ವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಶಿವಪ್ಪ.—ಅಂಥ ಪ್ರಕರಣಗಳು ದಿನ ಬೆಳಗಾದರೆ ನಡೆಯುತ್ತಿವೆ. ಚನ್ನರಾಯ ಪಟ್ಟಣದ ಒಂದು ವಿಚಾರವನ್ನೇ ನಾನು ಹೇಳುವುದಾದರೆ, ತಾವು ಒಬ್ಬ "ಯಃಕಶ್ಚಿತ್" ಸಬ್-ಇನ್ಸ್‌ಪೆಕ್ಟರ ವರ್ಗಾವಣೆಯಲ್ಲಿ ನೀವೇ ಕೈಹಾಕಲಿಲ್ಲವೇ ?

Sri K. PUTTASWAMY.—Sir, I rise to a point of order. The Hon'ble Leader of Opposition may make a reference to a Sub-Inspector; but, it is not correct for him to call the Sub-Inspector "yakhaschita". On a second thought, he will realise that this is not a word to qualify a Sub-Inspector.

Sri S. SIVAPPA.—Before the Chief Minister a Sub-Inspector i "yakhaschita": that is what I meant. Comparatively he is "yakhaschita".

ಶ್ರೀ ಕೆ. ಪುಟ್ಟಸ್ವಾಮಿ.—I raise a point of order. "ಯಃಕಶ್ಚಿತ್" ಎನ್ನುವ ಪದ ಈ ಸಭೆಯಲ್ಲಿ ಉಪಯೋಗಿಸುವುದಕ್ಕೆ ಅರ್ಹವಾದ ಪದವಲ್ಲ. ಅದು ಒಬ್ಬ ಮನುಷ್ಯನಿಗೆ ಬಹಳ ಹೀನಾಯವಾಗಿ ಬಳಸುವ ಪದ.

ಶ್ರೀ ಎಸ್. ಶಿವಪ್ಪ.—ಬೇಕಾದರೆ ಡಿಕ್ಷನರಿಯನ್ನು ನೋಡಿ.

ಶ್ರೀ ಕೆ. ಪುಟ್ಟಸ್ವಾಮಿ.—ನೋಡೋಣ ಸ್ವಾಮಿ ಈ "ಯಃಕಶ್ಚಿತ್" ಎನ್ನುವ ಪದ ಯಾವ ಒಂದು ಸಭ್ಯ ಸಭೆಯಲ್ಲಿಯೂ ಉಪಯೋಗಿಸುವುದಕ್ಕೆ ಅರ್ಹವಾದ ಪದವಲ್ಲ. ಆದ್ದರಿಂದ ಮಾನ್ಯ ಸದಸ್ಯರು ಆ ಪದವನ್ನು ವಾಪಸ್ಸು ತೆಗೆದುಕೊಳ್ಳಬೇಕು. ಆ ಪದವನ್ನು ಈ ಮಾನ್ಯ ಸಭೆಯ ನಡವಳಿಕೆಯಲ್ಲಿ ಸೇರಿಸಕೂಡದು. ಆದುದರಿಂದ ಆ ಬಗ್ಗೆ ಮಾನ್ಯ ಅಧ್ಯಕ್ಷರು ರೂಲಿಂಗ್ ಕೊಡಬೇಕು.

ಶ್ರೀ ಎಸ್. ಶಿವಪ್ಪ.—ಅದು ಸಂಸ್ಕೃತ ಪದ. ಆದುದರಿಂದ ಅದನ್ನು ಕನ್ನಡದಲ್ಲಿ ಸಾಧಾರಣ ಅಧಿಕಾರಿ ಎಂದು ಹೇಳುತ್ತೇನೆ. ಒಬ್ಬ ಸಾಧಾರಣ ಅಧಿಕಾರಿಯ ವರ್ಗಾವಣೆಯಲ್ಲಿ ನಮ್ಮ ದೇಶದ ಮುಖ್ಯ ಮಂತ್ರಿಗಳು ಕೈಹಾಕಿದ್ದಾರೆ.

Mr. DEPUTY SPEAKER.—I want to bring to the notice of Sri Sivappa that grievances against individual officers should not be made a point of debate on the floor of the House. It has been stated so many times and it has been ruled so many times such cases of individual officers should not be debated upon on the floor of this House.

Sri S. SIVAPPA.—Because the Chief Minister wanted an instance, I quoted this case.

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ, ನಾನು ಮತ್ತೆ ಕ್ರಿಯಾಲೋಪವನ್ನು ಎತ್ತುತ್ತೇನೆ. ಈ ಸಭ್ಯ ಸಭೆಯಲ್ಲಿ "ಯಃಕಶ್ಚಿತ್" ಎನ್ನುವ ಪದವನ್ನು ಉಪಯೋಗಿಸಬಹುದು ಎಂದು ನಿರ್ಣಯ ಕೊಡುವುದಾದರೆ ಆ ಪದ ಇಲ್ಲಿ ಬಳಕೆಗೆ ಬರುತ್ತದೆ. ಆದ್ದರಿಂದ ದಯವಿಟ್ಟು ಇದನ್ನು ಗೊಂದಲ ಮಾಡಿಕೊಳ್ಳಬಾರದು ಎಂದು ವಿನಂತಿ ಮಾಡಿಕೊಳ್ಳುತ್ತೇನೆ. "ಯಃಕಶ್ಚಿತ್" ಎನ್ನುವ ಪದ ಒಬ್ಬ ಮನುಷ್ಯನಿಗೆ ಬಹಳ ಹೀನಾಯವಾದ ರೀತಿಯಲ್ಲಿ ಅನ್ವಯಿಸುವ ಪದ. ನನಗೆ ತಿಳಿದ ಮಟ್ಟಿಗೆ ಯಾವ ಸಭ್ಯ ಸಭೆಯಲ್ಲೂ ಕೂಡ ಈ ಪದವನ್ನು ಬಳಸುವುದಿಲ್ಲ. ಆದ್ದರಿಂದ ಆ ವಿಚಾರದಲ್ಲಿ ತಾವು ನಿರ್ಣಯವನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

Mr. DEPUTY SPEAKER.—I request both the Hon'ble Members and the Hon'ble Minister to refer to the dictionary; I will also refer to the matter and give a ruling later.

Sri S. SIVAPPA.—Because you said that you have never interfered, I quoted an instance where you have interfered not because you know it but because some of your people came and misled you.

Sri S. NIJALINGAPPA.—Sri Sivappa came and told me that a Sub-Inspector must be transferred. I made due enquiries and I found that Sub-Inspector was very useful, that he was maintaining law and order to the best possible extent and that he was putting down anti-social elements in that area.

Mr. DEPUTY SPEAKER.—It is not befitting the dignity of this House that grievances of individual officers should be discussed on the Floor of the House. It would lead to so many things.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ (ತಿಪಟೂರು).—ಅದನ್ನು ಎನ್‌ಕ್ವಯರಿ ಮಾಡಿ.

Mr. DEPUTY SPEAKER.—I do not want this matter to be proceeded with any further.

Sri S. M. KRISHNA.—With great respect to you, Sir, I would like to know how you can curtail the liberty of a member to raise these questions here. How are you going to curtail my liberty to say anything that I want to say. I need protection here. As long as I do not defame any member here, I am certainly entitled to voice my grievances. You cannot curtail my liberty like that. All that you can do, with great respect to you, Sir, is to pull me if I go astray and make a reference to an individual police officer or D.I.G. or I.G.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಈಗ ಚೀಫ್‌ಮಿನಿಷ್ಟರ್ ಹೇಳಿದರು ಇಂಟರ್‌ಫಿಯರ್ ಮಾಡಿಲ್ಲವೆಂತ. 13 ಕೇಸುಗಳು ಡಿಸ್‌ಮಿಸ್ ಆಗಿ ಇನ್ನೊಂದು ಡಿಸ್‌ಮಿಸ್ ಆಗುವ ಹಾಗಿದೆ. ಇವರು ಯಾರನ್ನು ನಂಬಿಕೊಂಡಿದ್ದರೋ ಅವರೇ ಪ್ರಿಜುಡಿಸ್ ಆಗಿದ್ದಾರೆ. ಅವರನ್ನೇ ಎನ್‌ಕ್ವಯರ್ ಮಾಡಿ ತಿಳಿದುಕೊಳ್ಳಿ.

Sri S. SIVAPPA.—According to the Chief Minister, he has filed about 14 cases against the so-called anti-social elements. Out of those 14 cases, in 13 cases there has been acquittal.

Sri S. NIJALINGAPPA.—That is a different case.

Sri S. M. KRISHNA.—All the cases pertain to an ex-member of this House. Even now, we request the Chief Minister to do justice; it is not too late.

Mr. DEPUTY SPEAKER.—That will lead to a debate again.

ಶ್ರೀ ಎಸ್. ಶಿವಪ್ಪ.—ದೇಶದಲ್ಲಿ ಒಬ್ಬ ಸಬ್-ಇನ್‌ಸ್ಪೆಕ್ಟರಿಗೆ ಮುಖ್ಯ ಮಂತ್ರಿಗಳ ರಕ್ಷಣೆ ಇದೆ ಯೆಂದು ನಡೆಯಬಾರದ ಕೆಲಸ ನಡೆಯುತ್ತಾ ಇದೆ. ಕೋರ್ಟಿನಲ್ಲಿ ಸ್ಟ್ರಿಕ್ಚರ್ ಪಾಸ್ ಮಾಡಿದ್ದಾರೆ. ಪರ್ಸನಲ್ ಪ್ರಿಜುಡಿಸಿನಿಂದ ಕೆಲವರ ಮೇಲೆ ಕೇಸು ಹಾಕಿದ್ದಾರೆಂದು, 14 ಕೇಸುಗಳಲ್ಲಿ 13 ವಜಾ ಆಗಿವೆ. ಇನ್ನೊಂದು ಕೇಸು ಉಳಿದಿದೆ. ಆದ್ದರಿಂದ ನಾನು ಹೇಳುವುದನ್ನು ನಿರ್ವಿಕಾರ ಮನೋಭಾವದಿಂದ ವಿಚಾರ ಮಾಡಬೇಕು. ತಾವು ಯಾರೋ ಕೆಲವರ ಮೇಲೆ ನಿಮ್ಮ ಹಿಂಬಾಲಕರ ಮಾತು ಕೇಳಿಕೊಂಡು ಕೇಸು ಹಾಕಿ ಮಟ್ಟ ಹಾಕುತ್ತೇವೆ, ಆದರಿಂದ ಜನರನ್ನು ಬೊಗ್ಗು ಬಡಿಯುತ್ತೇವೆಂದು ತಿಳಿದುಕೊಂಡಿದ್ದರೆ ಅದು ಶುದ್ಧ ಭ್ರಮೆ. ಇನ್ನು 10 ವರ್ಷವಾದರೂ

(ಶ್ರೀ ಎಸ್. ಶಿವಪ್ಪ)

ಜನ ಹೆದರುವುದಿಲ್ಲ. 1967ನೇ ಇಸವಿಯಲ್ಲಿ ಚನ್ನರಾಯಪಟ್ಟಣದಲ್ಲಿ ನೀವು ಕೊಟ್ಟಂಥ ಕಿರುಕುಳಕ್ಕೆ ಜನ ಉತ್ತರಕೊಡುತ್ತಾರೆ. ಇವತ್ತಿನ ದಿವಸ ನೀವು ತಿಳಿದುಕೊಳ್ಳಬೇಕು, ನಿಮ್ಮ ಅಧಿಕಾರ ಹೋದರೆ ಏನಾಗುತ್ತದೆಂದು. ನಿಮ್ಮ ಅಧಿಕಾರವನ್ನು ಇವತ್ತಿನ ದಿವಸ ಒಂದು ತಾಲ್ಲೂಕನ್ನು ಮಟ್ಟ ಹಾಕುವುದಕ್ಕೆ ಉಪಯೋಗಿಸಿಕೊಂಡು ಅದನ್ನು ಸಮರ್ಥನೆ ಮಾಡುತ್ತಿರುವುದು ಖಂಡಿತವಾಗಿಯೂ ನಾಚಿಕೆಗೇಡಿನ ಪ್ರಸಂಗ. ಒಬ್ಬ ಮಾಜಿ ಶಾಸನ ಸಭಾಸದಸ್ಯನ ಜೀವವನ್ನು ತೆಗೆಯಬೇಕೆಂದು ಸನ್ನಾಹ ಮಾಡುತ್ತಿರುವುದು ನೋಡಿ ನನಗೆ ವ್ಯಸನವಾಗುತ್ತಿದೆ.

Sri S. NIJALINGAPPA.—I can understand neither the vehemence nor the language used by the Hon'ble the Leader of the Opposition. It is rather objectionable language. The year 1967will take care of itself and he need not be afraid about it. We know who he is and what he is. How can he make an allegation against us ? I wonder in 1967 whether his party will be in existence.

ಶ್ರೀ ಎಸ್. ಶಿವಪ್ಪ.—ಇವತ್ತು ತಮ್ಮ ಮನೋಭಾವ ಏನಿದೆ ಅನ್ನತಕ್ಕಂಥದ್ದನ್ನು ಅನೇಕ ಸಂದರ್ಭಗಳಲ್ಲಿ ಶಾಸನ ಸಭೆಯಲ್ಲಿ ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಒಂದು ಆಕ್ರೋಶದಿಂದ ಹೇಳಿದರೆ, ಆ ಒಂದು ಆಕ್ರೋಶದಿಂದ ಪ್ರಜಾಪ್ರಭುತ್ವ ದೇಶದಲ್ಲಿ ಖಂಡಿತವಾಗಿಯೂ ಬೆಳೆಯುವುದಕ್ಕೆ ಸಾಧ್ಯವಿಲ್ಲ. ವ್ಯಕ್ತಿಗಳೇ ಆಗಲಿ, ಮಂತ್ರಿಗಳೇ ಆಗಲಿ, ನಿರ್ವಿಕಾರ ಮನೋಭಾವದಿಂದ ದೇಶವನ್ನು ಆಳದೆ ಹೋದರೆ ಪ್ರಜಾಪ್ರಭುತ್ವ ನಿರ್ನಾಮವಾಗುತ್ತದೆ. ಪ್ರಜಾಪ್ರಭುತ್ವ ರಾಜ್ಯವನ್ನು ಕಟ್ಟುವಂಥ ಹೊತ್ತಿನಲ್ಲಿ, ಯಾವುದನ್ನೂ ನಿರ್ವಿಕಾರ ಮನೋಭಾವದಿಂದ ಯೋಚನೆ ಮಾಡಬೇಕೆ ಹೊರತು, ಯಾವ ವ್ಯಾಮೋಹವೂ ಇರಬಾರದು ನಿಮಗೆ ಆಗದಿರುವ ವ್ಯಕ್ತಿ ಒಬ್ಬನಿದ್ದಾನೆ ಯಾವ ಅಧಿಕಾರವು ಕೂಡ ಭದ್ರವಲ್ಲ. ಅಧಿಕಾರ ಹೀಗೆ ನಡೆಸಿದರೆ ಎಷ್ಟು ವರ್ಷ ನಡೆದೀತು ? ಅದು ತಮ್ಮ ಮೇಲೆ ರಿಕಾಯಿಲ್ ಆಗುತ್ತದೆ. ಪ್ರಜಾ ಪ್ರಭುತ್ವ ಚಕ್ರ ಒಂದು ಮಟ್ಟದಲ್ಲಿ ನಿಂತಿಲ್ಲ, ತಿರುಗುತ್ತಾ ಇದೆ ಈ ಪಕ್ಷ ಅತ್ತ ಕಡೆ ಹೋಗಬಹುದು, ಆ ಪಕ್ಷ ಈ ಕಡೆ ಬರಬಹುದು ಅನ್ನುವುದನ್ನು ಅವರು ಯೋಚನೆ ಮಾಡಬೇಕು ಇವತ್ತಿನ ದಿವಸ ಇದೇ ಪ್ರಜಾಪ್ರಭುತ್ವ ನಿಮ್ಮ ಮೇಲೆ ಗದಾಪ್ರಹಾರ ಮಾಡಬಹುದು ಅನ್ನುವುದನ್ನು ಬಹಳ ಆಳವಾಗಿ ತಾವು ಯೋಚನೆಮಾಡಬೇಕು. ಈ ರೀತಿಯಾದ ವಿಂಡಿಕ್ಟೀವ್‌ನೆಸ್ ನಿಂದ, ದೋರಣೆಯಿಂದ ಖಂಡಿತವಾಗಿಯೂ ಪ್ರಜಾಪ್ರಭುತ್ವ ಬೆಳೆಯುವುದಿಲ್ಲವೆಂದು ನಾನು ವ್ಯಸನದಿಂದ ಹೇಳುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಯಾರೋ ತಮ್ಮ ಜನ ಬಂದು ಹೇಳಿದರು ಎಂದು ಅವರ ಮಾತು ನಂಬಿದರೆ ಅದರಿಂದ ದೇಶಕ್ಕೆ ಕ್ಷೇಮವಿಲ್ಲ. If you still persist, I cannot help it. It is only your weakness that has brought this State to this stage. ದೇಶದಲ್ಲಿ ಪ್ರಜಾಪ್ರಭುತ್ವ ಚೆನ್ನಾಗಿ ನಡೆಯಬೇಕು, ಬೆಳೆಯಬೇಕು ಎಂಬ ಒಂದು ಅಭಿಪ್ರಾಯವನ್ನು ನೀವು ಹೊಂದಿದ್ದೀರಿ ನಾವು ಅದೇ ಅಭಿಲಾಷೆಯಿಂದಲೇ ಇದ್ದೇವೆ, ಮೈಸೂರು ದೇಶದ ಆರ್ಥಿಕ ಪರಿಸ್ಥಿತಿ ಚಿಂತಾಜನಕವಾಗಿದೆ ಅನ್ನುವುದನ್ನು ನಾವು ಒಪ್ಪುತ್ತೇವೆ. ನೀವು ಕೂಡ ಅದನ್ನೇ ಹೇಳಿದ್ದೀರಿ. ಚಿಂತಾಜನಕ ಪರಿಸ್ಥಿತಿಯಲ್ಲಿರತಕ್ಕಂಥಾ ಮೈಸೂರು ದೇಶವನ್ನು ಎಷ್ಟರಮಟ್ಟಿಗೆ ಕಲ್ಯಾಣಸ್ಥಿತಿಗೆ ತರಬೇಕು, ಆರ್ಥಿಕವುಗ್ಗಟ್ಟಿನಲ್ಲಿರುವ ಪರಿಸ್ಥಿತಿಯಿಂದ ಯಾವ ರೀತಿ ಮೇಲಕ್ಕೆತ್ತಬೇಕು ಅನ್ನುವ ದೊಡ್ಡ ಪ್ರಶ್ನೆ ಇರುತ್ತದೆ. ನಾಳೆ ನೀವು ಮದ್ರಾಸಿಗೆ ಹೋಗಿ ಫೈನಾನ್ಸ್ ಕಮಿಷನ್ ಎದುರಿಗೆ ಮೈಸೂರು ಸರ್ಕಾರಕ್ಕೆ ಆರ್ಥಿಕ ನೆರವು ಎಷ್ಟು ಬರಬೇಕು ಎಂದು ಕೇಳುವವರಾಗಿದ್ದೀರಿ. ಹಾಗೆ ಕೇಳತಕ್ಕಂಥ ಕಾಲದಲ್ಲಿ, ನಿಮ್ಮ ಧೋರಣೆಗೆ ನಿಮ್ಮ ದೇಶದ ಜನತೆ ಅವರ ಬಲ ಕೊಡಬೇಕು. ಪ್ರಜಾಪ್ರಭುತ್ವ ಯಶಸ್ವಿಯಾಗಿ ಬೆಳೆಯಬೇಕಾದರೆ, ಶಾಸನ ಸಭೆಯು ವಿರೋಧ ಪಕ್ಷವನ್ನು ತಮ್ಮ ಅಂತರಂಗಕ್ಕೆ ತೆಗೆದುಕೊಳ್ಳಬೇಕು ಅದರಲ್ಲಿಯೂ ಮುಖ್ಯ ಪ್ರಶ್ನೆಗಳಲ್ಲಿ, ವಿರೋಧ ಪಕ್ಷವನ್ನು ಅಂತರಂಗಕ್ಕೆ ತೆಗೆದುಕೊಳ್ಳಲೇಬೇಕು. ದೇಶ ನಿಮ್ಮೊಬ್ಬರದೇ ಅಲ್ಲ; ನಮ್ಮದೂ ನಿಮ್ಮದೂ, ಇಬ್ಬರದೂ. ಇಡೀ ದೇಶದ ಜನತೆಯ ಕಲ್ಯಾಣವನ್ನು ಸಾಧಿಸುವುದಕ್ಕೆ ನೀವೂ ಬಂದಿದ್ದೀರಿ. ನಾವೂ ಅಷ್ಟೇ ಪ್ರೇಮದಿಂದ, ಉತ್ಸಾಹದಿಂದ, ದೇಶಕ್ಕೆ ಉಜ್ವಲ ಭವಿಷ್ಯವನ್ನು ಕಟ್ಟಬೇಕು ಅನ್ನುವ ಆಕಾಂಕ್ಷೆ ಇಟ್ಟುಕೊಂಡು ಸೇವೆ ಮಾಡಲು ಬಂದಿದ್ದೇವೆ. ನೀವು ಏನು ಧೋರಣೆ ಇಟ್ಟು ಕೊಂಡಿದ್ದೀರೋ, ನಾವೂ ಅದನ್ನೇ ಇಟ್ಟುಕೊಂಡು ಮೈಸೂರಿನ ಮೇಲ್ಮೆಗೆ ದುಡಿಯಬೇಕೆಂದು ಕಂಕಣಬದ್ಧರಾಗಿ ಬಂದಿದ್ದೇವೆ. ಆ ಒಂದು ಉದ್ದೇಶ ಸಾಧನೆ ಮಾಡುವುದಕ್ಕೋಸ್ಕರ ನಮ್ಮ ದೇಶಕ್ಕೆ ಪ್ರಬಲವಾದ ಶಕ್ತಿಯುಳ್ಳ ಸರಕಾರಬೇಕು, ದಯಾದಾಕ್ಷಿಣ್ಯಕ್ಕೆ ಬಗ್ಗದಂಥ ಸರ್ಕಾರ ಬೇಕು. ಇವತ್ತು ವ್ಯಕ್ತಿಗಳ ಪ್ರಭಾವಕ್ಕೆ

ಒಳಗಾಗತಕ್ಕಂಥ ಸರ್ಕಾರ ಬಂದರೆ, ಪ್ರಜಾಪ್ರಭುತ್ವಕ್ಕೆ ದೊಡ್ಡ ಪೆಟ್ಟು ಬೀಳುತ್ತದೆ ತಾವು ದೇಶದಲ್ಲಿ ಪ್ರಜಾಪ್ರಭುತ್ವ ತಳಹದಿ ಮೇಲೆ, ಸುಖೀ ರಾಜ್ಯವನ್ನು ಕಟ್ಟತಕ್ಕಂಥ ಕಾಲದಲ್ಲಿ, ತಾವು ನಿರ್ವಿಕಾರ ಮನೋಭಾವದಿಂದ ಹೋಗದೆ, ಪ್ರಭಾವಕ್ಕೆ, ದಾಕ್ಷಿಣ್ಯಕ್ಕೆ ಒಳಗಾದರೆ, ಖಂಡಿತವಾಗಿಯೂ ವಿರೋಧ ಪಕ್ಷವನ್ನು ದೊಡ್ಡ ವಿಪತ್ತಿಗೆ ತರುತ್ತೀರಿ. ಹೀಗೆ ತಂದಿರತಕ್ಕಂಥಾದ್ದಕ್ಕೆ ತಾವೇ ಹೊಣೆಗಾರರಾಗಬೇಕು. ''ನಮ್ಮ ಮೇಲೆ ಚಾರ್ಜ್‌ಷೀಟ್ ಹಾಕಿದ್ದಿರಿ, ಏನಾಯಿತು'' ಎಂದು ಹೇಳಿದಿರಿ. ಈ ರೀತಿ ಮನೋಭಾವ ನೀವು ಹೊಂದಿದ್ದರೆ, ಯಾವ ಚಾರ್ಜುಷೀಟು ತಾನೇ, ಹಾಕಿದರೂ, ಬದಕುತ್ತದೆ? ಅನೇಕ ಲೋಪದೋಷಗಳಿವೆ ಎಂದು ನೀವೇ ಹೇಳುತ್ತೀರಿ. ನೀವು ಹೇಳಿದರೆ ಅದು ಧರ್ಮರಾಯನ ಮಾತು. ನಾವು ಹೇಳಿದರೆ ಸುಳ್ಳು ಹೇಳುತ್ತೇವೆ ಅನ್ನುತ್ತೀರಿ. ಶರಾವತಿ ವಿಚಾರದಲ್ಲಿ ಕೇಂದ್ರದವರು ಒಂದು ಮಾತು ಹೇಳುತ್ತಾರೆ. ಪ್ರಧಾನ ಮಂತ್ರಿಗಳು ಒಂದು ಮಾತು ಹೇಳುತ್ತಾರೆ. ಡಾ|| ಕೆ. ಎಲ್. ರಾವ್‌ರವರು ಶಹಭಾಸ್ ಗಿರಿ ಕೊಡುತ್ತಾರೆ. ಶರಾವತಿ ವಿಚಾರದಲ್ಲಿ ಕೇಂದ್ರದ ಸಚಿವರಾದ ಶ್ರೀ ಕೆ. ಎಲ್. ರಾವ್‌ರವರು ಇಲ್ಲಿಗೆ ಬಂದಿದ್ದಾಗ ಒಂದು ಮಾತು ಹೇಳಿದರು, ಅದು ಅಲ್ಲಿ ಇಲ್ಲಿ ಅಲ್ಪ ಸ್ವಲ್ಪ ದೋಷಗಳಿದ್ದರೂ ಇರಬಹುದು, ಪಾರ್ಲಿಮೆಂಟಿನಲ್ಲಿ ಇತ್ತೀಚೆಗೆ ಈ ದೇಶದ ಪ್ರಧಾನ ಮಂತ್ರಿ ಹೇಳುತ್ತ ಅಲ್ಪ ಸ್ವಲ್ಪ ದೋಷಗಳಿವೆ, ಆದರೆ ಅದು ವಿಚಾರಣೆಗೆ ಯೋಗ್ಯವಾದಂತಹ ದೊಡ್ಡದಾದ ತಪ್ಪು ಅಲ್ಲ ಎಂದು.

ಶ್ರೀ ಎಸ್. ನಿಜಲಿಂಗಪ್ಪ.—ತಾವು ಅವರ ಹೇಳಿಕೆಯನ್ನು ಇಲ್ಲಿ ಓದಿಬಿಡಿ.

ಶ್ರೀ ಎಸ್. ಶಿವಪ್ಪ.—ಪೇಪರುಗಳಲ್ಲಿ ಬಂದಿದೆ, ಬೇಕಾದರೆ ತಾವೇ ಓದಿ ನೋಡಬಹುದು. ನೇರವಾಗಿ ಇಂಥಹವರ ಮೇಲೆ ಜವಾಬುದಾರಿ ಹಾಕದೇ ಹೋದರೂ ಶ್ರೀಮಾನ್ ನಿಜಲಿಂಗಪ್ಪನವರ ಮೇಲೆ ಮಾಡಿದಂತಹ ಅಪಾದನೆಗಳು ಅಷ್ಟು ಇಲ್ಲದೇ ಇರಬಹುದು ಅಂತೂ ಲೋಪದೋಷಗಳು ಇವೆ ಎಂದು ಅವರೂ ಒಪ್ಪುತ್ತಾರೆ. ಇದು ನಿಮ್ಮ ದೃಷ್ಟಿಯಲ್ಲಿ ಸಣ್ಣದಾಗಿರಬಹುದು. ಆದರೆ ಹೀಗೆ ಈ ರೀತಿಯಾಗಿ ಇಷ್ಟು ದೊಡ್ಡದಾದ ಅಪಾದನೆಗಳನ್ನು ಮಾಡಿದ್ದರೂ ಕೂಡ ಅವನ್ನು ಇಷ್ಟು ಲಘುವಾಗಿ ತೆಗೆದುಕೊಂಡರೆ ಪ್ರಜಾಪ್ರಭುತ್ವ ಎಷ್ಟು ಮಟ್ಟಿಗೆ ವಿರೋಧ ಪಕ್ಷಕ್ಕೆ ಮನ್ನಣೆ ಕೊಡುತ್ತಿದೆ ಎನ್ನುವುದು ಗೊತ್ತಾಗುತ್ತದೆ.

ಉಪಾಧ್ಯಕ್ಷರು.—ಸಭೆ ಈಗ ಉಪಾಹಾರಕ್ಕಾಗಿ ಅರ್ಧ ಗಂಟೆ ಕಾಲ ಎದ್ದು ಮತ್ತೆ ಸೇರುತ್ತದೆ.

The House adjourned for recess at Three of the Clock and re-assembled at Thirty Minutes past Three of the Clock.

[MR. SPEAKER in the Chair]

ಶ್ರೀ ಎಸ್. ಶಿವಪ್ಪ.—ನಾನು ಮೂರನೆಯ ಪಾಂಚವಾರ್ಷಿಕ ಯೋಜನೆಯ ಬಗ್ಗೆ ಮಾತನಾಡುತ್ತಿದ್ದೆ. ಇದಕ್ಕಾಗಿ ಸುಮಾರು 50 ಕೋಟಿಯಷ್ಟು ಹೆಚ್ಚು ಮಾಡಲು ಕೇಂದ್ರದವರ ನೆರವು ಪಡೆಯಲು ಹೋಗಿ, ಇಲ್ಲಿಯವರಿಗೆ ಈ ಕೆಲಸಗಳನ್ನು ಮಾಡಲು ಮತ್ತು ಯೋಜನೆಯನ್ನು ಕಾರ್ಯಗತ ಮಾಡುವುದಕ್ಕೆ ಎಷ್ಟು ಕಷ್ಟವಾಗಿದೆ ಎನ್ನುವುದನ್ನೆಲ್ಲಾ ನಮ್ಮ ಅರ್ಥ ಸಚಿವರು ಇಲ್ಲಿ ಹೇಳಿದ್ದಾರೆ. ಯೋಜನೆಯಲ್ಲಿರುವ ಕೆಲಸಗಳನ್ನೆಲ್ಲಾ ಕಾರ್ಯಗತ ಮಾಡಲು ಇನ್ನೂ 50 ಕೋಟಿಯಷ್ಟು ಹಣ ಬೇಕೆಂದು ಹೇಳುತ್ತಿರುವಾಗ ಸರಕಾರ ಇದನ್ನು ಪಡೆಯಲು ಜನತೆಯ ಮೇಲೆ ಇನ್ನೂ ಹೆಚ್ಚು ತೆರಿಗೆಗಳನ್ನು ಹಾಕಬೇಕೆಂದು ಮುಂದೆ ಬರಬಾರದು. ಈಗಾಗಲೇ ಮೈಸೂರಿನ ಜನತೆಯ ಮೇಲೆ ಹೊರಲಾರದಷ್ಟು ಹೊರೆ ಬಿದ್ದಿದೆ. ಇನ್ನೂ ಹೆಚ್ಚು ಹೊರೆ ಹೊರಿಸಬೇಕೆಂದರೆ ಅದನ್ನು ಕೊಡುವುದು ಅವರಿಗೆ ಬಹಳ ಕಷ್ಟವಾಗುತ್ತದೆ. ಅಂತಹ ಹೆಚ್ಚಿನ ಹೊರೆಯನ್ನು ಕೊಡುವಷ್ಟು ಶಕ್ತಿ ನಮ್ಮ ದೇಶದ ಜನಕ್ಕೆ ಈಗ ಇಲ್ಲ. ಹೀಗೆ ಹೆಚ್ಚು ತೆರಿಗೆಯನ್ನು ಜನತೆಯ ಮೇಲೆ ಹೊರಿಸಬೇಕು ಎನ್ನುವ ಭಾವನೆಯನ್ನು ಬಿಟ್ಟುಬಿಟ್ಟು ಇದಕ್ಕೆ ಹೊಸದಾದ ಬೇರೆ ಇನ್ನಾವುದಾದರೂ ಮಾರ್ಗವನ್ನು ಯೋಚನೆ ಮಾಡಬೇಕು. ಮೈಸೂರಿನಿಂದಲೇ ಕೇಂದ್ರದವರಿಗೆ ಎಷ್ಟೋ ಹಣ ಹೋಗುತ್ತಿದೆ, ಅಲ್ಲದೆ ಮೈಸೂರು ದೇಶದಲ್ಲಿ ಇಂಡಿಯಾ ದೇಶಕ್ಕೆಲ್ಲಾ ದೊಡ್ಡದಾದಂತಹ ಒಂದು ವಿದ್ಯುಚ್ಛಕ್ತಿ ಕಾರ್ಖಾನೆ ಸ್ಥಾಪನೆಯಾಗಿದೆ; ನಮಗೆ ಬರುವ ವಿದ್ಯುಚ್ಛಕ್ತಿಯಿಂದ ಇನ್ನೂ ಹೆಚ್ಚಿನ ಸಹಾಯ ಪಡೆಯಲು ಒಂದು ಅವಕಾಶ ದೊರೆತಿದೆ. ಕೇಂದ್ರ ಸರಕಾರದವರು ನಮ್ಮ ಮೈಸೂರು ಸರಕಾರಕ್ಕೆ ಇನ್ನೂ ಹೆಚ್ಚು ಸಹಾಯವನ್ನು ಕೊಡಬೇಕೆಂದು ಒತ್ತಿ ಒತ್ತಿ ಹೇಳಬೇಕಾಗಿದೆ.

(ಶ್ರೀ ಎಸ್. ಶಿವಪ್ಪ)

ಕೇಂದ್ರದವರ ಮೇಲೆ ಪ್ರಭಾವಯುತವಾದ ಒತ್ತಾಯವನ್ನು ನಮ್ಮ ಮಾನ್ಯ ಮುಖ್ಯ ಮಂತ್ರಿಗಳೂ ಹಾಗು ಆರ್ಥಿಕ ಮಂತ್ರಿಗಳೂ ಕೇಂದ್ರದ ಮೇಲೆ ತರುತ್ತಾರೆಂದು ನಾನು ನಂಬುತ್ತೇನೆ. ಹೆಚ್ಚು ತೆರಿಗೆಯ ಹೊರೆಯನ್ನು ದೇಶದ ಜನರ ಮೇಲೆ ಹೊರಿಸುವ ಪ್ರಯತ್ನ ಮಾಡುವುದು ಯುಕ್ತ ವಲ್ಲ. ಅಲ್ಲದೆ ನಮ್ಮ ಮಾನ್ಯ ಅರ್ಥ ಮಂತ್ರಿಗಳು ನಾಳೆ ಇಲ್ಲಿಂದ ಮದರಾಸಿಗೆ ಹೋಗಿ ಫೈನಾನ್ಸ್ ಕಮಿಷನ್ನಿನ ಮುಂದ ತಮ್ಮ ಹೊಣೆಗಾರಿಕೆಯನ್ನು ಮಂಡಿಸುವವರಾಗಿದ್ದಾರೆ. ಅವರ ಮೇಲೆ ಒಂದು ಸರಿಯಾದ ವಾತಾವರಣವನ್ನುಂಟುಮಾಡಿ ನಮಗೆ ಬರಬೇಕಾದ ಹೆಚ್ಚಿನ ಹಣವನ್ನು ಪಡೆ ಯಲು ಪ್ರಯತ್ನ ಮಾಡಬೇಕೆಂದು ಸೂಚಿಸುತ್ತಿದ್ದೇನೆ. ಪ್ರಜಾಪ್ರಭುತ್ವದಲ್ಲಿ ಸಮಾಜವಾದದ ತತ್ವವನ್ನು ಆಚರಣೆಗೆ ತರಬೇಕು ಎಂದು ಕಾಂಗ್ರೆಸ್ಸು ಅಧಿವೇಶನದಲ್ಲಿ ನೀವೇ ಒಪ್ಪಿಕೊಂಡಿದ್ದೀರಿ. ಅಂತಹ ಪ್ರಜಾಪ್ರಭುತ್ವದಲ್ಲಿ ಸಮಾಜವಾದದ ತತ್ವವನ್ನು ಅನುಷ್ಠಾನಕ್ಕೆ ತರಬೇಕು. ಅಲ್ಲದೆ ನಮ್ಮ ಅಧಿಕಾರಿಗಳು ಹೆಚ್ಚು ಹಣವನ್ನು ಕೊಡಬೇಕೆಂದು ಕೇಳುತ್ತಿದ್ದಾರೆ, ಇದನ್ನೂ ಕೂಡ ಫೈನಾನ್ಸ್ ಕಮಿಷನ್ನಿನವರ ಗಮನಕ್ಕೆ ತರಬೇಕು ಮತ್ತು ಇನ್ನೂ ಉಳಿದಿರುವ ಎಲ್ಲ ಕೆಲಸಗಳನ್ನೂ ಕಾರ್ಯಗತ ಮಾಡಲು ಸಾಕಷ್ಟು ಹಣವನ್ನು ಪಡೆಯಲು ಕೇಂದ್ರದ ಮೇಲೆ ಸಾಕಷ್ಟು ಒತ್ತಾಯ ತರಬೇಕು ಮತ್ತು ಎಲ್ಲ ಕೆಲಸಗಳೂ ಯಶಸ್ವಿಯಾಗಿ ನಡೆಯುವಂತೆ ಪ್ರಯತ್ನ ಮಾಡಬೇಕು. ವಿರೋಧ ಪಕ್ಷದ ಸದಸ್ಯರು ಪ್ರಜಾಪ್ರಭುತ್ವದಲ್ಲಿ ಏನೂ ಸೂಚನೆಗಳನ್ನು ಕೊಡುತ್ತಾರೋ ಅವಕ್ಕೆ ಸಾಕಷ್ಟು ಅವ ಕಾಶಗಳನ್ನು ಮಾಡಿ ಕೊಡಬೇಕು ಮತ್ತು ಈ ರಾಜ್ಯದ ಪೂರ್ತಿ ಜವಾಬುದಾರಿ ತಮ್ಮ ಮೇಲೆ ಇರುವುದರಿಂದ ಜನತೆಗೆ ಅನುಕೂಲವಾಗುವಂತೆ ಮಾಡಬೇಕು. ಮಾನ್ಯ ಹಣಕಾಸಿನ ಸಚಿವರು ಮದರಾಸಿನಲ್ಲಿ ಫೈನಾನ್ಸ್ ಕಮಿಷನ್ನಿನವರ ಮುಂದೆ ಮಾತನಾಡಲು ನಾಳೆ ಇಲ್ಲಿಂದ ಮದರಾಸಿಗೆ ಹೊರಡುವವರಾಗಿದ್ದಾರೆ. ಈಗಾಗಲೇ ಇಲ್ಲಿನ ಎನ್. ಜಿ. ಓ. ಗಳು ಅವರಿಗೆ ಕೊಡುತ್ತಿರುವ ಸಂಬಳ ಸಾರಿಗೆಗಳು ಸಾಲದು ಎಂದು ಹೇಳಿದಾಗ ತಾವು ಕೇಂದ್ರದವರ ಕಡೆಗೆ ಕೈ ತೋರಿಸು ತ್ತಿದ್ದೀರಿ. ಅವರಿಗೆ ಇನ್ನೂ ಹೆಚ್ಚು ಸೌಲಭ್ಯಗಳನ್ನು ಕೊಡಬೇಕಾಗಿರುವುದು ನ್ಯಾಯವಾಗಿದೆ, ಅಂತಹ ಹೊಣೆ ಮತ್ತು ಜವಾಬುದಾರಿ ತಮ್ಮ ಮೇಲಿದೆ, ಅದಕ್ಕೆ ಸಾಕಷ್ಟು ಪರಿಹಾರಗಳನ್ನು ಪಡೆಯಲು ಮತ್ತು ಯೋಜನೆಯ ಎಲ್ಲ ಕಾರ್ಯಗಳನ್ನೂ ಯಶಸ್ವಿಯಾಗಿ ಮಾಡಲು ಒಂದು ಒಳ್ಳೆಯ ಅವಕಾಶ ತಮಗೆ ದೊರಕಲಿ ಎಂದು ಹಾರೈಸಿ ನಾನು ನನ್ನ ಈ ನಾಲ್ಕು ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

Mr. SPEAKER. Before I call upon any member, I want to clear one or two points with a view to coordinate the Business of the House. Tomorrow we have official business and day after tomorrow we have non-official business. The hon'ble members will recollect that there are three or four points which are not finalised. One is a motion given notice of by the Home Minister and the other is with regard to the point raised by Sri Ganji Veerappa about the position of the Leader of the Opposition. That is also closely associated with the party affiliation. It was put to me how much time is allotted to this party and that party. In that connection before I go to the further aspect of the matter, I read in newspapers a press statement. When the House is in session should it not first come to the notice of the Speaker." How did the press come to know this ? Is the Leader of the Opposition entitled to give a statement to the press ? It should have been done here when the House is in session.

Sri S. SIVAPPA.—I have not given any statement to the press.

Sri C. J. MUKKANNAPPA (Sira).—The press might have collected information.

Mr. SPEAKER.—Not that I object to such things. I am only trying to say how irksome it becomes when the same principle is applied elsewhere that the Ministers should not make a statement outside when the House is in session. I should have been told first because the

Speaker is to be told with regard to party affiliation. Is he not to be told about it first ? What I mean to say is, I want to emphasise and bring to focus this point. I have to rearrange seating arrangements. So, the hon'ble members may kindly give me a list on the 6th instant.

Sri S. SIVAPPA.—Sir, on the 13th we can give. On the non-official day itself it can discussed.

Sri C. J. MUKKANNAPPA.—Sir, why should it be taken up on the non-fficial day ?

Mr. SPEAKER.—For the simple reason that it will eat into the time allotted for the Budget. I have no objection if it has to be taken on any day. I am not going to shut out anything. I am trying to give as much time to the members as possible. On the 6th instant it may be necessary for me to allow certain parties to express their opinion on all these points. Therefore I am mentioning this well in advance. Members may kindly study the matter and come ; I have already indicated the books that are helpful in the matter. On the 6th if the House agrees we can take it up. We cannot go on holding this. We will try as much as possible ; if it is not possible I will postpone it.

Sri S. SIVAPPA.—Sir, the chair can fix up any day.

Mr. SPEAKER.—We will try on the 6th.

ಶ್ರೀ ಎಂ. ಆರ್. ಪಾಟೀಲ್ (ಹುಬ್ಬಳ್ಳಿ).—ಮಾನ್ಯ ಅಧ್ಯಕ್ಷರೇ, ಹಣಕಾಸಿನ ಸಚಿವರು ಮೊನ್ನೆ ದಿನ ಈ ವರ್ಷದ ಆಯವ್ಯಯ ಪಟ್ಟಿಯ ಮೇಲೆ ಈ ಸಭೆಯಲ್ಲಿ ಮಾಡಿದ ಭಾಷಣದಲ್ಲಿ ಕೆಲವು ಅಂಕಿ ಅಂಶಗಳನ್ನು ಕೊಟ್ಟದ್ದಕ್ಕೆ ನಾನು ಅವರ ಆಭಾರಮನ್ನಿಸುತ್ತೇನೆ. ಆಹಾರ ಉತ್ಪಾದನೆಯ ವಿಷಯದಲ್ಲಿ ಒಕ್ಕಲತನದ ವಿಷಯದಲ್ಲಿ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಅವು ನಮ್ಮ ರಾಜ್ಯದಲ್ಲಿ ಆಹಾರ ಉತ್ಪಾದನೆ ವಿಚಾರದಲ್ಲಿ ಗುರಿ ಮುಟ್ಟುವ ಸಾಧನೆ ಇನ್ನೂ ಆಗಿಲ್ಲ ವೆಂಬದನ್ನು ತೋರಿಸುತ್ತವೆ. ಆಹಾರ ಉತ್ಪಾದನೆ ವಿಚಾರದಲ್ಲಿ ನಮ್ಮ ರಾಜ್ಯ ಸರಕಾರ ಮತ್ತು ಕೇಂದ್ರ ಸರಕಾರ ಕೂಡ ಡೆವಲಪ್ಮೆಂಟ್ ಡಿಪಾರ್ಟಮೆಂಟ್, ಅಗ್ರಿಕಲ್ಚರಲ್ ಡಿಪಾರ್ಟಮೆಂಟ್, ಕೋ ಆಪರೇಟಿವ್ ಡಿಪಾರ್ಟಮೆಂಟ್ ಈ ಎಲ್ಲ ಡಿಪಾರ್ಟಮೆಂಟ್‌ಗಳ ಮುಖಾಂತರ ಕೋಟ್ಯಾನು ಕೋಟಿ ರೂಪಾಯಿ ತೊಡಗಿಸುತ್ತಿದ್ದಾರೆ. ಇಷ್ಟು ಹಣ ತೊಡಗಿಸಿ ಬೇಕಾದಷ್ಟು ಸಿಬ್ಬಂದಿ ಇರಲಿಕ್ಕಾಗಿಯೂ ಆಹಾರ ಉತ್ಪಾದನೆ ಹೆಚ್ಚಿಸುವುದು ಒಕ್ಕಲತನ ಪ್ರಗತಿ ಮಾಡುವುದು ಏತಕ್ಕೆ ಆಗುತ್ತಿಲ್ಲ ? ಇದನ್ನು ದೀರ್ಘವಾಗಿ ಆಳವಾಗಿ ನಾವೆಲ್ಲರೂ ಯೋಚನೆ ಮಾಡಬೇಕಾಗಿದೆ. ಉತ್ಪಾದನೆ ಹೆಚ್ಚಾಗಿಲ್ಲ, ನಾವು ಹಿಂದೆ ಬೀಳುತ್ತಿದ್ದೇವೆ ಎಂಬುದನ್ನು ತಿಳಿಯುವುದಕ್ಕೆ ಅಂಕಿ ಅಂಶಗಳು ಬೇಕು ಎಂದು ಇಲ್ಲ. ಬೇರೆ ರಾಷ್ಟ್ರದಿಂದ ನೂರಾರು ಕೋಟಿ ರೂಪಾಯಿ ಬೆಲೆಯ ಆಹಾರ ಧಾನ್ಯ ಆಮದು ಮಾಡಿಕೊಳ್ಳುತ್ತಿರುವುದೇ ಇದಕ್ಕೆ ಸಾಕಷ್ಟು ಸಾಕ್ಷಿಯಾಗಿದೆ. ಇದಕ್ಕೆ ಏನು ಕಾರಣ ? ಹೆಚ್ಚು ಆಹಾರ ಬೆಳೆಯಲು ಅತ್ಯಾಧುನಿಕ ಸಲಕರಣೆ ಉಪಯೋಗಿಸಬೇಕೆಂದು ಗ್ರಾಮ ಸೇವಕನಿಂದ ಪ್ರಧಾನ ಮಂತ್ರಿಗಳವರಿಗೆ ಎಲ್ಲರೂ ಒಕ್ಕಲಿಗರಿಗೆ ಹೇಳುತ್ತಾರೆ. ಇದರ ಪರಿಣಾಮ ಏಕೆ ಆಗಿಲ್ಲ ಎನ್ನುವುದನ್ನು ವಿಚಾರ ಮಾಡಬೇಕಾಗಿದೆ. ಮೊದಲನೇಯದಾಗಿ ನಮ್ಮ ದೇಶದ ಎಲ್ಲ ಉದ್ಯೋಗಗಳಲ್ಲಿ ಒಕ್ಕಲತನ ಉದ್ಯೋಗ ಕನಿಷ್ಠ ಲಾಭ ಕನಿಷ್ಟ ಆದಾಯ ಬರತಕ್ಕ ಉದ್ಯೋಗವಾಗಿದೆ. ಒಕ್ಕಲತನ ಉದ್ಯೋಗದಲ್ಲಿ ತೊಡಗಿದ ಮನುಷ್ಯ ಯಾವ ವೇಳೆಗೆ ಮತ್ತೊಂದು ಉದ್ಯೋಗ ದೊರೆಯುತ್ತದೆಯೋ ಅಲ್ಲಿಗೆ ಜಿಗಿಯುವುದಕ್ಕೆ ಅವಕಾಶ ನೋಡುತ್ತಿರುತ್ತಾನೆ. ಒಕ್ಕಲತನ ಉತ್ಪನ್ನವು ಬಹಳ ಕಡಿಮೆಯಾಗಿದೆ ಎನ್ನುವುದಕ್ಕೆ ಅಂಕಿ ಅಂಶಗಳನ್ನು ಈ ಸಭೆಗೆ ಕೊಡಬೇಕು ಎಂದು ನನಗೆ ಅನಿಸುವುದಿಲ್ಲ. ಆದರೂ ಕೂಡ ಅಂಕಿ ಅಂಶಗಳನ್ನು ಕೊಡಲು ಪ್ರಯತ್ನ ಮಾಡುತ್ತೇವೆ. ನಮ್ಮ ದೇಶದಲ್ಲಿ ಒಕ್ಕಲತನ ಅವಲಂಬಿಸಿ ಇರುವವರ ಸಂಖ್ಯೆ ನೂರಕ್ಕೆ ಎಪ್ಪತ್ತಕ್ಕಿಂತ ಹೆಚ್ಚಾಗಿದೆ. ಉಳಿದ ಉದ್ಯೋಗಗಳಲ್ಲಿ ಕೆಲಸ ಮಾಡತಕ್ಕಂಥವರ ಸಂಖ್ಯೆ ನೂರಕ್ಕೆ ಮೂವತ್ತರಷ್ಟು ಪ್ರಮಾಣ ಇದೆ. 100ಕ್ಕೆ 70ರಷ್ಟು ಈ ಜನ ಅವಲಂಬಿಸುವ ಉದ್ಯೋಗದಿಂದ ಬರುವ ಪ್ರತಿಫಲ ನಮ್ಮ ರಾಜ್ಯದ ರಾಷ್ಟ್ರೀಯ ಉತ್ಪನದಲ್ಲಿ 100ಕ್ಕೆ 10ರಷ್ಟು ಇದೆ. ನೂರಕ್ಕೆ 30ರಷ್ಟು ಜನ ಅವಲಂಬಿಸುವ ಮಾಡುವ ಉಳಿದ ಉದ್ಯೋಗದಿಂದ ಬರುವ ಪ್ರತಿಫಲವನ್ನು ರಾಜ್ಯದ ರಾಷ್ಟ್ರೀಯ ಉತ್ಪನ್ನದ 100ಕ್ಕೆ 60ರಷ್ಟು ಇದೆ. ಅಂದಮೇಲೆ ಈ ರೀತಿ ಲೆಕ್ಕ ಹಾಕಿದರೆ ಒಕ್ಕಲತನ ಅವಲಂಬಿಸಿದ ಪ್ರತಿ ವ್ಯಕ್ತಿ ಒಂದು ದಿವಸಕ್ಕೆ 5 ಆಣೆ

(ಶ್ರೀ ಎಂ. ಆರ್. ಪಾಟೀಲ್)

ಸಂಪಾದನೆ ಮಾಡುತ್ತಾನೆ ಉಳಿದ ಉದ್ಯೋಗದಲ್ಲಿ ತೊಡಗಿರುವ ಪ್ರತಿ ವಕ್ತಿ ಒಂದು ದಿನಕ್ಕೆ ಒಂದು ರೂಪಾಯಿ ಒಂದೂಕಾಲು ರೂಪಾಯಿ ಸಂಪಾದನೆ ಮಾಡುತ್ತಾನೆ. ಒಕ್ಕಲತನಕ್ಕೂ ಉಳಿದ ಉದ್ಯೋಗದಲ್ಲಿ ತೊಡಗಿರುವವರ ಸಂಪಾದನೆಗೂ ಮೂರು ನಾಲ್ಕು ಪಟ್ಟು ಅಂತರ ಇದೆ. ಆದುದರಿಂದ ಒಕ್ಕಲತನದಲ್ಲಿಯೇ ನಿಲ್ಲಬೇಕು ಎಂದು ಯಾರೂ ಮನಸ್ಸು ಮಾಡುವುದಿಲ್ಲ. ಬೇರೆ ಉದ್ಯೋಗ ದೊರೆಯದವರು ಮಾತ್ರ ಹೊಟ್ಟೆ ಬಟ್ಟೆಗೆ ಏನೂ ಇಲ್ಲದೇ ಇರುವಾಗ್ಗೆ ಒಪ್ಪತ್ತು ಊಟವಾದರೂ ದೊರೆಯಲಿ ಎಂದು ಒಕ್ಕಲತನಕ್ಕೆ ಜನರು ಅಂಟಿಕೊಳ್ಳುತ್ತಾರೆ. ಇಂಥ ಜೀವನ ಮಾಡುವ ರೈತನು ಕೂಡ ವಯಸ್ಸಿಗೆ ಬಂದ ತನ್ನ ಮಕ್ಕಳಿಗೆ ಶಿಕ್ಷಣ ಕೊಡಿಸಬೇಕು ಬೇರೆ ಲಾಭ ದಾಯಕ ಉದ್ಯೋಗ ದೊರೆಯುವ ಹಾಗೆ ಮಾಡಬೇಕು ಎಂದು ಅಪೇಕ್ಷೆ ಪಡುತ್ತಾನೆ. ಹೀಗೆ ಒಕ್ಕಲುತನದ ಒಂದು ವಾತಾವರಣವೇ ನಿಸ್ಸಾರವಾಗಿ ಪರಿಣಮಿಸಿದೆ. ಪಟ್ಟಣಗಳಲ್ಲಿದ್ದು ಕೊಂಡು ಒಂದು ಎಸ್. ಎಸ್. ಎಲ್. ಸಿ. ಯನ್ನೋ ಅಥವಾ ಒಂದು ಡಿಗ್ರಿಯನ್ನೋ ಪಡೆದುಕೊಂಡು ಯಾವುದಾದರೊಂದು ಸರ್ಕಾರಿ ನೌಕರಿಯಲ್ಲೂ ಅಥವಾ ಇನ್ನಾವುದಾದರೂ ಒಂದು ಪಟ್ಟಣದ ಉದ್ಯೋಗವನ್ನು ಒದಗಿಸಿಕೊಂಡು ಜೀವನ ಸಾಗಿಸಬೇಕೆಂಬ ಒಕ್ಕಲಿಗರ ಮಕ್ಕಳಲ್ಲಿ ಮನೋಭಾವನೆ ತುಂಬಿ ಬಿಟ್ಟಿದೆ. ಇನ್ನೂ ಒಂದು ಜನರಲ್ಲಿ ಏನೊಂದು ಭಾವನೆಯುಂಟಾಗಿದೆ ಅಂದರೆ ಈ ಒಕ್ಕಲುತನದಲ್ಲಿ ಲಾಭವಿಲ್ಲ, ಇದು ಲಾಭದಾಯಕವಾದ ಉದ್ಯಮವಲ್ಲ, ಒಕ್ಕಲುತನದಿಂದ ಜೀವನ ಮಾಡತಕ್ಕ ವ್ಯಕ್ತಿ ಅವನು ಬುದ್ಧಿ ಜೀವಿಯಲ್ಲ, ಇದು ದಡ್ಡರು ಮಾಡತಕ್ಕ ವೃತ್ತಿ ಎಂಬ ಭಾವನೆ ಬಂದು, ಈ ದಿವಸ ಇದರಲ್ಲಿ ತೊಡಗಿರತಕ್ಕ ಜನರಾರಂದರೆ: ಕೇವಲ ಮಧ್ಯಮ ವರ್ಗದ ಜನರು, ಹಾಗೂ ಬೇರೆ ಉದ್ಯೋಗಗಳನ್ನು ಮಾಡುವುದಕ್ಕೆ ಯಾರಲ್ಲಿ ಹೆಚ್ಚಿನ ಬುದ್ಧಿಶಕ್ತಿ ಗಳಿಲ್ಲವೋ ಅಂಥ ಜನರೂ ಈ ದಿವಸ ಇದರಲ್ಲಿ ತೊಡಗಿದ್ದಾರೆ. ಈ ಉದ್ಯೋಗದಲ್ಲಿ ತೊಡಗತಕ್ಕ ಜನ ಯಾರಿದ್ದಾರೆ ಅವರಿಗೆ ಸರ್ಕಾರಿಯ ನೌಕರಿಗಿಂತಲೂ ಹೆಚ್ಚು ದಕ್ಷತೆಯಿಂದ ಇದನ್ನ ಮ್ಯಾನೇಜ್ ಮಾಡತಕ್ಕ ಬುದ್ಧಿ ಮತ್ತು ಶಕ್ತಿ ಇರುವುದರ ಜೊತೆಗೆ ಇದಕ್ಕೆ ಸಾಕಷ್ಟು ಬಂಡವಾಳವೂ ಸಹಾ ಬೇಕಾಗುವುದು. ಸರ್ಕಾರದವರು ಒಕ್ಕಲುತನಕ್ಕೆ ಅನುಕೂಲ ಕಲ್ಪಿಸುತ್ತೇವೆಂತ ತಮ್ಮಲ್ಲಿ ಬೇಕಾದಷ್ಟು ಶಿಬ್ಬಂದಿಯನ್ನು ಹೆಚ್ಚುಮಾಡಿಕೊಳ್ಳಬಹುದು ಇಲಾಖೆಯನ್ನೇ ದೊಡ್ಡದನ್ನಾಗಿ ಬೆಳಸಬಹುದು ಆದರೆ ಇದರಿಂದ ನೌಕರವರ್ಗವನ್ನು ಬಳಸಿದಂತಾಯಿತೇ ವಿನಾ ಒಕ್ಕಲುತನಕ್ಕೆ ಇವರಿಂದೇನೂ ಸಹಾಯವಾಗುವುದಿಲ್ಲ. ಇಂಥ ನೆಪದಲ್ಲಿ ಸರ್ಕಾರದವರು ಎಷ್ಟೇ ಹಣವನ್ನು ಖರ್ಚುಮಾಡಿದರೂ ಅದರಿಂದ ಒಕ್ಕಲುತನದ ಅಭಿವೃದ್ಧಿ ಖಂಡಿತಾ ಆಗುವುದಿಲ್ಲ. ಇದರ ಬಗ್ಗೆ ಬೇರೊಂದು ಹೊಸ ನಮೂನೆಯಲ್ಲಿ ಇದರ ಪರಿಸ್ಥಿತಿಗನುಗುಣವಾಗಿ ನಾವು ಒಂದು ಮಾರ್ಗವನ್ನು ಕಂಡುಹಿಡಿಯ ಬೇಕಾಗಿದೆ. ಯಾರು ಈ ಒಕ್ಕಲುತನದ ಉದ್ಯೋಗದಲ್ಲಿ ಸತತವಾಗಿ ತೊಡಗಿರುತ್ತಾರೋ ಅಂಥವರ ಒಂದು ಆದಾಯವನ್ನು ನ್ಯಾಷನಲ್ ಅವರೇಜ್ ಇನಕಂಗಿಂತ ಸ್ವಲ್ಪ ಹೆಚ್ಚಿಗೆ ಇರುವಂತೆ ಒಂದು ಅವಕಾಶ ಮಾಡಿಕೊಟ್ಟರೆ ಆಗ ಸ್ವಲ್ಪ ಇದಕ್ಕೆ ಅನುಕೂಲವಾಗಬಹುದು. ಹೀಗೇನಾದರೂ ನಾವು ಒಂದು ಹೊಸಮಾರ್ಗವನ್ನು ಹುಡುಕದೆ ಕೇವಲ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡುವುದರಿಂದಲೇ ನಾವು ಈ ಒಕ್ಕಲುತನವನ್ನು ಅಭಿವೃದ್ಧಿ ಮಾಡುವುದೆಂದರೆ ಅದು ನಮ್ಮ ಒಂದು ಕೇವಲ ಭ್ರಾಂತು ಎಂದು ನಾನು ಹೇಳಬೇಕಾಗಿದೆ. ನನಗೆ ಕಬ್ಬು, ದ್ರಾಕ್ಷಿ ಇತ್ಯಾದಿ ನೀರಾವರಿ ಬೆಳೆಗಳ ಅನುಭವ ಇಲ್ಲ. ನನಗೇನಿದ್ದರೂ ಸಾಮಾನ್ಯವಾಗಿ ಒಣಭೂಮಿಯ ಅನುಭವ ಸಾಕಷ್ಟು ಮಟ್ಟಿಗಿದೆ. ನಾವು ಈ ಒಣ ಭೂಮಿಯ ಮೇಲೆ ಎಷ್ಟೇ ಹಣವನ್ನು ಹಾಕಿದರೂ ಭೂಮಿಯ ಬೆಲೆಯ 100 ರಷ್ಟು ಆದಾಯ ಬರುವುದಿಲ್ಲ. ಇದು ಒಬ್ಬರಲ್ಲಿ ಸ್ವಲ್ಪ ಜಾಸ್ತಿ ಬರಬಹುದು, ಒಬ್ಬರಲ್ಲಿ ಇದು ಸ್ವಲ್ಪ ಕಡಮೆ ಬರಬಹುದು. ಇದನ್ನು ಅಲ್ಲ ಎಂದು ಹೇಳತಕ್ಕವರು ಯಾರಾದರೂ ಇದ್ದರೆ ಅವರಿಗೆ ಒಕ್ಕಲತನ ಕೈಕೊಂಡು ಪರಿಕ್ಷೆಮಾಡಿನೋಡಿ ಎಂದು ಮಾತ್ರ ಹೇಳಲಿಚ್ಛಿಸುತ್ತೇನೆ. ಸಾಮಾನ್ಯವಾಗಿ ನಾವು ಹಣವನ್ನು ಬ್ಯಾಂಕುಗಳಲ್ಲಿ ಹಾಕಿದ್ರೆ 10 ಕ್ಕೆ 4-5 ರಂತೆ ಬಡ್ಡಿ ಬರುತ್ತದೆ. ಬೇರೆ ಉದ್ಯೋಗದಲ್ಲಿ ತೊಡಗಿಸಿದರೆ 10–18 ಡಿವಿಡೆಂಡ್ ಬರಬಹುದು. ಇನ್ನೊಂದು ಉದ್ಯೋಗದಲ್ಲಿ ಹಣವನ್ನು ಹಾಕಿದರೆ ಅದರಿಂದ ಇನ್ನೂ ಹೆಚ್ಚಿನ ಲಾಭ ಸಿಗಬಹುದು. ಹೀಗಿದ್ದಾಗ್ಗೂ ಜನರು ಏಕೆ ಈ ಒಕ್ಕಲುತನದಲ್ಲೇ ಉಳಿಯುತ್ತಿದ್ದಾರೆಂದು ಕೆಲವರು ಕೇಳಬಹುದು. ಅದಕ್ಕೆ ನನ್ನ ಉತ್ತರ ಇಷ್ಟೆ: ಬುದ್ಧಿ ಜೀವಿಯಲ್ಲದ ಜನರು ಏನೋ ಇಷ್ಟು ಗಂಜೀಗಾದರೂ ಇದರಲ್ಲಿ ಮಾರ್ಗವಿದೆಯಲ್ಲಾ ಅಂತ ಉಳಿದಿದ್ದಾರೇ ವಿನಾ ಮತ್ತೇನೂ ಇಲ್ಲ. ಮೇಲಾಗಿ ಈ ಉದ್ಯಮದಲ್ಲಿ ತೊಡಗತಕ್ಕ ಜನರ ಆದಾಯ ಅವರ ಆರ್ಥಿಕ ಪರಿಸ್ಥಿತಿ ಪಟ್ಟಣಗಳಲ್ಲಿರತಕ್ಕ ನೌಕರರ ಆರ್ಥಿಕ ಪರಿಸ್ಥಿತಿಗಿಂತ ಕಡಿಮೆ ಇಲ್ಲದಂತೆ ಮಾಡುವ ಪಕ್ಷದಲ್ಲಿ ಜನರು ಬುದ್ಧಿಜೀವಿಗಳಾದವರು ಹಳ್ಳಿಗಳಲ್ಲಿ ಉಳಿಯಲಿಕ್ಕೆ ಅವಕಾಶವಾಗಬಹುದೇ ವಿನಾ ಇಲ್ಲದಿದ್ದಲ್ಲಿ ಇದು ಖಂಡಿತ ಉದ್ಧಾರವಾಗುವುದಿಲ್ಲ ಒಕ್ಕಲುತನದ ಅಭಿವೃದ್ಧಿಯೂ ಆಗುವುದಿಲ್ಲ. ಸರ್ಕಾರದವರು

ನಾವು ನೇಮಕ ಮಾಡತಕ್ಕ ಗ್ರಾಮಸೇವಕರುಗಳಿಂದಲಾಗಲೀ ಅಥವಾ ಆ ಎಕ್ಸ್‌ಟೆನ್‌ಷನ್ ಆಫೀಸರುಗಳಿಂದಲಾಗಲೀ ಈ ಒಕ್ಕಲುತನ ಅಭಿವೃದ್ಧಿಯಾಗುತ್ತದೆಂದು ಅವರು ನಂಬಿದ್ದರೆ ಅದು ಅವರ ತಪ್ಪು ಭಾವನೆ. ಈ ನೌಕರರು ಏನಿದ್ದರೂ ಉಪದೇಶಮಾಡಬಲ್ಲರೇ ವಿನಾ ಇವರಿಂದೇನೂ ಸಾಧ್ಯವಿಲ್ಲ. ಈ ನೌಕರರ ಪೂರ್ಣ ಗಮನವೆಲ್ಲಾ ಒಕ್ಕಲುತನದಲ್ಲಿರತಕ್ಕವರ ಕಡೆಗೆ ಹೋಗದೆ ಇವರ ಗಮನವೆಲ್ಲಾ ಕೇವಲ ಅವರ ಡ್ರೆಸ್, ಅವರ ಪಗಾರ, ಅವರ ವರ್ಗಾವರ್ಗಿ, ಅವರ ಭಡತಿ ಇತ್ಯಾದಿಗಳ ಕಡೆಗೆ ಹೋಗುತ್ತದೆ. ಆದುದರಿಂದ ಯಾವತ್ತಿದ್ದರೂ ಈ ಒಕ್ಕಲುತನದ ಕಸುಬಿನಲ್ಲಿ ಸುಸಂಸ್ಕೃತವಾದ ಮನುಷ್ಯ ಮನುಸಾರ ಮುಳುಗಿದಾಗಲೀ ಇದು ಉತ್ತಮ ಸ್ಥಿತಿಗೆ ಬಂದೀತು. ನಾವು ಈ ಉದ್ಯಮದಲ್ಲಿ ತೊಡಗತಕ್ಕವರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸದಿದ್ದರೆ ಏನೂ ಪ್ರಯೋಜನವಾಗುವುದಿಲ್ಲ. ನಾವು ಈ ದಿವಸ ವಿಧಿಸಿರತಕ್ಕ ಕರಪದ್ಧತಿ ಸರಿಯಾಗಿದೆಯೋ ಎಂಬುದನ್ನು ಮತ್ತೆ ವಿಮರ್ಶೆ ಮಾಡತಕ್ಕ ಪ್ರಮೇಯವೇನಿದೆ. ಆದರೆ ನನ್ನ ಅಭಿಪ್ರಾಯದಲ್ಲಿ ನಾವೆಲ್ಲರೂ ರೈತನ ಬಗ್ಗೆ ವಿಶೇಷವಾಗಿ ಮಾತನ್ನೇನೋ ಆಡುತ್ತಿದ್ದೇವೆ. ಆದರೆ ನಮ್ಮ ಆಲೋಚನೆಗಳೆಲ್ಲಾ ಕೃತಿಗಿಳಿದಾಗ ನಮ್ಮ ಪ್ರತಿಯೊಂದು ಆಲೋಚನೆಗಳೂ ಈ ಒಕ್ಕಲುತನಕ್ಕೆ ತದ್ವಿರುದ್ಧವಾಗೇ ಇರುತ್ತವೆ. ನನ್ನ ಅಭಿಪ್ರಾಯದಲ್ಲಿ ಈ ದಿವಸ ನಾವು ವಿಧಿಸಿರತಕ್ಕ ಒಂದು ಲ್ಯಾಂಡರವಿನ್ಯೂ ವಿಚಾರವನ್ನೇ ತೆಗೆದುಕೊಳ್ಳೋಣ. ಇದು ಒಂದು ಯಾವುದೋ ಓಬೀರಾಯನ ಕಾಲದ ಪದ್ಧತಿ. ಹಿಂದಿನ ಕಾಲಕ್ಕೆ ಅನೇಕರು ಪಟ್ಟಣಗಳಲ್ಲಿದ್ದುಕೊಂಡು ಹಳ್ಳಿಗಳಲ್ಲಿ ಜಮೀನನ್ನು ಇಟ್ಟುಕೊಂಡು ಅವರೂ ಕಂದಾಯ ಕೊಡುತ್ತಿದ್ದರು. ಹಳ್ಳಿಯಲ್ಲಿರತಕ್ಕ ರೈತನಿಗೆ ಅಲ್ಲಿ ಒಂದು ಗುಂಟೆ ಜಮೀನಿದ್ದರೂ ಆತ ಕಂದಾಯವನ್ನು ಕೊಡಲೇಬೇಕು. ಪಟ್ಟಣದಲ್ಲಿರತಕ್ಕವರು ಅವರಿಗೆ 3,400—4,000 ಆದಾಯ ಬಂದರೂ ಅವರ ಟ್ಯಾಕ್ಸನ್ನೂ ಕೊಡಬೇಕಾಗಿಲ್ಲ. ಆದರೆ ಪಟ್ಟಣಿಗರ ಬಗ್ಗೆ ತೋರಿಸತಕ್ಕ ಔದಾರ್ಯವನ್ನು ನಾವೀ ದಿವಸ ಹಳ್ಳಿಯಲ್ಲಿರತಕ್ಕವನಿಗೆ ತೋರಿಸುತ್ತಿಲ್ಲ. ಏಕೀ ವ್ಯತ್ಯಾಸ ? ಆದುದರಿಂದ ನಾನು ಸಲಹೆ ಮಾಡುವುದೇನೆಂದರೆ : ಈ ದಿವಸ ಕೇಂದ್ರ ಸರ್ಕಾರದವರು ಯಾವರೀತಿ ಈ ಇನ್‌ಕಂಟ್ಯಾಕ್ಸ್ ಬಗ್ಗೆ 3-4 ಸಾವಿರಕ್ಕೆ ಅಥವಾ ಒಂದು ಸ್ಲ್ಯಾಬ್ ರೇಟಿನ ಮೇಲೆ ವಿನಾಯಿತಿಯನ್ನು ಕೊಟ್ಟಿದ್ದಾರೋ ಅದರಂತೆ ಈ ರೈತರ ವಿಚಾರದಲ್ಲೂ ಜಾರಿಗೆ ತರಬೇಕಾದ್ದು ಅಗತ್ಯವೆಂದು ಹೇಳುತ್ತೇನೆ. ಈ ದಿವಸ ಆ ಸರ್ಕಾರದವರು ಒಕ್ಕಲುತನದಲ್ಲಿರತಕ್ಕವನ ಬಗ್ಗೆ ಹಾಕುತ್ತಿರುವ ಭೂಕಂದಾಯ ಹಾಗೂ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಬಗ್ಗೆ ಇವರಿಗೇನು ಆಧಾರವಿದೆ, ಯಾವ ಹಿನ್ನಲೆಯನ್ನು ಅನುಸರಿಸಿ ಇದನ್ನು ಹಾಕುತ್ತಿದ್ದಾರೋ ಅದು ನನಗೆ ತಿಳಿಯದಾಗಿದೆ. ಇದನ್ನೆಲ್ಲಾ ಸರ್ಕಾರದವರು ಹಳ್ಳಿಯಲ್ಲಿರತಕ್ಕ ರೈತನಿಗೆ ರಸ್ತೆ ಸೇತುವೆಗಳನ್ನು ಮಾಡುವುದಕ್ಕಾಗಿ ಹಾಕುತ್ತಿದ್ದೇವೆಂದು ಹೇಳಬಹುದು. ಆದರೆ ಈ ರಸ್ತೆ ಇತ್ಯಾದಿಗಳ ಅನುಕೂಲವನ್ನೆಲ್ಲಾ ಕೇವಲ ಹಳ್ಳಿಯಲ್ಲಿರತಕ್ಕವರಿಗೇ ಅವೆಯೋ ? ಅವುಗಳನ್ನು ಪಟ್ಟಣದಲ್ಲಿರತಕ್ಕವರೇನೂ ಬಳಸುವುದೇ ಇಲ್ಲವೋ ? ಹಳ್ಳಿಯಲ್ಲಿ ಬೆಳೆಯತಕ್ಕ ಸಾಮಾನುಗಳು ಪಟ್ಟಣಕ್ಕೆ ಬರಬೇಕಾಗಿದೆ. ಪಟ್ಟಣದಲ್ಲಿರತಕ್ಕ ಸಾಮಾನುಗಳು ಹಳ್ಳಿಗಳಿಗೆ ಹೋಗಬೇಕಾಗಿದೆ. ಹೀಗಿರುವಾಗ ಈ ವಿಚಾರದಲ್ಲಿ ಸರ್ಕಾರದವರು ಕೇವಲ ರೈತನೊಬ್ಬನಿಂದಲೇ ಏಕೆ ಇದನ್ನು ವಸೂಲ್ಮಾಡಬೇಕು ? ನಾವು ಇನ್ನಾದರೂ ಈ ಒಕ್ಕಲಿನ ಉತ್ಪನ್ನವನ್ನು ಜಾಸ್ತಿಮಾಡಲೇಬೇಕಾಗಿದೆ. ಅವನಿಂದ ವಸೂಲ್ಮಾಡತಕ್ಕ ಕಂದಾಯವನ್ನು ಕಡಮೆ ಮಾಡಲೇಬೇಕು ಈ ದಿವಸ ನಾವು ಏನು ಈ ಒಂದು ಇನ್‌ಕಂಟ್ಯಾಕ್ಸ ವಿಚಾರದಲ್ಲಿ ಅನುಸರಿಸತಕ್ಕ ಪದ್ಧತಿ ಇದೆಯೋ ಅದರಂತೆ ಇದರಲ್ಲೂ ಅದನ್ನು ಅನುಸರಿಸಬೇಕು. ನಾವು ಹಾಲೀ ಅನುಸರಿಸುತ್ತಿರುವ ಈ ಯಾವುದೋ ಕಾಲದ ಓಬೀರಾಯನ ಪದ್ಧತಿಯನ್ನು ಬಿಟ್ಟುಬಿಡಬೇಕು.

ಹಳೇ ವಿಚಾರಗಳನ್ನೇ ಮಾಡಿಕೊಳ್ಳುತ್ತಾ ಹೋದರೆ ರೈತನ ಅಥವಾ ಭೂಮಿಯನ್ನು ಮಾಡುವಂತಹವನ ಪರಿಸ್ಥಿತಿ ಸುಧಾರಿಸುವುದಕ್ಕೆ ಸಾಧ್ಯವಿಲ್ಲ. ರೈತರಿಂದ ಹೆಚ್ಚು ಉತ್ಪನ್ನ ಬರುತ್ತದೆ ಎಂದು ನಿರೀಕ್ಷಣೆ ಮಾಡುವುದಕ್ಕೆ ಸಾಧ್ಯವಿಲ್ಲ.

4 P.M.

ಮತ್ತೊಂದು ವಿಚಾರ, ಪ್ರತಿಯೊಂದು ಟ್ಯಾಕ್ಸನ್ನೂ ಹಾಕುವಾಗ ವಿಚಾರ ಹೇಗೆ ಬರುತ್ತದೆ ಎಂದರೆ ಈಗ ಮೋಟಾರ್ ವೆಹಿಕಲ್ಸ್ ಆಕ್ಟ್ ಇದೆ. ನನ್ನ ಮನೆಯಲ್ಲಿ ಟ್ರ್ಯಾಕ್ಟರ್ ಇದ್ದು ಅದಕ್ಕೆ ಟ್ರೈಲರ್ ಇದ್ದು ಅದರ ಸಹಾಯದಿಂದ ನಾನು ಬೆಳೆದ ಮಾಲನ್ನು ಪೇಟೆಗೆ ತೆಗೆದುಕೊಂಡು ಹೋದರೆ 12–13 ನೂರು ರೂಪಾಯಿ ವರ್ಷಕ್ಕೆ ಟ್ರ್ಯಾಕ್ಟರ್ ಮೇಲೆ ಟ್ಯಾಕ್ಸ್ ಬೀಳುತ್ತದೆ, ಅದೇ ಪೇಟೆಯಲ್ಲಿ ವಾಸ ಮಾಡುವಂತಹವರು ಉಪಯೋಗಿಸತಕ್ಕ ಮೋಟಾರ್ ಮೇಲೆ 100 ರೂಪಾಯಿ ಸಹ ಬೀಳುವುದಿಲ್ಲ. ಇದು ಎಲ್ಲಿಯ ನ್ಯಾಯ ? ಟ್ರೈಲರ್ ಇಟ್ಟು ಪೇಟೆಗೆ ನನ್ನ ಮಾಲನ್ನು ತೆಗೆದುಕೊಂಡು ಹೋದರೆ ವರ್ಷಕ್ಕೆ 12 ನೂರು ರೂಪಾಯಿ ಟ್ಯಾಕ್ಸ್ ಕೊಡಬೇಕು. ಇಲ್ಲದೇ ಇದ್ದರೆ ನನ್ನ ಟ್ರೈಲರ್

(ಶ್ರೀ ಎಂ. ಆರ್. ಪಾಟೀಲ್)

ಪೇಟೆಗೆ ಹೋಗುವಂತೆಯೇ ಇಲ್ಲ. ಕಾರುಗಳನ್ನು ಇಡುವವರು ಶ್ರೀಮಂತರು, ಆರ್ಥಿಕ ದೃಷ್ಟಿಯಿಂದ ಚೆನ್ನಾಗಿರುವವರು. ಅವರ ಮೇಲೆ ವರ್ಷಕ್ಕೆ ಸಾವಿರ ರೂಪಾಯಿ ಟ್ಯಾಕ್ಸ್ ಏಕೆ ಹಾಕುವುದಿಲ್ಲ? ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ 15–16 ಸಾವಿರ ಕಾರುಗಳು ಇವೆ, ಒಂದೊಂದು ಕಾರಿನ ಮೇಲೆ ಕನಿಷ್ಟ ಪಕ್ಷ 500 ರೂಪಾಯಿನಂತೆ ಹಾಕಿದರೂ ಕೂಡ ಒಂದು ಕೋಟಿ ರೂಪಾಯಿ ಹೆಚ್ಚಾಗಿ ವರಮಾನ ಬರಬಹುದು. ಅದನ್ನು ಏಕೆ ಮಾಡುವುದಿಲ್ಲ? ಅದಕ್ಕೆ ಏಕೆ ಮನಸ್ಸು ಮಾಡುವುದಿಲ್ಲ ಎಂದು ನಾನು ತಮ್ಮನ್ನು ಕೇಳುತ್ತಾ ಇದ್ದೇನೆ. ಟ್ರ್ಯಾಕ್ಟರ್ ಮೇಲೆ ವರ್ಷಕ್ಕೆ 12 ನೂರು ರೂಪಾಯಿ ಟ್ಯಾಕ್ಸ್ ಹಾಕುವ ಕಾಲಕ್ಕೆ ಇದು ಲೆಕ್ಕಕ್ಕೆ ಬರುವುದಿಲ್ಲ. ಏಕೆ ನೀವು ಈ ಕಾರಿನ ಮೇಲೆ ಟ್ಯಾಕ್ಸ್ ಹಾಕುವುದಿಲ್ಲ ಎಂದರೆ ಕಾಯಿದೆ ಮಾಡುವವರು ನೀವು, ಶಹರದಲ್ಲಿ ವಾಸ ಮಾಡುವವರು ನಾವು. ಮೋಟಾರಿನ ಮೇಲೆ ಹೆಚ್ಚು ಟ್ಯಾಕ್ಸ್ ಹಾಕಿದರೆ ನಮಗೆ ತೊಂದರೆ ಬರುತ್ತದೆ. ದುರ್ದೈವದಿಂದ ರೈತನ ಬಡತನದಿಂದ ಅವನ ಸಂಘಟನೆಯಾಗಿಲ್ಲ, ಅವನಿಗೆ ಯಾವ ಒಂದು ರಾಜಕೀಯ ಮುಖಂಡತ್ವ ಇಲ್ಲ. ರಾಜಕೀಯದಲ್ಲಿ ಅವನು ಯಾವ ಯಾವ ಮುಖಂಡತ್ವವನ್ನೂ ಗಳಿಸಿಕೊಂಡಿಲ್ಲ. ಇವತ್ತಿನ ದಿವಸ ಎಂ.ಎಲ್.ಎ. ಗಳಾಗಲಿ, ಎಂ.ಪಿ. ಗಳಾಗಲಿ ಯಾರು ಇದ್ದರೆ ಅವರು ಅರ್ಧಮರ್ಧ ಒಕ್ಕಲುತನದಲ್ಲಿದ್ದು 10–20 ಎಕರೆಯನ್ನು ಹೊಂದಿದ್ದಾರೆ, ಮತ್ತು ವಕೀಲ ವೃತ್ತಿಯಿಂದ ಜೀವನ ಮಾಡುವವರು ಇದ್ದಾರೆಯೇ ಹೊರತು ಕೇವಲ ಭೂಮಿಯಿಂದಲೇ ಉತ್ಪಾದನೆ ಮಾಡಿ ಅಧಿಕಾರ ಸ್ಥಾನದಲ್ಲಿರುವವರು ಯಾರೂ ಇಲ್ಲ. ಆದ್ದರಿಂದ ಇದು ಮನುಷ್ಯನ ಒಂದು ಬಲ ಹೀನತೆ, ಆದ್ದರಿಂದ ಇವತ್ತಿನ ದಿವಸ ಒಕ್ಕಲುತನಕ್ಕೆ ಹೆಚ್ಚು ಆಹಾರವನ್ನು ಬೆಳೆಸಿಕೊಳ್ಳಬೇಕು, ಅವರಿಗೆ ಪ್ರೋತ್ಸಾಹವನ್ನು ಕೊಡಬೇಕು ಎಂದು ಹೇಳಿ ತಿಳಿಸುತ್ತಾ ಇದ್ದಾರೆ. ಸರ್ಕಾರದವರು ಒಂದು ಕ್ವಿಂಟಾಲ್ ಜೋಳಕ್ಕೆ 40-50 ರೂಪಾಯಿ ಅಂತ ಗೊತ್ತುಮಾಡಿದ್ದಾರೆ. ಈ ಲೆಕ್ಕ ಏಕೆ ತೆಗೆದುಕೊಂಡರು? ಯಾವ ರೀತಿ ಫಾಯ್ದೆ ಆಗುತ್ತದೆ? ಇದನ್ನು ಯಾರು ಹೇಳಿದರೋ ಏನೋ ತಿಳಿಯದು, ಇವತ್ತಿನ ದಿವಸ ನನ್ನ ಕೈಯಲ್ಲಿರುವ ಈ ಅಂಕಿಅಂಶದ ಪುಸ್ತಕದಿಂದ ನನಗೆ ತಿಳಿಯುವುದು ಇಷ್ಟೇ. ಒಂದು ಎಕರೆಗೆ ಒಂದೂವರೆ ಕ್ವಿಂಟಾಲ್ ಜೋಳ ಆವರೇಜ್ ಆಗಿ ಬೆಳೆಯುತ್ತದೆ. ಒಂದು ಕ್ವಿಂಟಾಲ್‌ಗೆ 40 ಅಥವಾ 50 ರೂಪಾಯಿ ಎಂದರೆ ಒಂದು ಎಕರೆಗೆ 75 ರೂಪಾಯಿ ಸಹ ಬರುವುದಿಲ್ಲ. ಇನ್ನು ಶೇಂಗಾ ನೋಡಿದರೆ ಎರಡೂವರೆ ಕ್ವಿಂಟಾಲ್ ಒಂದು ಎಕರೆಗೆ ಬರುತ್ತದೆ, ಶೇಂಗಾ ಧಾರಣೆ ಪರ್ ಕ್ವಿಂಟಾಲ್ 80 ರೂಪಾಯಿ ಉಂಟು. 200 ರೂಪಾಯಿ ಶೇಂಗಾಕ್ಕೆ ಬರಬಹುದು. ಒಂದು ಎಕರೆ ಜೋಳ ಬೆಳೆದರೆ 75 ರೂಪಾಯಿ ಸಹ ಬರುವುದಿಲ್ಲ, ಎಂದ ಮೇಲೆ ಈ ವರ್ಷ ಜೋಳ ಬೆಳೆದವನು ಮುಂದಿನ ವರ್ಷ ಶೇಂಗಾಕ್ಕೆ ಪರಿವರ್ತನೆ ಮಾಡಬಹುದು. ಅದರಿಂದ ಹೆಚ್ಚು ಆಹಾರ ಬೆಳೆಯಬೇಕೆಂಬ ನೀತಿ ಏನಿದೆ ಅದಕ್ಕೆ ಧಕ್ಕೆ ಬರುತ್ತದೆ ಎಂಬುದನ್ನು ಅರಿತುಕೊಳ್ಳಬೇಕು. ಆದ್ದರಿಂದ ಈ ವಿಷಯಗಳನ್ನೆಲ್ಲಾ ದೀರ್ಘವಾಗಿ ಪರಿಶೀಲನೆ ಮಾಡಬೇಕು. ಕೇವಲ ಪ್ರೊಕ್ಯೂರ್‌ಮೆಂಟ್ ಮಾಡಿಕೊಳ್ಳಬೇಕು, ಆಹಾರವನ್ನು ದೊರಕಿಸಿಕೊಳ್ಳಬೇಕು ಎಂಬುದನ್ನೇ ಮನಸ್ಸಿನಲ್ಲಿಟ್ಟುಕೊಂಡು ಅದರ ಪ್ರತಿಕ್ರಿಯೆ ಹೇಗೆ ಎಂಬುದನ್ನು ವಿಚಾರ ಮಾಡದೇ ಒಂದು ಧಾರಣೆಯನ್ನು ಗೊತ್ತುಮಾಡಿದರೆ ಅದರ ಪರಿಣಾಮ ಮುಂದಿನ ವರ್ಷ ಮತ್ತಷ್ಟು ಕೆಟ್ಟ ಆಗಬಹುದು ಎಂಬುದನ್ನು ಅರಿತಿರಬೇಕು. ಇವತ್ತಿನ ದಿವಸ ನನ್ನ ಅಭಿಪ್ರಾಯದ ಪ್ರಕಾರ 1960–61ನೇ ಇಸವಿಯಲ್ಲಿ ಯಾವ ಬೆಲೆ ಇತ್ತು, ಅದಕ್ಕೆ ಎರಡರಷ್ಟು ಬೆಲೆ ಕೊಟ್ಟ ಹೊರತು ರೈತರ ಆರ್ಥಿಕ ಸ್ಥಿತಿ ಲಾಭದಾಯಕ ಮಟ್ಟಕ್ಕೆ ಬರುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಸ್. ನಿಜಲಿಂಗಪ್ಪ.—ಜೋಳಕ್ಕೆ ಒಂದು ಕ್ವಿಂಟಾಲಿಗೆ ಎಷ್ಟು ಕೊಡಬೇಕೆಂದು ಹೇಳುತ್ತೀರಿ?

ಶ್ರೀ ಎಂ. ಆರ್. ಪಾಟೀಲ್.—ಕನಿಷ್ಟ 60 ರೂಪಾಯಿ ಕೊಡಬೇಕೆಂದು ಹೇಳುತ್ತೇನೆ. ಇವತ್ತಿನ ದಿವಸದ ಬೆಲೆಯನ್ನು ವಿಚಾರ ಮಾಡಿ ಹೇಳುವಂತಹ ಮಾತು ಅದು. ಆದರೂ ಕೂಡ ಅದು ಅವನಿಗೆ ಲಾಭದಾಯಕವಾಗಿ ಪ್ರೋತ್ಸಾಹ ಕೊಡುವಂತೆ ಆಗುತ್ತದೆಯೋ ಇಲ್ಲವೋ ಹೇಳಲಾರೆ. ಇವತ್ತಿನ ದಿವಸದ ಪರಿಸ್ಥಿತಿಯಲ್ಲಿ ಸಾಧ್ಯಾಸಾಧ್ಯಕಗಳನ್ನು ವಿಚಾರ ಮಾಡಿಕೊಂಡು ಹೆಚ್ಚಿಗೆ ಬೆಲೆಯನ್ನು ಕೊಡಲೇಬೇಕಾಗುತ್ತದೆ. ಹೆಚ್ಚು ಬೆಲೆಯನ್ನು ಕೊಟ್ಟರೆ ಪಟ್ಟಣದಲ್ಲಿ ಇದ್ದವರಿಗೆ ಹೊಟ್ಟೆಗೆ ಹೇಗೆ ಹಾಕಬೇಕು ಎಂದು ಸರ್ಕಾರದವರು ಕೇಳಬಹುದು. ಸರ್ಕಾರಿ ನೌಕರರಿಗೆ ಹೊಟ್ಟೆಗೆ ಹೇಗೆ ಹಾಕಬೇಕು, ಗಿರಣಿಯಲ್ಲಿ ಕೆಲಸ ಮಾಡತಕ್ಕ ಕೆಲಸಗಾರರ ಹೊಟ್ಟೆಗೆ ಹೇಗೆ ಹಾಕಬೇಕು ಎಂಬ ಪ್ರಶ್ನೆಯನ್ನು ಎತ್ತಬಹುದು. ಈ ಪ್ರಶ್ನೆ ಆಧಾರರಹಿತವಾದುದ್ದು ಏಕೆ? ರೈತನಿಗೆ ನೀವು ಹೆಚ್ಚಿಗೆ ಬೆಳೆಯಲಿಕ್ಕೆ ಪ್ರೋತ್ಸಾಹ ಕೊಡಲು ಅವನಿಗೆ ಯೋಗ್ಯವಾದ ಬೆಲೆಯನ್ನು ಕೊಡಬೇಕಾದರೆ ಸರ್ಕಾರಿ ನೌಕರರಿಗೆ ಸಬ್ಸಿಡಿ ಅಥವಾ ಯಾವುದಾದರೂ ಕೊಡಿ. ಕಾರ್ಖಾನೆಗಳವರು ಇವತ್ತಿನ ದಿವಸ

ನೂರಕ್ಕೆ ಹತ್ತು-ಹನ್ನೆರಡು ರೂಪಾಯಿಗಳ ಡಿವಿಡೆಂಡ್ ಹಂಚುತ್ತಾ ಇದ್ದಾರೆ. ಅವರು ತಮ್ಮ ನೌಕರರಿಗೆ ಮತ್ತು ಮುನಿಸಿಪಾಲಿಟಿ ಅಥವಾ ಕಾರ್ಪೋರೇಷನ್‌ದವರು ಅವರ ನೌಕರರಿಗೆ ಸಬ್ಸಿಡಿ ಕೊಟ್ಟು ಅದನ್ನು ಮೇಕಪ್ ಮಾಡಬೇಕೇ ಹೊರತು ರೈತನು ಬೆಳೆಯುವ ಪದಾರ್ಥಕ್ಕೆ ಬೆಲೆಯನ್ನು ಕಡಿಮೆಯಾಗಿ ನಿಗದಿ ಮಾಡಿ ಮತ್ತಷ್ಟು ಅವನನ್ನು ತೊಂದರೆಗೆ ಗುರಿ ಮಾಡುವುದು ಯೋಗ್ಯವಾದುದಲ್ಲ, ನ್ಯಾಯವಾದುದಲ್ಲ. ಮತ್ತು ಅದು ತತ್ವವೂ ಕೂಡ ಅಲ್ಲ. ಸಾಮಾನ್ಯ ಜ್ಞಾನದ ಪ್ರಕಾರ ತಿಳಿಯುವುದು ಏನೆಂದರೆ ಯಾವುದಾದರೂ ಒಂದು ಹಿಂಡುವ ಹಸು ಅಥವಾ ಎಮ್ಮೆ ಇದ್ದರೆ ಅದಕ್ಕೆ ಯೋಗ್ಯವಾದ ಪುಷ್ಟಿಕರವಾದ ಆಹಾರವನ್ನು ಕೊಟ್ಟು ಹಾಲನ್ನು ಹಿಂಡಬೇಕೇ ಹೊರತು ಹಾಗಲ್ಲದೇ ಅದಕ್ಕೆ ಹೊಟ್ಟೆಗೆ ಹಾಕದೆ ಅಥವಾ ಹೊಟ್ಟೆಗೆ ಹಾಕುವುದನ್ನು ಕಡಿಮೆ ಮಾಡಿದರೆ ಅದು ಕಡಿಮೆ ಹಾಲನ್ನು ಕೊಡುತ್ತದೆಯೇ ಹೊರತು ಹೆಚ್ಚು ಹಾಲನ್ನು ಕೊಡುವುದಿಲ್ಲ. ರೈತನಿಂದ ಹೆಚ್ಚು ಉತ್ಪನ್ನವನ್ನು ಅಪೇಕ್ಷೆ ಮಾಡುವುದಾದರೆ ಅವನ ಪದಾರ್ಥಕ್ಕೆ ಹೆಚ್ಚು ಬೆಲೆಯನ್ನು ಕೊಡತಕ್ಕದ್ದೇ ಹೊರತು ಅದನ್ನು ಬಿಟ್ಟು ಇವತ್ತಿನ ದಿವಸ ಜನರಿಗೆ ಆಹಾರವನ್ನು ಕೊಡುವ ಸಲುವಾಗಿ ಜೋಳಕ್ಕೆ ಕ್ವಿಂಟಾಲ್‌ಗೆ 40-50 ರೂಪಾಯಿ ಕೊಡುತ್ತೇವೆ ಎಂದರೆ ಆಹಾರ ಧಾನ್ಯ ಬೆಳೆಯುವುದಕ್ಕೆ ಪ್ರೋತ್ಸಾಹ ಕೊಟ್ಟಂತೆ ಆಗುವುದಿಲ್ಲ. ಪ್ರತಿಯೊಂದು ಸಲ ಕಾಯಿದೆ ಮಾಡುವಾಗಲೂ ರೈತನ ಹಿತದೃಷ್ಟಿಯಿಂದ ಮಾಡುತ್ತೇವೆ ಎಂದು ಹೇಳುತ್ತೀರಿ. ರೈತನು ಬೆಳೆದ ಮಾಲನ್ನು ಪಟ್ಟಣಕ್ಕೆ ತಂದು ಅದನ್ನು ಅಲ್ಲಿ ಮಾರಾಟ ಮಾಡಬೇಕು, ಅಂದರೆ ಅದರ ಮೇಲೆ ಆಕ್ಟ್ರಾಯಿ ಲೆವಿ ಮಾಡುತ್ತೀರಿ. ಈ ಆಕ್ಟ್ರಾಯಿ ರೈತನ ಮೇಲೆ ಏಕೆ ಬೀಳಬೇಕೆಂದು ನಾನು ಬಹಳವಾಗಿ ವಿಚಾರ ಮಾಡಿದ್ದೇನೆ. ಇದಕ್ಕೆ ಏನು ಆಧಾರವೋ ನನಗೆ ತಿಳಿದಿಲ್ಲ. ನಾನು ನಮ್ಮ ಊರಿನಿಂದ ಹುಬ್ಬಳ್ಳಿಗೆ ಹತ್ತಿಯನ್ನು ತಂದು ಮಾರಾಟ ಮಾಡುತ್ತೇನೆ, ಅದು ಮುಂಬೈಗೆ ಹೋಗುತ್ತದೆ. ಆದರೂ ಕೂಡ ನಾನು ಅದಕ್ಕೆ ಆಕ್ಟ್ರಾಯ್ ಕೊಟ್ಟೇಕೊಡತಕ್ಕದ್ದು.

ಇದು ಕೇವಲ ಪಟ್ಟಣದ ಹಿತದೃಷ್ಟಿಯಿಂದ ಮಾಡಿದಂಥ ಕಾಯಿದೆ. ಈ ಕಾಯಿದೆಗಳನ್ನು ಮಾಡುವಾಗ ಮುನಿಸಿಪಾಲಿಟಿಗಳಿಗೆ ರೈತರು ತರುವಂಥ ಮಾಲಿನ ಮೇಲೆ ಆಕ್ಟ್ರಾಯಿ ಬೀಳುತ್ತದೆ; ಇದರ ಮೇಲೆ ಆಕ್ಟ್ರಾಯಿ ಬೀಳುವಂಥದ್ದಲ್ಲ ಎನ್ನುವುದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಮುನಿಸಿಪಾಲಿಟಿಗಳ ಉತ್ಪನ್ನ ಕಡಮೆ ಇದ್ದರೆ ಅವರು ಮನೆಗಳ ಮೇಲೆ ಹೆಚ್ಚು ಕರವನ್ನು ಹಾಕಲಿ, ವಾಟರ್ ರೇಟ್ ಹಾಕಲಿ. ಅದರೆ ರೈತರು ಬೆಳೆದಂತೆ ಮಾಲಿನ ಮೇಲೆ ಮುನಿಸಿಪಾಲಿಟಿಗಳು ಆಕ್ಟ್ರಾಯಿ ವಸೂಲ್ಮಾಡತಕ್ಕದ್ದು ತಪ್ಪು.

ಭೂಕಂದಾಯವನ್ನು ಕೂಡಲೇ ತೆಗೆದುಹಾಕತಕ್ಕದ್ದು ಮತ್ತು ಉತ್ಪನ್ನದ ಮೇಲೆ ವರಮಾನ ತೆರಿಗೆಯನ್ನು ಹಾಕತಕ್ಕದ್ದು ಎಂದು ಹೇಳಿದೆ. ಸರ್ಕಾರ ತಮ್ಮ ಉತ್ಪನ್ನವನ್ನು ಈ ರೀತಿಯಾಗಿ ತುಂಬಿಕೊಳ್ಳಬಹುದು. ಪಟ್ಟಣಗಳಲ್ಲಿ ದೊಡ್ಡದೊಡ್ಡ ಅರಮನೆಗಳನ್ನು ಕಟ್ಟಿಕೊಂಡಿರುತ್ತಾರೆ. ದೊಡ್ಡದೊಡ್ಡ ಬ್ಯಾಂಕುಗಳವರು ಮತ್ತು ಇತರರು ಮಹಲುಗಳನ್ನು ಕಟ್ಟಿಕೊಂಡಿರುತ್ತಾರೆ. ರೈತನಾದವನ ಮೇಲೆ ಪ್ರತಿಯೊಂದು ಗುಂಠ ಭೂಮಿಗೂ ಕಂದಾಯವನ್ನು ಹಾಕುತ್ತಾರೆ. ಆದರೆ ಪಟ್ಟಣಗಳನ್ನು ಇರುವವರ ಮೇಲೆ ಬೀಳುವುದು ವರಮಾನ ತೆರಿಗೆ ಮಾತ್ರ. ಇಂಥವರ ಮೇಲೆ ಇಮ್ಮೂವಬಲ್ ಪ್ರಾಪರ್ಟಿ ಟ್ಯಾಕ್ಸ್ ಏಕೆ ಹಾಕುವುದಿಲ್ಲ? ಹಿಂದೆ ಇಂಥ ವಿಧೇಯಕವನ್ನು ಈ ಸಭೆಯಲ್ಲಿ ಮಂಡಿಸಿ ಅದನ್ನು ಜಾರಿಗೆ ತರುವುದು ಆಗಿಲ್ಲ. ಅದು ನಮ್ಮ ವಿಫಲತೆಯನ್ನು ತೋರಿಸುತ್ತದೆ. ದೊಡ್ಡದೊಡ್ಡ ಶ್ರೀಮಂತರ ಒತ್ತಾಯಕ್ಕೆ ಸಿಕ್ಕಿ ಅವರು ಒತ್ತಾಯವನ್ನು ತರುತ್ತಿರುತ್ತಾರೆಂದು ಭಯಪಟ್ಟು ಜಾರಿಗೆ ತಂದಿಲ್ಲವೆಂದು ಕಾಣುತ್ತದೆ. ರೈತನಾದರೋ ತನ್ನ ಮೇಲೆ ಹಾಕಿದ ಕಂದಾಯವನ್ನು ಕೊಡುವುದಿಲ್ಲ ಎಂದು ಪ್ರತಿಭಟನೆ ಮಾಡುವುದಿಲ್ಲ, ಆದ್ದರಿಂದ ಅವನ ಮೇಲೆ ಭೂಕಂದಾಯವನ್ನು ಏರಿಸುತ್ತ ಹೋಗುತ್ತಾರೆ. ಪಟ್ಟಣದಲ್ಲಿರುವವರ ಮೇಲೆ ಪ್ರತಿವರ್ಷ ಬೀಳುವಂಥ ಕಂದಾಯವನ್ನು ಹಾಕದೆ ಹೋದರೆ ಶ್ರೀಮಂತ ಹೆಚ್ಚು ಶ್ರೀಮಂತನಾಗುತ್ತಾನೆ, ಬಡವ ಮತ್ತೂ ಬಡವನಾಗುತ್ತಾನೆ, ಇಂಥ ಪರಿಸ್ಥಿತಿ ಬರುತ್ತದೆ. ಆದುದರಿಂದ ದೊಡ್ಡದೊಡ್ಡ ಶ್ರೀಮಂತರ ಮನೆಗಳಿಗೆ ಹೆಚ್ಚು ಕರವನ್ನು ಹಾಕುವುದರಿಂದ ತೊಂದರೆಯಾಗುವುದಿಲ್ಲ. ನೂರಕ್ಕೆ 18, 12, ಹೀಗೆ ಬೋನಸ್ ಕೊಡುವುದರಲ್ಲಿ ಒಂದರಷ್ಟು ಕಡಮೆ ಆದರೆ ಅದರಿಂದ ಏನೂ ಹಾನಿಯಾಗುವುದಿಲ್ಲ. ಇದನ್ನು ದೀರ್ಘವಾಗಿ ಯೋಚನೆ ಮಾಡಬೇಕು. ಹಾಗೆ ಮಾಡದೆ ಪುನಃ ಪುನಃ ರೈತನ ಮೇಲೆ ಭಾರವನ್ನು ಹಾಕಬಾರದು. ಸರ್ಕಾರ ಇಮ್ಮೂವಬಲ್ ಪ್ರಾಪರ್ಟಿ ಮೇಲೆ ತೆರಿಗೆಯನ್ನು ಹಾಕಿದರೆ ಶಹಭಾಸಗಿರಿ ಬರಬಹುದು ಎಂದು ನಾನು ಆಶಯ ಪಡುತ್ತೇನೆ.

ರಾಜ್ಯದಲ್ಲಿರುವ ಆಹಾರ ಕೊರತೆಯನ್ನು ನೀಗಬೇಕು ಎಂದು ಸರ್ಕಾರದ ಸದಿಚ್ಛೆ ಇದೆ. ಆದರೆ ಕೇವಲ ಸರ್ಕಾರದ ಸಿಬ್ಬಂದಿಯನ್ನು ನೇಮಿಸುವುದರಿಂದ, ವ್ಯವಸಾಯ ಇಲಾಖೆಯ ಸಿಬ್ಬಂದಿಯನ್ನು ಹೆಚ್ಚಿಸುವುದರಿಂದ, ಸಹಕಾರ ಇಲಾಖೆಯ ನೌಕರರನ್ನು ಹೆಚ್ಚಿಸುವುದರಿಂದ ಆಹಾರದ ಕೊರತೆಯನ್ನು ನೀಗುವುದಕ್ಕೆ ಸಾಧ್ಯವಿಲ್ಲ. ಸಹಕಾರ ಇಲಾಖೆಯ ಮುಖಾಂತರ ವರ್ಷಕ್ಕೆ 15-20

(ಶ್ರೀ ಎಂ. ಆರ್. ಪಾಟೀಲ್)

ಕೋಟಿ ರೂಪಾಯಿಗಳನ್ನು ಸಾಲವಾಗಿ ಸರ್ಕಾರ ಕೊಡುತ್ತಿದೆ. ರಿಸರ್ವ್ ಬ್ಯಾಂಕಿನಿಂದ ನೂರಕ್ಕೆ ಎರಡರಂತೆ ಬಡ್ಡಿಗೆ ಹಣವನ್ನು ತೆಗೆದುಕೊಂಡು ಅದು ರೈತನಿಗೆ ಮುಟ್ಟುವ ವೇಳೆಗೆ ನೂರಕ್ಕೆ 7-8 ರಂತೆ ಬಡ್ಡಿಯಾಗುತ್ತದೆ. ಈ ಹಣವನ್ನು ರೈತನಿಗೆ ಮುಟ್ಟಿಸುವುದಕ್ಕೆ ಸಿಬ್ಬಂದಿಗಾಗಿ ಸೇಕಡ 5 ರಂತೆ ಖರ್ಚಾಗುತ್ತಿದೆ. ರೈತರ ಮೇಲೆ ಹಾಕತಕ್ಕ ಭೂಕಂದಾಯವನ್ನು ಸರ್ವತ್ರ ಮಾಫಿ ಮಾಡಿದರೆ, ವರಮಾನ ತೆರಿಗೆಯಲ್ಲಿ ಯಾವ ದರಗಳಿವೆ, ಆ ಪ್ರಕಾರ ಹಾಕಿದರೆ ಸರ್ಕಾರಕ್ಕೆ ಹೆಚ್ಚು ಹಣ ಬರುತ್ತದೆ. ಆ ರೀತಿ ಮಾಡಿರಿ. ಅದರಿಂದ ಇನ್ನು ಹತ್ತು ವರ್ಷ ಕಾಲದಲ್ಲಿ ರೈತರು ತಮ್ಮ ಕಾಲ ಮೇಲೆ ತಾವು ನಿಲ್ಲುವಂಥ ಪರಿಸ್ಥಿತಿ ಬರುತ್ತದೆ. ಆಗ ಈ ವಾಮ ಮಾರ್ಗ ಏನಿದೆ, ರೈತನಿಗೆ ಸಾಲ ಕೊಟ್ಟು ಅವನ ಸಾಲದ ಬಡ್ಡಿಯಿಂದ ಬರುವ ಹಣದಲ್ಲಿ ನೌಕರಷಾಹಿಯನ್ನು ಬೆಳಸಬೇಕಾದ್ದು ಇಲ್ಲ. ಕಂದಾಯವನ್ನು ಮಾಫಿ ಮಾಡುವುದರಿಂದ ನೇರವಾಗಿ ರೈತನಿಗೇ ಸಹಾಯ ದೊರತಂತಾಗುತ್ತದೆ. ಇದರಿಂದ ರೈತ ಸಾಲವನ್ನು ಮಾಡುವುದು ತಪ್ಪಿ ದೇಶಕ್ಕೂ ಕಲ್ಯಾಣವಾಗುತ್ತದೆ. ಅದನ್ನು ಬಿಟ್ಟು ಎಲ್ಲಿಂದಲೋ ಸಾಲವನ್ನು ತಂದು ಎರಡನೆಯವರಿಗೆ ನೂರಕ್ಕೆ 5 ರಂತೆ ಕೊಡುವುದರಿಂದ ಕಲ್ಯಾಣವಾಗಲಿಕ್ಕಿಲ್ಲ. ಆದುದರಿಂದ ನನ್ನ ಸೂಚನೆಗಳಲ್ಲಿ ಮೊದಲನೆಯದು ಭೂಕಂದಾಯವನ್ನು ಕೂಡಲೇ ತೆಗೆಯತಕ್ಕದ್ದು; ವ್ಯವಸಾಯದ ಉತ್ಪನ್ನಗಳ ಮೇಲಿನ ತೆರಿಗೆಯನ್ನು ವರಮಾನ ತೆರಿಗೆಯ ಮಟ್ಟದಲ್ಲಿ ಹಾಕತಕ್ಕದ್ದು, ಮೋಟಾರು ಕಾರುಗಳನ್ನು ಹೊಂದಿರುವ ಮಾಲೀಕರ ಮೇಲೆ ವರ್ಷಕ್ಕೆ ಒಂದು ಸಾವಿರ ರೂಪಾಯಿಗಳನ್ನು ತೆರಿಗೆ ರೂಪದಲ್ಲಿ ಹಾಕತಕ್ಕದ್ದು ಮತ್ತು ಅರ್ಬನ್ ಇಮ್ಮೂವಬಲ್ ಪ್ರಾಪರ್ಟಿ ಕಾಯಿದೆಯನ್ನು ಆದಷ್ಟು ಕೂಡಲೇ ತರುವುದು, ಈ ಕಾರ್ಯಗಳನ್ನು ಮಾಡಬೇಕು. ಇದರಿಂದ ಸರ್ಕಾರಕ್ಕೆ ಕೊರತೆ ಬೀಳುವ ಉತ್ಪನ್ನವನ್ನು ತುಂಬಿಕೊಳ್ಳಬಹುದು. ಈ ಕೆಲವು ಸೂಚನೆಗಳನ್ನು ಮಾಡಲು ನನಗೆ ಸಮಯ ಕೊಟ್ಟದ್ದಕ್ಕೆ ಅಧ್ಯಕ್ಷರಿಗೆ ಅಭಾರ ಮನ್ನಿಸುತ್ತೇನೆ.

Sri P. F. D'MELLOW (Nominated).—Mr. Speaker, Sir, the Hon'ble Finance Minister is certainly entitled to point with pride to a truly impressive record of expenditure on Education, over the past few years.

A steady rise from Rs. 916·95 lakhs in 1957-58 to the present figure of Rs. 2,498.78 lakhs is an achievement of which any Government may take pride and we owe it to the Education Minister, no less that the Finance Minister, for ensuring the requisite degree of attention to this most vital of all nation building department, Education.

Sir, in like manner, it is reassuring to learn that in both the matter of primary education as well as at the secondary stage, there has been registered a steady rise in the demand.

I am sorry that the budget speech does not give us more information than it has concerning the scheme to upgrade schools to the XI Standard. Fifty schools in the whole State is a modest figure and I am disappointed at the number of excellent schools, which are fully equipped, in both the matter of teaching staff and equipment and which are as yet to receive the necessary permission to undertake tuition at the XI Standard stage.

As one who has been associated with a system of education which has this eleven year pattern, I believe that once Government decides to come out boldly in favour of this scheme, we shall all come to appreciate the better the many advantages to be had by allowing the pupil that extra year in the best environment possible, at his particular age, a school.

Sir, as regards the proposal to establish a Secondary Education Board for the State, I ask that care be taken when drafting the bill to ensure that provision is made to permit schools teaching through the medium of a minority language to continue enjoying the privilege provided them, under the existing All-India Code, to elect to affiliate to

an examination of their free choice, even outside the State if necessary for it will be wrong to deprive these schools of their privileges merely to provide for the existence of a State level Secondary Education Examination Board.

Mr. Speaker, I wish it were possible for me to turn from the subject of education, on this note, but Sir, I shall be failing in the whole purpose of my presence in this august House, were I to neglect to remind Government of the inordinate delay in extending the benefits of free primary education, to children of the Anglo-Indian community through the medium of their mother tongue, English.

I am fully aware that the problem is one that bristles with difficulties, but Sir, I refuse to believe that a Government which has shown such commendable courage in other fields of education shold confess to an incapacity to solve this problem when the numbers involved and the cost likely to be incurred is almost negligible.

The fifth report of the Commissioner for linguistic minorities issued by the Government of India, after due consultation with the Chief Ministers of all States, as an All-India Code, setting out the agreed minimum safeguards which States are required to provide their linguistic minorities, in the matter of both primary as well as secondary education, and it only requires the serious application of this Code, for the help that I plead for.

Mr. Speaker, Sir, I ask the Hon'ble Education Minister to bear with me, when I so constantly return to this same subject year after year, on the occasion of the presentation of the State Budget. Sir, my excuse is the great distress that I experience when I think of the many children of the Anglo-Indian community who will be condemned to a life of semi-literacy, and worse, unless afforded the relief that free primary education and concessional relief at the secondary stage will provide.

Sir, there is a danger when one is obliged to repeat a request as often as I am obliged to, that it be mistaken that he is seeking charity or special privilege,—Allow me to make it exceedingly clear, that there is something different, for I am in fact demanding, for the children of the Anglo-Indian Community, with its large under-privileged section in this State, the God given right to be allowed to grow up possessed of a sense of pride at being born citizens of a great country, andto be equipped with the wherewithal to play their own significant part in the development of our common mother land

Mr. Speaker, Sir, I now turn to the question of the pensioner, to note with regret that in expressing the concern of Government for the welfare of its low paid employees, the Hon'ble Finance Minister had no word of comfort for the erstwhile and faithful servant, grown old and feeble after a life dedicated to the service of the State. Sir, the pensioner, now on the shelf, has nothing more sustaining than his memories to keep him alive, for at its present value, the pittance we term his person, will permit him nothing more nourishing than the recollection of better days. However difficult our financial position

(SRI P. F. D'MELLOW)

whatever the clamour from other quarters, can any country which claims to seek a socialist pattern of life, pretend complete indifference to the pressing needs of its aged and senior citizens, who are no less hardpressed to make ends meet than any who still have the vigour to make their voices heard.

Sir, I beg Government not to turn a completely deaf ear to the representations that it has received from the Mysore State Pensioners Association for an increase in the dearness allowance to low paid pensioners, but when the award of the Finance Commission comes to be announced and the Hon'ble Finance Minister sets about to implement his assurance to the low paid Government servant, he will bear the old pensioner in mind, and afford him some similar relief.

Mr. Speaker, Sir, Government's decision to set up a standing committee for administrative reforms, to keep under constant review ways and means of effecting improvements in the various departments, reminds me that of the decision it took sometime towards the middle of 1964 to constitute informal consultative committees to afford members of the Legislature an opportunity for closer liaison with the various different departments of Government, the purpose was to allow for them to help focus attention to important problems. Sir, I ask Government to revive that decision and implement it without delay, for such committees could serve an even more important role by helping members of the Legislature, especially those who sit on its Opposition benches, to feel somewhat more closely associated with Government work.

Sir, that great scholar and authority on the working of parliamentary democracy in India, Sri K. M. Munshi, in one of his essays on the subject has analysed the problem that faces the Opposition in our Legislatures throughout the country—As he rightly remarks, the Opposition in our several legislatures live constantly with the knowledge that there is no possibility within the forseeable future of their replacing the party in power. While members of the Ruling Party have their party meetings to provide them with the opportunity to make their own special and individual contribution to the shaping of Government policies, members on the Opposition side are being relentlessly driven through frustration to take up extreme positions, if only to make an anti-government impact on the electorate outside.

I believe that the decision to allow members of the legislature a somewhat closer insight into the working of our Government departments through means of these Consultative Committees was a step in the right direction, and deserves to be implemented.

Mr. Speaker Sir, I now come to a subject which has been uppermost in the public mind for several weeks, and if the statements that have been vouchsafed us so far any indication, it would appear that it devolves on each one of us, who have the unity of our country at heart, to think constructively on the subject—Sir, I refer to the language issue, but only to the extent that it concerns the work of our legislature.

4-30 P.M.

Sir, in referring to this matter, I have no desire to provoke further and unnecessary controversy, but rather to invite some constructive thinking beginning with the work of this Hon'ble House, so that by creating conditions for mutual understanding and kindly tolerence among ourselves here, we shall be setting the very best form of example to the world outside.

Mr. Speaker, the Mysore Official Language Act while providing that the main regional langauge, Kannada shall be the official language of our State, has permitted us the use of English and Hindi, while conducting the business of the State Legislature. On the other hand, as I understand them some of my Hon'ble colleagues, seek to create conditions whereby Kannada will be taken into greater use in the legislature. Far from quarreling with such an objective, I fully support them, but while doing so, I ask whether we help with the development of Kannada, were we to deprive it of the many benefits that it must derive by allowing to grow in an atmosphere, whereby this great langauge can become enriched by association with an already developed language such as English is.

On the contrary, I submit that Kannada can only develop to its full stature as a modern language, capable of interpreting the genius of the Kannadiga only by encouraging our Kannada writers, scholars, poets, artists, and craftsmen to draw to the fullest extent possible on other and more developed languages including English, which is the only clear window to the world outside.

Mr Speaker Sir, English which has been with us for so long a period, has itself been enriched by contact with the other languages that it has been associated with in this country and as such I claim that English is as entitled to be termed an Indian language to no less extent than any now found in the eighth schedule of the Constitution.

English is the mother tongue of the Anglo-Indian community, which refuses to permit itself relegated to any status less than that to which our Constitution has made it fully entitled.

Mr. Speaker Sir, the late Prime Minister, our beloved Jawaharlal Nehru has put the question beyond the range of argument by asserting at Hyderabad on the 8th December 1956 and I quote :

> "English should have been included in the Eighth Schedule, not because of its intrinsic or current value, or because of the number who use it, but it is the mother-tongue of the Anglo-Indians, who are Indian Nationals. Sir, Indian nationals we are, and we go even further and say that derived as we are from almost every State in India, the Anglo-Indian is among the few who have neither caste, nor religion, nor communal prejudices, and in that sense, we are perhaps the only real, "All-Indians".

Sir, shed of bigotry and prejudice, we shall come to accept that English is no more foreign to our country that the system of Government

(SRI P. F. D'MELLOW)

which we have freely elected to give to ourselves, this very microphone and those million other arts and sciences which we seek to harness for the development of our country and our people.

The only thing that I protest as foreign to the culture and genius of India is the growing intolerance of language chauvinists, for as our Philosopher Statesman, President Radhakrishna has said :

> " It was the attitude of acknowledging every path, rejecting none, trying to find some thing of value in each tribe, and each community, that has been the tradition that has governed this country."

Mr. Speaker Sir, I recognise as perfectly reasonable the desire of Hon'ble Members for greater use of Kannada in this House and I believe too that they on their part will gladly concede that does not require that English should be shut out, as it were.

I believe that we are all equally anxious to help our parliamentary institutions develop along the lines we have set for ourselves, the British Model of Parliamentary Government which is imbued with a spirit of kindliness and tolerance for the feelings and interests of minority groups. This spirit seeks to infuse in the minority in a legislature, a sense of belonging and of fully sharing in all the discussions, debates and decisions taken by the majority. Sir, surely, it is not beyond our capacity to provide ourselves with the means to create such conditions in this Honourable House.

Mr. Speaker, earlier this year, the Speaker of the Lok Sabha had occasion to refer certain steps he had taken to find a solution to problems similar to our own and he has spoken with satisfaction at the result of the introduction of the system of simultaneous interpretation of proceedings in Parliament.

I believe that were we to be provided with some similar system for translations in respect of Kannada and English, we shall have gone a considerable way to conserving for the business of this House, much of the valuable time now lost, while members interrupt its proceedings to express a preference for Kannada. Mr. Speaker fortified as the suggestion is with the recommendation of so eminent a personage and authority as the Hon'ble Speaker of the Lok Sabha, I commend it for the consideration of Government through the Hon'ble Chair.

Thank you.

ಶ್ರೀ ವಿ. ಎಂ. ದೇವ್.—ಮಾನ್ಯ ಅಧ್ಯಕ್ಷರೇ, ಈ ದಿನ ನಮ್ಮ ಮಾನ್ಯ ದ್ರವ್ಯ ಶಾಖೆಯ ಸಚಿವರಾದ ಶ್ರೀಮಾನ್ ಜತ್ತಿ ಯವರು ಈ ಮಾನ್ಯ ಸಭೆಯ ಮುಂದೆ ಮಂಡಿಸಿರುವ ಆಯವ್ಯಯ ಅಂದಾಜು ಪಟ್ಟಿಯಲ್ಲಿ ನಮ್ಮ ದೇಶ ಹೇಗಿದೆ ಮತ್ತು ಅವರು ಹೇಗಿದ್ದಾರೆ ಎಂಬುದನ್ನು ಹೇಳಿದ್ದಾರೆ. ಇದನ್ನು ನೋಡಿದರೆ ನಮಗೆ ಕೆಲವು ಅಭಿಪ್ರಾಯಗಳು ಬರುತ್ತವೆ. ಅವು ಏನೆಂದರೆ, ಈಗ ನಮ್ಮ ದೇಶದ ಮುಂದಿರುವ ಹಣಕಾಸಿನ ಪರಿಸ್ಥಿತಿ ಅಷ್ಟೇನೂ ಆಶಾದಾಯಕವಾಗಿಲ್ಲ ಎಂದು ಸ್ವಲ್ಪವೂ ಮರೆಮಾಚದೆ ನಮ್ಮ ಮಾನ್ಯ ಹಣಕಾಸಿನ ಸಚಿವರು ತಿಳಿಸಿದ್ದಾರೆ. ಮುಂದೆ ಅದಕ್ಕಾಗಿ ಏನು ಮಾಡ

ಬೇಕು ಎನ್ನುವ ವಿಚಾರವಾಗಿ ಮತ್ತು ಜನತೆಗೆ ಉದ್ಯೋಗಾವಕಾಶವನ್ನು ದೊರಕಿಸುವ ವಿಷಯದಲ್ಲಿ ಮತ್ತು ಇನ್ನೂ ಅನೇಕ ಪ್ರಾಮುಖ್ಯವಾದ ಪ್ರಶ್ನೆಗಳನ್ನು ಹೇಗೆ ಎದುರಿಸುತ್ತಾರೆ ಎನ್ನುವುದರಲ್ಲಿ ಅವರು ಹೇಳಿರುವ ಮಾತುಗಳನ್ನು ನೋಡಿದರೆ, ನಮಗೆ ಏನು ಎನ್ನಿಸುತ್ತದೆ ಎಂದರೆ ಆ ಮಾತುಗಳು ಈ ಕಾಲಕ್ಕೆ ಸೇರಿದ ಮಾತುಗಳೇ ಎನಿಸುತ್ತದೆ. ಮನು ಚಕ್ರವರ್ತಿಯ ಕಾಲದಲ್ಲಿ ಜನಗಳು ಹೇಗಿದ್ದರು, ಧರ್ಮದ ಆಧಾರದಿಂದ ಯಾವ ತರಹ ಆ ಕಾಲದ ಪರಿಸ್ಥಿಯನ್ನು ಎದುರಿಸುತ್ತಿದ್ದರೋ ಅಂತಹ ಮನೋಭಾವದಿಂದ ಕೂಡಿದಂತಹ ಮಾತುಗಳು ನಮ್ಮ ಹಣಕಾಸಿನ ಮಂತ್ರಿಗಳ ಭಾಷಣದಲ್ಲಿ ಇವೆಯೆಂದು ಕಾಣುತ್ತವೆ. ಈಗ ಏನಾಗಿದೆ ಎಂದರೆ, ನಾವು ಅನುಸರಿಸಬೇಕಾದ ನೀತಿ ಮಾರ್ಗ ಎಲ್ಲವೂ ಕೂಡ ವ್ಯತ್ಯಾವಾಗಿದೆ. ನಾವು ಅನುಸರಿಸಿದ ಬೇಕಾದ ತತ್ವ, ನೀತಿ ಬಹಳ ಮುಖ್ಯ ವಾದದ್ದು. ಈ ದೃಷ್ಟಿಯಿಂದ ನಾನು ಕೆಲವು ಮಾತುಗಳನ್ನು ಹೇಳ ಬೇಕೆಂದಿದ್ದೇನೆ.

ಇದರಲ್ಲಿ ಮೊಟ್ಟಮೊದಲನೆಯದಾಗಿ, ರಾಜ್ಯದಲ್ಲಿ ಉದ್ಯೋಗಕ್ಕೆ ಬರುವವರ ಸಂಖ್ಯೆ ಕಡಿಮೆ ಯಾಗುತ್ತಿದೆ ಎಂದು ಹೇಳಿದ್ದಾರೆ. ಹಾಗೇನೇ ರೈತನ ಒಕ್ಕಲುತನದಲ್ಲಿ ಸಾಕಷ್ಟು ಪ್ರಗತಿ ಬರ ತ್ತಿದೆ ಎಂದು ಹೇಳಿದ್ದಾರೆ. ಆಮೇಲೆ ಈಗಾಗಲೇ ಜನಗಳ ಮೇಲೆ ಸಾಕಷ್ಟು ತೆರಿಗೆಯನ್ನು ಹಾಕಿದೆ ಎಂದು ಹೇಳಿದ್ದಾರೆ. ಒಟ್ಟಿನಲ್ಲಿ ಈಗ ಖೋತಾ ಬಿದ್ದಿರುವ ಹಣವನ್ನು ಹೇಗೆ ಹೊಂದಬೇಕು ಎಂಬುದನ್ನು ಇದರಲ್ಲಿ ಹೇಳಿಲ್ಲ. ಇದರಲ್ಲಿ ಇನ್ನೊಂದು ಮಾತು ಏನು ಹೇಳಿದ್ದಾರೆಂದರೆ ಈಗ ನಾನ್ ಗೆಜೆಟೆಡ್ ನೌಕರರ ಗಲಾಟೆ ಇರುವುದರಿಂದ ಈಗಿರುವ ಸಿಬ್ಬಂದಿ-ವರ್ಗವನ್ನು ಶೇಕಡಾ 20-30ರಷ್ಟು ರಿಟ್ರೆಂಚ್ ಮಾಡಬೇಕೆಂದು ಹೇಳಿದ್ದಾರೆ. ಈ ದೃಷ್ಟಿಯಿಂದ ನಾನು ಕೆಲವು ಮಾತುಗಳನ್ನು ಹೇಳ ಬೇಕಾಗಿದೆ. ನಮ್ಮ ದೇಶದಲ್ಲಿ ಸಂದಿಗ್ಧ ಪರಿಸ್ಥಿತಿ ಮುಂದುವರಿಯುವುದಕ್ಕೆ 1954ನೇ ಇಸವಿಯಲ್ಲಿ ಲೋಕಸಭೆಯಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಅದು ಈ ರೀತಿ ಇದೆ :

In December 1954 when the Parliament adopted the Socialistic Pattern, the object was to have Social and Economic policy.

ಎಂದು ಇದೆ. ಎಕನಾಮಿಕ್ ಪಾಲಸಿ ಇದರೊಳಗೆ ಹೇಗಿದೆ ಎಂಬುದನ್ನು ನಾವು ನೋಡಬೇಕು ಈಗ ನಮ್ಮ ಮಾನ್ಯ ಹಣಕಾಸಿನ ಸಚಿವರು ತಮ್ಮ ಭಾಷಣದಲ್ಲಿ ಯಾವ ಯಾವ ಬಾಬಿಗೆ ಎಷ್ಟೆಷ್ಟು ಹಣವನ್ನು ಹೇಗೆ ಖರ್ಚು ಮಾಡುತ್ತಾರೆ ಎನ್ನುವ ವಿಷಯವನ್ನು ಹೇಳಿದ್ದಾರೆ. ಆದರೆ, ಇದನ್ನು ಅನುಸರಿಸತಕ್ಕ ರೀತಿಯಲ್ಲ ಸ್ವಲ್ಪ ವ್ಯತ್ಯಾಸ ಇವೆಯೆಂದು ಕಾಣುತ್ತದ. ನಾವು ಹೇಳುವ ಸಮಾಜದಲ್ಲಿ ಎಲ್ಲರ ಯೋಗಕ್ಷೇಮ ವಿಚಾರವಿದೆ. ಅದರಿಂದ ಪ್ರತಿಯೊಬ್ಬನ ವೈಯುಕ್ತಿಕ ಯೋಗಕ್ಷೇಮ, ರಕ್ಷಣೆ ಹೆಚ್ಚಳದಿಂದ ಬರುವುದಿಲ್ಲ. ಆ ದೃಷ್ಟಿಯಿಂದ ನಮ್ಮ ನಿಮ್ಮ ಹಿತಾಸಕ್ತಿಗಳನ್ನು ಯೋಚನೆ ಮಾಡಿದರೆ, ಅತ್ಯಧಿಕವಾಗಿ ಬದಲಾವಣೆಯಾಗಬೇಕಾಗಿ ಬರುತ್ತದೆ. ಪ್ರತಿಯೊಂದು ಜಿಲ್ಲೆಯಲ್ಲಿಯೂ ಕೂಡ ನಮ್ಮಲ್ಲಿ ರೈತರು ಹೆಚ್ಚು ಬೆಳೆಯುವುದಿಲ್ಲ. ಸಮಾಜ ತತ್ವ ವಾದ ಎಂದು ಏನು ಹೇಳುತ್ತೀರೊ ಅದಕ್ಕೆ ತಕ್ಕಹಾಗೆ ಒಂದನ್ನೂ ಮಾಡಿಲ್ಲ. ಡೆವಲಪ್‌ಮೆಂಟ್ ಪ್ಲಾನಿನಲ್ಲಿ, ಸಣ್ಣ ನೀರಾವರಿ ಯೋಜನೆಗಳಿಗೆ 20 ಕೋಟಿ ರೂಪಾಯಿ ಮೀಸಲಾಗಿಟ್ಟಿದ್ದೇವೆಂದು ಹೇಳುತ್ತೀರಿ. ಯಾರಾದರೂ ಒಂದು ಕೆಲಸ ಮಾಡಬೇಕಾದರೆ ಅವರಿಗೆ ಲಾಭ ಬಿಡಬೇಕಾಗುತ್ತದೆ. ಅದರಲ್ಲಿ ಕಂಟ್ರಾಕ್ಟರಿಗೆ, ದಳ್ಳಾಳಿಗಳಿಗೆ ಎಷ್ಟು ಹೋಯಿತು ಎಂದು ಯೋಚನೆ ಮಾಡಬೇಕು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ದೇವ್‌ರವರು ಬೇಕಾದಷ್ಟು ವಿಷಯಗಳನ್ನು ಹೇಳುತ್ತಿರು ವಾಗ ಫೈನಾನ್ಸ್ ಮಿನಿಸ್ಟರು ಅರ್ಜಿ ನೋಡುತ್ತಾ ಇದ್ದಾರೆ, ಶ್ರೀ ಎಂ. ಸಿ. ಬಸಪ್ಪನವರದ್ದು.

ಶ್ರೀ ಬಿ. ಡಿ. ಜತ್ತಿ.—ಅವರು ಹೇಳುತ್ತಿರುವ ಪಾಯಿಂಟ್ಸ್ ಬರೆದುಕೊಂಡಿದ್ದೇನೆ.

ಶ್ರೀ ವಿ. ಎಂ. ದೇವ್.—ಈ ದೃಷ್ಟಿಯಿಂದ ನಾನು ಹೇಳುವುದು ಇಷ್ಟು. ಎಂಪ್ಲಾಯ್‌ಮೆಂಟ್ ಅಪರ್ಚುನಿಟೀಸ್ ಜಾಸ್ತಿ ಮಾಡಬೇಕಾದರೆ ಸ್ಟೇಟ್ ಸೆಕ್ಟರ್ ಇಂಡಸ್ಟ್ರೀಸು ಜಾಸ್ತಿ ಮಾಡ ಬೇಕಾಗುತ್ತದೆ.

> "Priority attention has been paid for increasing food production. A sum of Rs. 20 crores has been invested both on tanks and irrigation wells..."

ಅಗ್ರಿಕಲ್ಚರ್ ಸೆಕ್ಟಾರಿನಲ್ಲಿಯೂ ಮಾಡಬೇಕಾಗುತ್ತದೆ. ದೊಡ್ಡ ಕೆರೆಗಳನ್ನು ಕಟ್ಟಲೇಬೇಕು. ಕಟ್ಟಿದರೆ ಹಣ ಜಾಸ್ತಿ ಪೋಲಾಗುತ್ತದೆ. ಈ 20 ಕೋಟಿಯಲ್ಲಿ ಕಂಟ್ರಾಕ್ಟುದಾರನ ಪ್ರಾಫಿಟ್ ಎಷ್ಟು ಇರುತ್ತದೆ? ಅವನಿಗೆ ಅತ್ಯಧಿಕವಾದ ಲಾಭ ಹೋಗುತ್ತದೆ. ಅದರ ಜೊತೆಗೆ ದುರ್‌ವ್ಯವಹಾರ ಗಳೂ ಆಗುತ್ತವೆ. ಎಷ್ಟೋ ಹಣ ಪೋಲಾಗುತ್ತದೆ. 5ರಲ್ಲಿ 4 ಭಾಗ ಪೋಲಾಗುತ್ತದೆ. ಇದನ್ನು ಆಧಾರದಿಂದ ಹೇಳುತ್ತೇನೆ. ಒಟ್ಟಿನಲ್ಲಿ ನಮ್ಮ ದೇಶ ಯಾವರೇಟಿನಲ್ಲಿ ಎಕನಾಮಿಕ್

(ಶ್ರೀ ವಿ. ಎಂ. ದೇವ್)

ಡೆವಲಪ್‌ಮೆಂಟಿನಲ್ಲಿ ಮುಂದುವರಿಯುತ್ತಿದೆಯೆಂದರೆ, 2 ಪರ್ಸೆಂಟಿನಲ್ಲಿ ಮುಂದುವರಿಯುತ್ತಿದೆ. ಸಮಾಜವಾದ ರೀತಿಯಲ್ಲಿ ಇದು ಕನಿಷ್ಠ ಪಕ್ಷ 10 ಪರ್ಸೆಂಟು ಮುಂದುವರೆಯ ಬೇಕು. ಯಾವ ಬಾಬಿನಲ್ಲಿ ಹಣ ಖರ್ಚು ಮಾಡಿದರೂ ಮುಕ್ಕಾಲುಪಾಲು ಹಣ ಒಂದಲ್ಲ ಒಂದು ರೀತಿಯಲ್ಲಿ ಪೋಲಾಗುತ್ತದೆ.

24ನೇ ಪೇಜಿನ 10ನೆ ಪ್ಯಾರಾದಲ್ಲಿ ಒಂದು ಮಾತು ಹೇಳುತ್ತಾರೆ. While agriculture must be developed, there is no doubt that industry can paly a great role in the economic advancement.

ಒಟ್ಟಿನಲ್ಲಿ ಒಂದು ದೇಶ ಮುಂದುವರಿಯುವುದಕ್ಕೆ ಡೆವಲಪ್‌ಮೆಂಟ್ ಪ್ಲಾನು ಒಂದೇ ಒಂದು ಪ್ರೊಸೆಸ್. ಆದರೆ ಲಾಭ ಬರುವುದು ಇನ್‌ವೆಸ್ಟಿಬಲ್ ಕ್ಯಾಪಿಟಲ್ ಫಾರ್ಮೇಶನ್ನಿನಿಂದ. ಬಂಡವಾಳ ಹಾಕಿದರೆ, ಲಾಭ ಇಂಡಸ್ಟ್ರಿಯಿಂದ ಮಾತ್ರ ಬರುವುದು. ಹಾಗಿದ್ದರೆ ಅಗ್ರಿಕಲ್ಚರಿನಲ್ಲಿ ಏನಾಗುತ್ತದೆ ? ಯಾವ ಕಾಲದಲ್ಲಿಯೂ, ಯಾವ ದೇಶದಲ್ಲಿಯೂ ಆ ಸೆಕ್ಟಾರಿನಿಂದ ಲಾಭ ಬರುವುದಿಲ್ಲ. ರೈತನಿಗೆ ಹೊಟ್ಟೆಬಟ್ಟೆಗೆ ಆಗಿ ಸಾಕಾಗಬೇಕಾದರೇ ಕಷ್ಟವಾಗುತ್ತದೆ. ಹಣ ಎಂದಿಗೂ ಅಗ್ರಿಕಲ್ಚರಿನಲ್ಲಿ ಉಳಿಕೆಯಾಗುವುದಿಲ್ಲ. ಇದಕ್ಕೆ ಒಂದು ಉದಾಹರಣೆ ಕೊಡಬಯಸುತ್ತೇನೇ ನೀವೂ ಪೇಪರಿನಲ್ಲಿ ನೋಡಿರಬಹುದು. ಮೂರು-ನಾಲ್ಕು ವರ್ಷದ ಕೆಳಗೆ ಒಂದು ಹಳ್ಳಿಯಲ್ಲಿ ಒಬ್ಬ ರೈತನಿಗೆ ಕಷ್ಟ ಬಂತು. ಕ್ಷಾಮಡಾಮರ ದೆಶೆಯಿಂದ ಎಲ್ಲಾ ಮಾರಿಬಿಟ್ಟ. ಎತ್ತುಗಳು ಸತ್ತು ಹೋದವು. ಅಮೇಲೆ ಏನು ಮಾಡಿದ ಅಂದರೆ ತನ್ನ ಹೆಂಡತಿಯನ್ನು ಆ ಊರಿನ ಜಮೀನುದಾರನಿಗೆ 40 ರೂಪಾಯಿಗೆ ಅಡವಿಟ್ಟ.

ಶ್ರೀ ಜಿ. ವಿ. ಗೌಡ.—ಇನ್‌ಹ್ಯೂಮನ್ !

ಶ್ರೀ ವಿ. ಎಂ. ದೇವ್.—ಇದು ಪೇಪರಿನಲ್ಲಿ ಬಂದಿದೆ. ಅವನು 40 ರೂಪಾಯಿ ಸಂಪಾದಿಸಿಬಿಟ್ಟು ಹೆಂಡತಿಯನ್ನು ಹಿಂದಕ್ಕೆ ಬಿಡಿಸಿಕೊಳ್ಳುವುದಕ್ಕೆ ಹೋದ ಇಷ್ಟರೊಳಗೆ ಎರಡು ಮಕ್ಕಳು ಆಗಿತ್ತು ಆಕೆಗೆ. ರೈತನು ಹಿಂದಕ್ಕೆ ಹೆಂಡತಿಯನ್ನು ಕೊಡು ಎಂದು ಕೇಳುವುದಕ್ಕೆ ಬಂದಾಗ, ಜಮೀನುದಾರ ಹಿಂದಕ್ಕೆ ಕಳುಹಿಸುವುದಕ್ಕೆ ಒಪ್ಪಲಿಲ್ಲ ; ಅವನನ್ನು ಬಾಕುವಿನಿಂದ ಒಂದು ಮರ್ಡರ್ ಆಯಿತು. ಮರ್ಡರ್ ಆಗದಿದ್ದರೆ ಅಂಥ ಕೇಸುಗಳು ಯಾವಾಗಲೂ ಪೇಪರಿನಲ್ಲಿ ಬರುವುದಿಲ್ಲ. ಇವತ್ತಿನದಿವಸ ಸಮಾಜದ ನಿಜವಾದ ಸ್ಥಿತಿ ಹೇಗಿದೆ ಅನ್ನುವುದು ತಮಗೆ ಗೊತ್ತಿಲ್ಲ. ಸತ್ಯದ ಹಿನ್ನೆಲೆಯಲ್ಲಿ ಸರಕಾರ ಆಡಳಿತ ನಡೆಸಿಕೊಂಡು, ಸಮಾಜಕ್ಕೆ ನಿಜವಾದ ನ್ಯಾಯ ದೊರಕಿಸಿ ಕೊಡಬೇಕು. ಅದಕ್ಕೆ ತಕ್ಕ ನೀತಿ ಇಟ್ಟುಕೊಳ್ಳಿ ಅನ್ನುವ ದೃಷ್ಟಿಯಿಂದ ನಾನು ಹೇಳುತ್ತಾ ಇದ್ದೇನೆ. ರೈತರ ಸ್ಥಿತಿ ಹಾಗಿದ್ದರೆ, ಸರಕಾರಿ ನೌಕರರ ಸ್ಥಿತಿ ಹೇಗಿದೆ? ಶ್ರೀ ಜತ್ತಿಯವರು 20-30 ಪರ್ಸೆಂಟಿನಷ್ಟು ಸ್ಟಾಫನ್ನು ತೆಗೆದು ಹಾಕುತ್ತೇವೆ, ರಿಟ್ರೆಂಚ್ ಮಾಡುತ್ತೇವೆಂದು ಅವರು ಭಾಷಣದಲ್ಲಿ ಹೇಳಿದ್ದಾರೆ. ಮಾನವ ಜೀವನ ಮಾಡುವುದಕ್ಕೆ ಸೌಕರ್ಯ ಒದಗಿಸಿ ಕೊಟ್ಟಿಲ್ಲವೆಂದು ತೋರಿಸಲು, ಎನ್. ಜಿ. ಓಗಳು ಅವರ ಪ್ರೊಟೆಸ್ಟನ್ನು ಒಂದು ಶಿಸ್ತಿನ ರೀತಿಯಲ್ಲಿ ವ್ಯಕ್ತಪಡಿಸುತ್ತಿದ್ದಾರೆ. ನೀವು ನಿಮ್ಮ 18ನೇ ವರ್ಷದ ಆಡಳಿತದಲ್ಲಿ ಮನುಷ್ಯನನ್ನು ಯಾವ ರೂಪಕ್ಕೆ ತಂದಿದ್ದೀರಿ ಎಂದು ನೋಡಿಕೊಳ್ಳಿ. ನಮ್ಮ ಸಮಾಜದ ನಿಜವಾದ ಸ್ಥಿತಿ ಯಾವ ಮಟ್ಟಕ್ಕೆ ಬಂದಿದೆ ಎಂದು ತೋರಿಸುವ ದೃಷ್ಟಿಯಿಂದ ಇಷ್ಟನ್ನೆಲ್ಲಾ ಹೇಳುತ್ತಿದ್ದೇನೆ. ಸಾಮಾನ್ಯವಾಗಿ ಎನ್. ಜಿ. ಓಗೆ. 100-120 ರೂಪಾಯಿ ಸಂಬಳ ಬರುತ್ತಿರುತ್ತದೆ. ಅಷ್ಟರಲ್ಲಿ ಬೆಂಗಳೂರಿನಲ್ಲಿ ಎಲ್ಲಿಯಾದರೂ ಒಂದು ಮನೆ ಮಾಡಿಕೊಂಡು, ಹೆಂಡತಿ, ಒಂದೆರಡು ಮಕ್ಕಳ ಜೀವನವನ್ನು ನಿಭಾಯಿಸುವುದಕ್ಕೆ ಸಾಧ್ಯವೇ? ಆದ್ದರಿಂದ ಏನು ಮಾಡಬೇಕು ಅನ್ನುವುದು ಮುಖ್ಯ ಪ್ರಶ್ನೆ. ಎಷ್ಟೋ ಪ್ರಾಜೆಕ್ಟ ಹಿಂದೆ, ದೊಡ್ಡ ಕೆರೆಗಳ ಹಿಂದೆ ಇರುವ ಜಮೀನಿಗೆ ನೀರು ಒದಗಿಸಿದ್ದರೂ ಕೂಡ, ಒಕ್ಕಲುತನವಿಲ್ಲ ; ಆದ್ದರಿಂದ ಉತ್ಪಾದನೆಯಾಗುತ್ತಾ ಇಲ್ಲವೆಂದು ಹೇಳುತ್ತೇನೆ. ಅದಕ್ಕೆ ಏನು ಮಾಡಬೇಕು ಅನ್ನುವುದು ಇನ್ನೊಂದು ಮುಖ್ಯಪ್ರಶ್ನೆ. ನಿಮ್ಮ 18 ವರ್ಷದ ಆಡಳಿತದಲ್ಲಿ ಸಮಾಜ ನಿಜವಾಗಿ ಯಾವ ಸ್ಥಿತಿಯಲ್ಲಿದೆಯೆಂದು ತಿಳಿದುಕೊಳ್ಳಬೇಕು. Realistic assessment of our society, of our country today and the life of the people at large ಮಾಡಿ ಅದನ್ನು ತಿಳಿದುಕೊಳ್ಳಬೇಕು. ಇದರ ಮೇಲೆ ಪರಿಣಾಮಕಾರಿಯಾದ ಯೋಜನೆ ರೂಪಿಸುವುದಕ್ಕೆ ಸಹಾಯವಾಗಲಿ ಅನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ಈಗ ಒಂದು ದೇಶ ಮುಂದುವರಿಯಬೇಕಾದರೆ, ಅದಕ್ಕೆ ಲಾಭ ಬರಬೇಕಾದರೆ, ಒಂದೇ ಒಂದು ಮಾರ್ಗ. ಯಾವುದಾದರೂ ಒಂದು ಇಂಡಸ್ಟ್ರಿ ಮಾಡಬೇಕೆಂದರೆ ಅದಕ್ಕೆ ಹಣ, ಕಂದಾಯದ ರೂಪದಲ್ಲಿ, ಟ್ಯಾಕ್ಸಿನಲ್ಲಿ, ಒಂದಲ್ಲ ಒಂದು ವಿಧದಲ್ಲಿ

ಸಾರ್ವಜನಿಕ ಹಣ ಬರುತ್ತದೆ. ಎಲ್ಲಕ್ಕಿಂತ ಹೆಚ್ಚಳ ಮಾಡಬೇಕೆಂದರೆ, ನಮ್ಮ ಸರ್ಕಾರ ಪಬ್ಲಿಕ್ ಸೆಕ್ಟಾರಿನಲ್ಲಿ ಕೈಗಾರಿಕೆ ಜಾಸ್ತಿ ಮಾಡಬೇಕು. ಆದಕ್ಕೆ ಬದಲಾಗಿ ಏನುಮಾಡಿದ್ದಾರೆಂದರೆ, ಅಮ್ಮಸಂದ್ರದ ಒಂದು ಉದಾಹರಣೆ ತೆಗೆದುಕೊಂಡು ನೋಡಬಹುದು. ಅಮ್ಮಸಂದ್ರದಲ್ಲೀ ಆಗಿರುವ ಸಿಮೆಂಟು ಫ್ಯಾಕ್ಟರಿಯ ಉದಾಹರಣೆಯನ್ನು ತೆಗೆದುಕೊಳ್ಳಬಹುದು. ಅಲ್ಲಿ ಅಮೇರಿಕನ್ ಕೊಲಾಬೊರೇಷನ್ನಿನ ಮೇಲೆ ಕೆಲಸ ಮಾಡುತ್ತಿದ್ದಾರೆ. ಹಿಂದೆ ಬರ್‌ಟ್ರಾಂಡ್ ರಸಲ್ ಎನ್ನುವ ಮಹಾ ಜ್ಞಾನಿಗಳು ಒಂದು ಪ್ರಬಂಧವನ್ನು ಬರೆದಿದ್ದರು. ಅದನ್ನು ನೋಡಿದಾಗ ಇಲ್ಲಿ ನಡೆಯುತ್ತಿರುವ ಕೆಲಸ ಯಾವ ರೀತಿಯಾದ ಒಂದು ಹೊಂದಾಣಿಕೆ ಅಥವಾ ಇಂಪಾಕ್ಟ್ ಇದೆ ಮತ್ತು ಫಾರಿನ್ ಕೊಲಾಬೋರೆಷನ್ನು ಎಂದು ಮಾಡಿದರೆ ಏನಾಗುತ್ತದೆ ಎನ್ನುವುದರ ಅರ್ಥ ಚೆನ್ನಾಗಿ ಗೊತ್ತಾಗುತ್ತದೆ. ಅಂತಹ ಒಂದು ಮುಖ್ಯವಾದ ಗ್ರಂಥ ಕ್ಯೂಬದಲ್ಲೂ ಆಗಿದೆ. ಅವರು ಹೇಳುವಂತಹ ಎಷ್ಟೋ ವಿಚಾರಗಳನ್ನೂ ನಾವು ಇಲ್ಲಿ ಒಪ್ಪಬೇಕಾಗಿ ಬರುತ್ತದೆ, ನಾನು ಹೇಳುವುದು ಇಷ್ಟು. ವ್ಯವಸಾಯದ ಬಗ್ಗೆ ನೋಡುವಾಗ ವ್ಯವಸಾಯ ಮಾಡುವಾಗ ಸಾಕಷ್ಟು ತಿಳುವಳಿಕೆ ಇಷ್ಟು ಹೊತ್ತಿಗೆ ಬರಬೇಕಾಗಿತ್ತು. ಈ ದಿವಸ ಆಹಾರದ ಉತ್ಪಾದನೆ ಹೆಚ್ಚು ಮಾಡಬೇಕು ಎಂದು ಹೇಳುತ್ತ ಬರುತ್ತಿದ್ದಾರೆ. ಇದಕ್ಕೆ ತಕ್ಕ ಅನುಕೂಲಗಳನ್ನು ಕೊಡಬೇಕಾದರೆ ಅವರಿಗೆ ಉತ್ತಮವಾದ ಬೀಜಗಳನ್ನು ಹಾಗೂ ಇಂಪ್ರೂವ್ಡ್ ಅಗ್ರಿಕಲ್‌ಚರಲ್ ಇಂಪ್ಲಿಮೆಂಟುಗಳನ್ನು ಸಾಕಷ್ಟು ಒದಗಿಸಿ ಕೊಟ್ಟರೆ ರೈತರು ಹೆಚ್ಚು ಬೆಳೆ ಬೆಳೆಯಲು ಅನುಕೂಲವಾಗುತ್ತದೆ. ಈಗ ಪಬ್ಲಿಕ್ ಸೆಕ್ಟರು ಕಂಪನಿಗಳೆಂದು ಸ್ಟೀಲ್ ಕಂಪನಿಗಳನ್ನು ಮಾಡಿದ್ದಾರೆ. ಸುಮಾರು ಒಂದು ಟನ್ ಕಬ್ಬಿಣಕ್ಕೆ ನೂರಾರು ರೂಪಾಯಿ ಆಗುತ್ತದೆ ಮತ್ತು ವ್ಯವಸಾಯಕ್ಕಾಗಿ ಉಪಯೋಗ ಮಾಡುವಾಗ ಚದರ ಆಕ್ಚುಯಲ್ ಕಾಸ್ಟು ಸುಮಾರು 700 ರಿಂದ 800 ರೂಪಾಯಿಗಳ ವರೆಗೆ ಆಗುತ್ತದೆ. ಇದನ್ನು ಆದಷ್ಟು ಕಡಿಮೆಯಾಗಿ ಆಗುವಂತೆ ವರ್ಕ್‌ಔಟು ಮಾಡತಕ್ಕದ್ದು ಯುಕ್ತವಾಗಿರುತ್ತದೆ. ಇನ್ನೂ ಸ್ವಲ್ಪ ಇಳುವರಿ ತೋರಿಸಬೇಕಾದರೆ ಪ್ರೈವೇಟು ಸೆಕ್ಟರುಗಳನ್ನು ಜಾಸ್ತಿ ಮಾಡಬೇಕಾಗಿ ಬರುತ್ತದೆ. ನನ್ನ ಒಂದೇ ಒಂದು ಪಾಯಿಂಟು ಏನೆಂದರೆ, ಪಬ್ಲಿಕ್ ಸೆಕ್ಟರಿನಲ್ಲಿ ಮಾಡುವ ವ್ಯವಸಾಯದ ಉಪಕರಣಗಳು ರೈತನಿಗೆ ಎಟಕುವ ಬೆಲೆಯಲ್ಲಿ ಕೊಡುವುದಕ್ಕೆ ಸಾಧ್ಯವೇ ಎಂದು ನೋಡಿದರೆ ಆ ರೀತಿ ಪ್ರೈವೇಟು ಸೆಕ್ಟರಿನಲ್ಲಿ ಕೆಲಸ ಮಾಡುವ ಇಂಡಸ್ಟ್ರಿಗಳು ಕೊಡುವುದಕ್ಕೆ ಆಗುವುದಿಲ್ಲ. ಇದಕ್ಕೆ ಬೇಕಾದರೆ ಒಂದಲ್ಲ ಹತ್ತು ಉದಾಹರಣೆಗಳನ್ನು ಕೊಡಬಹುದು. ಬೇರೆ ದೇಶಗಳಲ್ಲಿ ಹೇಗಿದೆ ಎಂದು ನೋಡಬಹುದು. ಅಮೇರಿಕಾ ತೆಗೆದುಕೊಳ್ಳಿ, ಜರ್ಮನಿ ತೆಗೆದುಕೊಳ್ಳಿ, ಮತ್ತು ದೊಡ್ಡ ದೊಡ್ಡ ದೇಶಗಳಲ್ಲಿ ಇವೊತ್ತು ದೊಡ್ಡ ಕೈಗಾರಿಕೆಗಳ ಮಾಲೀಕರುಗಳು ಯಾರು ಆಗಿದ್ದಾರೆಂದು ನೋಡಿದರೆ ಹಿಂದೆ ಯಾರು ದೊಡ್ಡ ಜಮೀನುದಾರರು ಎಂದು ಕರೆಸಿಕೊಳ್ಳುತ್ತಿದ್ದರೋ ಅಂತಹವರು ಈಗ ವ್ಯವಸಾಯದ ಉಪಕರಣಗಳನ್ನು ಉತ್ಪಾದನೆ ಮಾಡುವ ಕೈಗಾರಿಕೆಗಳ ಮಾಲೀಕರುಗಳಾಗಿದ್ದಾರೆ. ಕಾಲಗತಿ ಬದಲಾಗಿರುವುದರಿಂದ ಇವೊತ್ತಿನ ದಿನ ಅವರುಗಳು ಜಮೀನು ಬಿಡಬೇಕಾಗಿ ಬಂದಿದೆ. ಇದಕ್ಕೆ ಮುಖ್ಯವಾದ ಕಾರಣ ಎಂದರೆ, ಲಾಭದಾಯಕವಾಗಿ ರೈತನ ದೃಷ್ಟಿಯಿಂದ ಅವನಿಗೆ ಅನುಕೂಲವಾಗುವಂತೆ ಮಾಡಬೇಕು. ಇಂದಿನ ರೈತರ ಸ್ಥಿತಿಯಲ್ಲಿ ಅವನಿಗೆ ಎರಡು ಮುಖ್ಯವಾದ ಅನುಕೂಲಗಳನ್ನು ಒದಗಿಸಿ ಕೊಡಬೇಕು. ಅವರ ಎಕರೆವಾರು ಇಳುವರಿ ಜಾಸ್ತಿಯಾಗಬೇಕಾದರೆ ಏನೇನು ಅನುಕೂಲಗಳು ಬೇಕೋ ಅವನ್ನೆಲ್ಲಾ ಮಾಡಿಕೊಡಬೇಕು. ಅವನಿಗೆ ಬೇಕಾಗುವ ಫರ್ಟಿಲೈಸರುಗಳು, ಕ್ರಿಮಿಕೀಟಕಗಳನ್ನು ಹಾಳುಮಾಡಲು ಬೇಕಾಗುವ ಸಾಧನಗಳು ಕಳೆ ನಾಶಮಾಡಿ ಸಾಕಷ್ಟು ತಜ್ಞರ ಸಹಾಯವನ್ನು ಅವರಿಗೆ ಒದಗಿಸಿಕೊಡಬೇಕು. ಈಗೇನೋ ಅಲ್ಲಲ್ಲಿ ಎನ್.ಇ.ಎಸ್. ಬ್ಲಾಕುಗಳೆಂದು ಮಾಡಿರುತ್ತಾರೆ. ಅಲ್ಲಿ ನಡೆಯುತ್ತಿರುವ ಕೆಲಸಗಳನ್ನು ನೋಡುವುದಾದರೆ, ಸರಿಯಾದ ವ್ಯವಹಾರದ ದೃಷ್ಟಿಯಿಂದ ಕೆಲಸಗಳನ್ನು ಮಾಡುತ್ತಿಲ್ಲ. ನನಗನಿಸುವುದು ವೈಯಕ್ತಿವಾದ ಲಾಭದ ಆಸೆ ಇಟ್ಟುಕೊಂಡು ಮತ್ತೊಬ್ಬರನ್ನು ಮಟ್ಟಹಾಕಬೇಕೆಂದು ಮಾಡುವುದು, ಅಧಿಕಾರ ಲಾಲಸೆಯಿಂದ ಒಂದು ತರಹದ ಆಲಸ್ಯ ಮನೋಭಾವನೆ, ಸಾಮಾಜಿಕ ಉಪೇಕ್ಷೆ ಎಂದರೆ ಸೋಷಿಯಲ್ ಇಂಡಿಫರೆನ್ಸ್ ಎಂದು ಏನು ಹೇಳುತ್ತಾರೆ, ಅದು. ಹೀಗೆ ಎಲ್ಲಿಯವರೆಗೆ ರೈತನನ್ನು ಉತ್ತಮ ಸ್ಥಿತಿಗೆ ತರುವುದಕ್ಕೆ ಶಕ್ತಿ ಇಲ್ಲವೋ ಅಲ್ಲಿಯ ವರೆಗೆ ಅವನ ಅಭಿವೃದ್ಧಿ ಖಂಡಿತ ಆಗುವುದಿಲ್ಲ. ಹಾಗೇ ಮತ್ತೊಂದು ವಿಚಾರ ಇದೆ. ಪ್ರತಿಯೊಂದು ಕ್ಷೇತ್ರದಲ್ಲಿಯೂ ಕೂಡ ತೀವ್ರವಾದ ಪ್ರಗತಿಯನ್ನು ಸಾಧಿಸುವುದಕ್ಕೆ ಫಾಸ್ಟೆಸ್ಟ್ ಎಕಾನಮಿ ಮೆಷರುಗಳನ್ನು ಪಬ್ಲಿಕ್ ಸೆಕ್ಟರು ಇಂಡಸ್ಟ್ರೀಸ್‌ಗಳಲ್ಲಿ ಮುಂದೆ ತರುವುದಕ್ಕೆ ಪ್ರಯತ್ನ ಮಾಡುತ್ತೋ ಅಲ್ಲಿ ಮಾತ್ರ ಹಾಗೆ ಮಾಡಲು ಆಗುತ್ತದೆ. ಆ ದೃಷ್ಟಿಯಿಂದ ಈಗಾಗಲೇ ಎಷ್ಟೋ ವಿಲೇಜು ಪಾಪ್ಯುಲೇಷನ್ ಜಾಸ್ತಿ ಇರುವ ಭಾಗದಲ್ಲಿ ಇಂಡಸ್ಟ್ರೀಸ್‌ಗಳನ್ನು ಒದಗಿಸಬೇಕಾಗುತ್ತದೆ. ಎರಡನೆಯದು, ಆಗ ಪ್ರತಿಯೊಬ್ಬನಿಗೂ ಒಂದು ಹತೋಟಿಯಲ್ಲಿ ಜಮೀನನ್ನು ಇಟ್ಟುಕೊಳ್ಳುವುದಕ್ಕೆ ಸಾಧ್ಯ. ಅಲ್ಲದೆ ಜಮೀನುಗಳನ್ನಿಟುಕೊಂಡಿದ್ದರೂ ಅವನ್ನು ಪರಭಾರೆ ಮಾಡಲು ಹೋಗುತ್ತಾರೆ. ಆದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡಬೇಕು. ಇದರಲ್ಲಿ ಒಂದು ಹೆಜ್ಜೆಯನ್ನೇನೋ ಮುಂದಿಟ್ಟ

(ಶ್ರೀ ವಿ. ಎಂ. ದೇವ್)

ದ್ದಾರೆ. ಅದಕ್ಕೆ ಮುಂದೆ ಯಾವ ಹೆಜ್ಜೆಯನ್ನೂ ಇಟ್ಟಂತೆ ಕಾಣುತ್ತಿಲ್ಲ. ರೈತರಿಗೆ ಅನುಕೂಲವಾಗಲಿ ಎಂದು ಸಾಲಗಳನ್ನು ಕೊಡುತ್ತಾರೆ. ಆ ರೀತಿ ಸಾಲಗಳನ್ನು ತೆಗೆದುಕೊಂಡಿರುವ ರೈತರು ಸಾಲ ಗಳನ್ನು ಹಿಂದಿರುಗಿಸುವುದಕ್ಕೆ ಆಗುತ್ತಿಲ್ಲ. ಏಕೆಂದರೆ ಅವನ ದುರದೃಷ್ಟದಿಂದಲೋ ಏನೋ ಜಮೀನನ್ನು ಭೋಗ್ಯ, ಅಥವಾ ಆಧಾರ ಮಾಡಿ ಸಾಲ ತೆಗೆದುಕೊಂಡಿರುತ್ತಾನೆ. ಅವನಿಗೆ ಸರಿಯಾಗಿ ಲಾಭ ಬಾರದೆ ಅವನು ಪಡೆದ ಸಾಲವನ್ನು ಹಿಂದಿರುಗಿ ಕೊಡುವುದಕ್ಕೆ ಆಗುತ್ತಿಲ್ಲ. ಈಗ ಅಗ್ರಿಕಲ್ ಚರಲ್ ಎಕ್ಸ್‌ಟೆನ್‌ಷನ್ ಸ್ಕೀಮು, ಎನ್. ಇ. ಎಸ್., ಇತ್ಯಾದಿ ಯೋಜನೆಗಳನ್ನೇನೋ ಮಾಡಿದಿರಿ. ಆದರೆ ಅದರ ತತ್ವವನ್ನು ಸರಿಯಾಗಿ ಅನುಷ್ಠಾನಕ್ಕೆ ತಂದಿಲ್ಲ. ನಮ್ಮ ಗುಬ್ಬಿ ತಾಲ್ಲೂಕಿನಲ್ಲೇ ಒಂದು ಸೀಡ್ ಫಾರಂ ಎಂದು ಮಾಡಿದ್ದಾರೆ. ಈ ಫಾರಂಗೆ ಸುಮಾರು ಹದಿನೈದು ಎಕರೆಗಳಷ್ಟು ಭೂಮಿಯನ್ನು ಕೊಟ್ಟಿದ್ದಾರೆ. ಇಲ್ಲಿ ಇಬ್ಬರು ಅಗ್ರಿಕಲ್‌ಚರು ಎಕ್ಸ್‌ಟೆನ್ಷನ್ನು ಆಫೀಸರುಗಳು ಮತ್ತು ಇಬ್ಬರು ಕೂಲಿಗಳು ಎಂದು ಮಾಡಿದ್ದಾರೆ. ಆ ಕೂಲಿಗಳಿಗೆ ತಿಂಗಳೊಂದಕ್ಕೆ 60 ರೂಪಾಯಿಗಳಷ್ಟು ಸಂಬಳ ಎಂದು ನಿಗದಿ ಮಾಡಿದ್ದಾರೆ. ಅಲ್ಲಿ ಮಾಡುತ್ತಿರುವ ಕೆಲಸಗಳಿಂದ ಸರಕಾರಕ್ಕೆ ಮೂರು ಕಾಸು ಲಾಭ ಬರುತ್ತದೆಯೋ ಎಂದು ನೋಡಿದರೆ ಅದೂ ಸರಿಯಾಗಿ ಬರುವುದಿಲ್ಲ. ಇದು ಬಹಳ ಮುಖ್ಯ ವಾದ ವಿಷಯ ಎಂದು ನಾನು ತಿಳಿದುಕೊಂಡಿದ್ದೇನೆ. ನಮ್ಮ ಭಾಗ ಫ್ಯಾಮಿನ್ ಏರಿಯಾಕ್ಕೆ ಸೇರಿ ದುದು. ಮಳೆ ಸರಿಯಾಗಿ ಬರುವುದಿಲ್ಲ. ಸಕಾಲದಲ್ಲಿ ಮಳೆ ಬಾರದೆ ಬೆಳೆಗಳೇ ಆಗುವುದಿಲ್ಲ. ಇಲ್ಲಿ ಯಾವಾಗಲೂ ಸೀಜನಲ್ ಆಗಿ ಮಳೆ ಬರುವುದರಿಂದ ಬರುವ ಬೆಳೆಯೂ ಇಳುವರಿಯಾಗಿರುತ್ತದೆ. ಇಲ್ಲಿನ ಜನಕ್ಕೆ ಸರಿಯಾಗಿ ಇಂಪ್ರೂವ್ಡ್ ಇಂಪ್ಲಿಮೆಂಟುಗಳನ್ನು ಸರಿಯಾಗಿ ಒದಗಿಸುತ್ತಿಲ್ಲ. ಇಲ್ಲಿ ಕೆಲಸ ಚೆನ್ನಾಗಿ ಆಗುತ್ತದೆ ಎಂದು ನಾನು ಹೇಳುವುದಕ್ಕೂ ಆಗುವುದಿಲ್ಲ. ಸರಕಾರದವರು ಸಾಲಗಳನ್ನು ಕೊಡುವುದು ದುರುಪಯೋಗವಾಗಿ ಸರಿಯಾದ ಉತ್ಪಾದನೆಯಾಗುತ್ತಿಲ್ಲ. ಇಲ್ಲಿ ಲಾಭ ದಾಯಕವಾಗಿ ಮಾಡಿಕೊಳ್ಳಲು ಯಾವ ರೀತಿಯಾಗಿ ಪ್ರಯತ್ನ ಮಾಡಿದ್ದೀರಿ ಎನ್ನುವುದು ನನಗೆಗೊತ್ತಾ ಗುತ್ತಿಲ್ಲ. ಅಗ್ರಿಕಲ್‌ಚರಲ್ ಎಕ್ಸ್‌ಟೆನ್‌ಷನ್ ಆಫೀಸರುಗಳೆಂದು ಅಗ್ರಿಕಲ್‌ಚರು ಕಾಲೇಜಿನಲ್ಲಿ ಪಾಸಾದ ಹುಡುಗರನ್ನು ಇಲ್ಲಿಗೆ ಏಕೆ ಹಾಕುತ್ತೀರಿ ? ನಿಮ್ಮಲ್ಲಿ ಎಷ್ಟೋ ಪ್ರಾಜೆಕ್ಟುಗಳ ಕೆಳಗೆ ಜಮೀನು ಸಾಗುವಳಿಗೇ ಬಂದಿಲ್ಲ. ಅಂತಹ ಕಡೆಗಳಲ್ಲಿ ಇವರನ್ನು ಹಾಕಿ ಒಳ್ಳೆಯ ಬೆಳೆ ಬರುವಂತೆ ಮಾಡಿದರೆ ಲಾಭ ಬರುವಂತಹ ಬೆಳೆಗಳನ್ನು ಮಾಡಬಹುದು. ಇಲ್ಲಿ ಲಾಭದಾಯಕವಾದ ಯಾವ ಕೆಲಸಗಳೂ ಆಗುವುದಿಲ್ಲ.

5-00 P.M.

ಇದಕ್ಕೆ ಕಾರಣ ಏನು ಅಂದರೆ ನಮ್ಮ ದೇಶದಲ್ಲ ಕ್ರಾನಿಕ್ ಫ್ಯಾಮಿನ್ ಇರುವುದೇ ಆಗಿದೆ. ಇದು ಒಂದು ಮಹತ್ವವಾದ ಅಂಶ. ರೈತನಿಗೆ ಲೆಕ್ಕಾಚಾರದಂತೆ ಕೊಟ್ಟರೆ ಆಗುವುದಿಲ್ಲ. ಜಮೀನಿನಲ್ಲಿ ಕೆಲಸ ಮಾಡತಕ್ಕ ರೈತನಿಗೆ ಹೆಚ್ಚು ಬರುವುದಿಲ್ಲ. ತನ್ನ ಜೀವಮಾನವೆಲ್ಲಾ ರೈತ ಭೂಮಿಯಲ್ಲಿ ಕೆಲಸ ಮಾಡಬೇಕಾಗುತ್ತದೆ. ಆದ್ದರಿಂದ ರೈತನಿಗೆ ಜಮೀನು ಕೊಟ್ಟುಬಿಡುವುದು ಒಳ್ಳೆಯದು. ನೀರಾವರಿ ಯೋಜನೆಗಳ ಪ್ರದೇಶದಲ್ಲಿ ಅದರಲ್ಲಿಯೂ ತುಂಗಭದ್ರಾ ಯೋಜನೆಯ ಪ್ರದೇಶದಲ್ಲಿ ರೈತರಿಗೆ ವ್ಯವ ಸಾಯಕ್ಕಾಗಿ ಜಮೀನು ಕೊಡುವುದಕ್ಕೆ ಸರಕಾರ ತಯಾರಾಗಿದೆ. ಆದರೆ ವ್ಯವಸಾಯ ಮಾಡಲು ಜನ ಮುಂದೆ ಬರುತ್ತಿಲ್ಲ. ಅಲ್ಲಿಯ ಜನ ಎಂಟರ್‌ಪ್ರೈಜಿಂಗ್ ಇಲ್ಲ. ಈ ರೀತಿಯಾಗುವುದು ಸರಿಯಲ್ಲ ಎಂದು ನನ್ನ ಭಾವನೆ. ಇಂಥ ಸಮಾಜ ನಿರ್ಮಾಣವಾಗುವುದು ದೇಶದ ಹಿತ ದೃಷ್ಟಿಯಿಂದ ಒಳ್ಳೆಯ ದಲ್ಲ ಎಂದು ನಾನು ತಿಳಿದಿದ್ದೇನೆ. ವ್ಯವಸಾಯದಲ್ಲಿ ಕೆಲಸ ಮಾಡತಕ್ಕಂಥ ಅನೇಕರಿಗೆ ಜಮೀನು ಇಲ್ಲ, ಮನೆ ಇಲ್ಲ, ಇರುವುದಕ್ಕೆ ಜಾಗ ಇಲ್ಲ. ಇಂಥ ಕೆಲಸಗಾರರಿಗೆ ಕೆಲಸ ಕೊಡುವ ಏರ್ಪಾಡು ಸರ ಕಾರ ಮಾಡಿದರೆ ನಾಳೆಯೇ ಎಲ್ಲರಿಗೂ ಕೆಲಸ ಸಿಕ್ಕುತ್ತದೆ. ಅಗ್ರಿಕಲ್‌ಚರಲ್ ಕಾಲೇಜಿನಿಂದ ಪಾಸಾ ದವರಿಗೆ ಸಹ ಕೆಲಸ ಸಿಕ್ಕುತ್ತದೆ. ಇದರಿಂದ ನಮ್ಮ ಸಮಾಜವಾದ ನೀತಿಗೆ ಎಷ್ಟೋ ಅನುಕೂಲ ವಾಗುತ್ತದೆ.

ಮುಖ್ಯವಾಗಿ ಹೆಚ್ಚು ಲಾಭ ಬರಬೇಕಾದರೆ ಇಂಡಸ್ಟ್ರೀಸ್ ಜಾಸ್ತಿ ಮಾಡಬೇಕು. ಇಂಡಸ್ಟ್ರೀಸ್ ನ್ಯಾಷನಲೈಜ್ ಮಾಡುವುದು ಅಗತ್ಯವಾಗಿದೆ. ಪಬ್ಲಿಕ್ ಸೆಕ್ಟರ್‌ನಲ್ಲಿ ಇಂಡಸ್ಟ್ರೀಸ್ ನ್ಯಾಷನಲೈಜ್ ಆಗುವುದಾದರೆ ರಕ್ತಪಾತವಿಲ್ಲದೆ ಕ್ರಾಂತಿಯಾಗುತ್ತದೆ. ಹಾಗೆ ಮಾಡುವುದರಿಂದ ಕೈಗಾರಿಕೆಗಳು ತೀವ್ರ ಗತಿಯಲ್ಲಿ ಜಾಸ್ತಿ ಅಭಿವೃದ್ಧಿ ಹೊಂದುತ್ತವೆ. ಇದರಿಂದ ನಮ್ಮ ದೇಶದಲ್ಲಿರುವ ನಿರುದ್ಯೋಗ ಸಮಸ್ಯೆ ನಾಳೆಯ ದಿನವೇ ಬಗೆಹರಿಯುತ್ತದೆ.

ಇನ್ನೊಂದು ವಿಚಾರ ಏನೆಂದರೆ, ಗವರ್ನ್ಮೆಂಟ್ ಡಿಪಾರ್ಟ್‌ಮೆಂಟುಗಳಲ್ಲಿ ನೌಕರರು ಶೇಕಡ 20—30 ರಷ್ಟು ಜಾಸ್ತಿ ಇದ್ದಾರೆ ; ರಿಟ್ರೆಂಚ್‌ಮೆಂಟ್ ಮಾಡಿದರೆ ಎಂಟು ಹತ್ತು ಕೋಟಿ ಉಳಿತಾಯ

ವಾಗಿ ಬಜೆಟ್ ಸರಿತೂಗಿಸಲು ಸಾಧ್ಯವಾಗುತ್ತದೆ ಎಂದು ಸಚಿವರು ಭಾಷಣದಲ್ಲಿ ಹೇಳಿದ್ದಾರೆ. ಆದರೆ ನಾನು ಒಂದು ವಿಚಾರ ಹೇಳಲು ಬಯಸುತ್ತೇನೆ. ಸರಕಾರಿ ನೌಕರರಿಗೆ ಹೊಟ್ಟೆ-ಬಟ್ಟೆಗೆ ಸಾಕಾಗುವಷ್ಟು ಸಂಬಳ ಕೊಟ್ಟರೆ ಅವರಿಂದ ಯೋಗ್ಯ ರೀತಿಯಲ್ಲಿ ಸಮಾಧಾನಕರವಾದ ರೀತಿಯಲ್ಲಿ ಕೆಲಸ ತೆಗೆದುಕೊಳ್ಳಲು ಸಾಧ್ಯವಾಗುತ್ತದೆ. ನೌಕರರ ವರ್ಕ್ ಲೋಡ್ ಅಂದರೆ ಕೆಲಸದ ಭಾರ ಹೆಚ್ಚಿದ ಹಾಗೆ ಹೆಚ್ಚು ಹೆಚ್ಚು ವೇತನ ಅವರಿಗೆ ಕೊಡುವ ನೀತಿ ಅನುಸರಿಸಬೇಕೆಂದು ನಾನು ಸೂಚಿಸುತ್ತೇನೆ. ಬರೀ ವೇತನ ಫಿಕ್ಸ್ ಮಾಡಿದರೆ ಕೆಲವರಿಗೆ ಕೆಲಸ ಬರುತ್ತದೆ, ಕೆಲವರಿಗೆ ಕೆಲಸ ಮಾಡಲು ಬರುವುದಿಲ್ಲ. ಆದುದರಿಂದ ಈ ಅಂಶವನ್ನು ಸರಕಾರ ಯೋಚನೆ ಮಾಡಿ ಈ ದೃಷ್ಟಿಯಿಂದ ಕೆಲಸ ಮಾಡುವುದಾದರೆ ದೇಶಕ್ಕೆ ಒಳ್ಳೆಯದಾಗುತ್ತದೆ ಎಂದು ಭಾವಿಸಿ ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸಿ ನನ್ನ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಜಿ. ಸಿ. ಭಾಗೀರಥಮ್ಮ (ತುಮಕೂರು).—ಮಾನ್ಯ ಸಭಾಪತಿಗಳೇ, ಮಾನ್ಯ ಅರ್ಥ ಸಚಿವರು ಈ ಸಭೆಯ ಮುಂದೆ ಮಂಡಿಸಿರತಕ್ಕಂಥ 1965-66 ನೇ ಸಾಲಿನ ಆಯವ್ಯಯ ಪಟ್ಟಿಯನ್ನು ಅನುಮೋದಿಸುತ್ತಾ ಕೆಲವು ಸೂಚನೆಗಳನ್ನು ಅಧ್ಯಕ್ಷರ ಮೂಲಕ ಸರಕಾರಕ್ಕೆ ತಿಳಿಯಲು ಇಚ್ಛಿಸುತ್ತೇನೆ. ಸ್ವಾಮಿ, ಆಹಾರ ಅಭಾವ ವಿಚಾರ ಹೇಳುವುದಾದರೆ ಕಳೆದ ವರ್ಷ ಸಕಾಲದಲ್ಲಿ ಮಳೆಯಾಗದೆ ಇರುವುದರಿಂದ ಸರಿಯಾಗಿ ಬೆಳೆ ದೊರೆತಿಲ್ಲ ಎಂಬುದು ಸತ್ಯ ಅಂಶವಾಗಿದೆ. ಆಹಾರ ಅಭಾವದ ಪರಿಸ್ಥಿತಿಯನ್ನು ಸರಕಾರ ಮನಗಂಡು ಅಕ್ಕಿ, ಭತ್ತ, ಜೋಳ ಇವುಗಳ ಬೆಲೆ ನಿಗದಿ ಮಾಡಿ ಸರಕಾರದವರು ಈ ಧಾನ್ಯಗಳನ್ನು ಸಂಗ್ರಹಣೆ ಮಾಡುವ ಕಾರ್ಯಕ್ರಮ ತೆಗೆದುಕೊಂಡಿದ್ದಾರೆ. ಅಕ್ಕಿ, ಭತ್ತ, ಜೋಳ ಇವುಗಳ ಸಂಗ್ರಹಣೆಯ ಬಗ್ಗೆ ಹಣಕಾಸಿನ ಸಚಿವರು ಭಾಷಣದಲ್ಲಿ ಹೇಳಿದ್ದಾರೆ. ಆದರೆ ರಾಗಿ ಸಂಗ್ರಹಣೆಯ ಬಗ್ಗೆ ಬಜೆಟ್ ಭಾಷಣದಲ್ಲಿ ಎಲ್ಲಿಯೂ ಕಾಣುತ್ತಿಲ್ಲ. ಹಿಟ್ಟಂ ಬಿಟ್ಟಂ ಕೆಟ್ಟಂ ಎಂದು ಹೇಳುವ ಹಾಗೆ ನಮ್ಮ ತುಮಕೂರು ಜಿಲ್ಲೆ ಕೋಲಾರ ಜಿಲ್ಲೆಗಳಲ್ಲಿ ರಾಗಿಯನ್ನು ಉಪಯೋಗಿಸುವ ಜನ ಬಹಳ ಇದ್ದಾರೆ. ಆದುದರಿಂದ ರಾಗಿಯ ಸಂಗ್ರಹಣೆ ಮಾಡುವುದು ಸಹ ಅಗತ್ಯವಾಗಿದೆ. ಆದುದರಿಂದ ರಾಗಿ ಹೆಚ್ಚು ಬೆಳೆದಿರುವ ಪ್ರದೇಶದಿಂದ ರಾಗಿ ತಂದು ರಾಗಿ ಸಂಗ್ರಹಣೆ ಮಾಡಿ ಸರಿಯಾಗಿ ರಾಗಿಯ ಬೆಲೆ ನಿಗದಿ ಮಾಡಬೇಕೆಂದು ಸರಕಾರಕ್ಕೆ ಸೂಚನೆ ಮಾಡುತ್ತೇನೆ. ಕಳೆದ ವರ್ಷ ಕೆಲವು ಕಡೆ ಸಕಾಲದಲ್ಲಿ ಮಳೆಯಾಗದೆ, ಕೆಲವು ಕಡೆ ವಿಪರೀತ ಮಳೆಯಾಗಿ ಪ್ರವಾಹದಿಂದ ಜನರಿಗೆ ತೊಂದರೆಯಾಗಿರುವುದಲ್ಲದೆ ಬೆಳೆ ಬೆಳೆಯುವುದಕ್ಕೆ ಸಹ ಸಾಧ್ಯವಾಗಿಲ್ಲ. ಇಂಥ ಪ್ರದೇಶದಲ್ಲಿಯ ರೈತರಿಗೆ ಜಮೀನು ಆಧಾರ ಮಾಡಿಕೊಂಡು ತಕಾವಿ ಸಾಲ ಕೊಡುವುದಕ್ಕೆ ಹೆಚ್ಚು ಅವಕಾಶ ಮಾಡಿಕೊಡಬೇಕೆಂದು ಸೂಚಿಸುತ್ತೇನೆ. ಇಂಥ ರೈತರಿಗೆ ಕಂದಾಯ ಮಾಫೀ ಮಾಡಬೇಕು ಎಂದು ನನ್ನ ಕೋರಿಕೆ. ನಮ್ಮ ಜಿಲ್ಲೆಯಲ್ಲಿ ನಾವು ರಾಗಿ ತಿನ್ನುತಕ್ಕಂಥ ಜನ ಆಗಿದ್ದೇವೆ. ತಕಾವಿ ಸಾಲ ಕೊಟ್ಟು ಪ್ರವಾಹದಿಂದ ಉಂಟಾದ ನಷ್ಟದಿಂದ ಅವರನ್ನು ರಕ್ಷಣೆ ಮಾಡುವ ಕಾರ್ಯವನ್ನು ಸರಕಾರ ಕೈಕೊಳ್ಳಬೇಕು. ಇದಲ್ಲದೆ ಫ್ಲಡ್ ಕಂಟ್ರೋಲ್ ಬಗ್ಗೆ ಸೂಕ್ತ ಕ್ರಮ ಕೈಕೊಳ್ಳಬೇಕು. ನಮ್ಮ ಜಿಲ್ಲೆಯಲ್ಲಿ ಅನೇಕ ಕೆರೆಗಳ ಅಣೆಕಟ್ಟು ಒಡೆದು ಹೋಗಿದೆ. ಇದರಿಂದ ಭಾರಿ ನಷ್ಟ ಉಂಟಾಗಿದೆ. ಇಂಥ ಅಣೆಕಟ್ಟುಗಳ ದುರಸ್ತಿ ಕೆರೆ ಕಟ್ಟೆಗಳ ದುರಸ್ತಿ ಮಾಡಲು ಮತ್ತು ಫ್ಲಡ್ ಕಂಟ್ರೋಲ್ ವರ್ಕ ಪ್ರಾರಂಭ ಮಾಡಲು ಸರಕಾರ ಸೂಕ್ತ ಕ್ರಮ ಕೈಕೊಳ್ಳಬೇಕು. ಈ ರೀತಿ ನಷ್ಟ ಉಂಟಾಗದಂತೆ ಮಾಡಬೇಕೆಂದು ಸರಕಾರಕ್ಕೆ ಸೂಚಿಸ ಬಯಸುತ್ತೇನೆ. ನಮ್ಮ ಜಿಲ್ಲೆಯಲ್ಲಿ ಅಲ್ಪ ಪ್ರಮಾಣ ದ ನೀರಾವರಿ ಯೋಜನೆ ಮಾಡಬಹುದು. ನಮ್ಮ ಜಿಲ್ಲೆಯಲ್ಲಿ ಭಾರಿ ಪ್ರಮಾಣದ ನೀರಾವರಿ ಯೋಜನೆ ಮಾಡುವುದಕ್ಕೆ ದೊಡ್ಡ ನದಿಗಳಿಲ್ಲ. ಆದುದರಿಂದ ಸಣ್ಣ ನೀರಾವರಿ ಯೋಜನೆಗೆ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಸಣ್ಣಪುಟ್ಟ ಕೆರೆಗಳ ಜೀರ್ಣೋದ್ಧಾರ ಮಾಡಲು ಕಡಿಮೆ ಹಣ ಸಾಕಾಗುತ್ತದೆ ಅಲ್ಪ ಹಣದಿಂದ ಅಲ್ಪ ಕಾಲದಲ್ಲಿ ಪ್ರತಿಫಲ ಹೊಂದಬಹುದು. ನಮ್ಮ ತಾಲ್ಲೂಕಿನಲ್ಲಿ ಸಣ್ಣ ಪುಟ ಕೆರೆಗಳ ರಿಪೇರಿ ಮಾಡುವುದಕ್ಕೆ ಹಣವಿಲ್ಲ ಎಂದು ಹೇಳುತ್ತಾ ಇರುವುದರಿಂದ ಹೊಸ ಕೆರೆ ಕಟ್ಟುವುದಕೆ ಸರಕಾರ ಮನಸ್ಸು ಮಾಡುತ್ತದೆ ಎಂಬುದು ಕನಸಿನ ಮಾತಾಗುತ್ತದೆ. ಅನೇಕ ಕೆರೆಗಳಿಗೆ ಸರಿಯಾದ ತೂಬು ಇಲ್ಲ. ಕೆಲವು ಕಡೆ ತೂಬು ಒಡೆದು ಹೋಗಿವೆ. ಸರಿಯಾದ ಕಾಲುವೆಗಳು ಇಲ್ಲದೆ ಸಾವಿರಾರು ಎಕರೆ ಜಮೀನು ಸಾಗುವಳಿಗೆ ಬಾರದೆ ಬಂಜರು ಭೂಮಿಯಾಗಿದೆ. ಸಂಬಂಧಪಟ್ಟವರು ಈ ವಿಷಯವನ್ನು ಮಾನ್ಯ ಮಂತ್ರಿಗಳಿಗೂ ಮಾನ್ಯ ಮುಖ್ಯ ಮಂತ್ರಿಗಳಿಗೂ ಹೇಳಿ ಹೇಳಿ ಕಾಗದ ಬರೆದು ಬರೆದು ಸಾಕಾಗಿದೆ. ಈ ವರ್ಷದಲ್ಲಿ ಸಣ್ಣ ಪುಟ್ಟ ಕೆರೆಗಳ ರಿಪೇರಿ, ತೂಬು ರಿಪೇರಿ ಅವಶ್ಯವಾಗಿ ಮಾಡಿಸಿ ಕೊಡುತ್ತಾರೆ ಎಂದು ನಾನು ನಂಬಿದ್ದೇನೆ. ಸ್ವಾಮಿ, ಹೊಸ ಕೆರೆ ನಿರ್ಮಿಸುವಾಗ ನೀರಿನ ಸೌಕರ್ಯವನ್ನು ಪಡೆಯುವ ರೈತನು ಮುಂಗಡವಾಗಿ ವಾಟರ್ ಕಾಂಟ್ರಿಬ್ಯೂಷನ್ $\frac{1}{4}$ ಭಾಗವನ್ನು ಕೊಡಲು ಮುಂದೆ ಬಂದಕಡೆ ಹೊಸ ಕೆರೆ ನಿರ್ಮಿಸಲು ಫಸ್ಟ್ ಪ್ರಾಯಾರಿಟಿ ಕೊಡುತ್ತೇ

(ಶ್ರೀಮತಿ ಜಿ. ಸಿ. ಭಾಗೀರಥಮ್ಮ)

ವೆಂದು ತಿಳಿಸಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ಹೊಸ ಕೆರೆ ನಿರ್ಮಿಸುವುದಾದರೆ ಮುಂಗಡ ¼ contribution ಹಣ ಕೊಡುವುದಕ್ಕೆ ತಯಾರಾಗಿದ್ದೇವೆಂದು ಜನರು ಬರವಣಿಗೆಯಲ್ಲಿ ಕೊಟ್ಟಿದ್ದಾರೆ. ಇಂಥ ಜಾಗದಲ್ಲಿ ಹೊಸದಾಗಿ ಕೆರೆ ನಿರ್ಮಿಸಲು ಸರಕಾರ ಹಿಂದು ಮುಂದೆ ಏತಕ್ಕೆ ನೋಡುತ್ತಾರೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಭಾರಿ ಹಣ ಖರ್ಚು ಮಾಡಿ ಭಾರಿ ನೀರಾವರಿ ಯೋಜನೆ ಪ್ರಾರಂಭಿಸುವುದರಿಂದ ಅದರ ಪ್ರತಿಫಲ ಪಡೆಯಲು ಬಹಳ ಕಾಲ ಬೇಕಾಗುತ್ತದೆ. ಆದರೆ ಅಲ್ಪ ಹಣ ಖರ್ಚು ಮಾಡಿ ಸಣ್ಣ ನೀರಾವರಿ ಯೋಜನೆ ಮಾಡುವುದರಿಂದ ಅಲ್ಪಕಾಲದಲ್ಲಿ ಅದರ ಲಾಭ ಪ್ರತಿಫಲ ಪಡೆಯಲು ಸಾಧ್ಯವಾಗುವ ಕಡೆಗೆ ಎನ್ನುವುದಕ್ಕೆ ಸರಕಾರ ಗಮನ ಕೊಡಬೇಕೆಂದು ನಾನಾದರೂ ಸಲಹೆ ಮಾಡುತ್ತೇನೆ. ಮತ್ತು ಅರ್ಧದಲ್ಲೇ ನಿಂತಿರುವ ನೀರಾವಾರಿ ಭಾವಿಗಳನ್ನು ಪೂರ್ಣಗೊಳಿಸಲು ಸಕಾಲದಲ್ಲಿ ಆದಷ್ಟು ಜಾಗ್ರತೆ ಹಣ ಒದಗಿಸಬೇಕಾಗಿ ವಿನಂತಿ. ನೀರಾವರಿ ಭಾವಿಗಳ ಬಗ್ಗೆ ಕೆಲವು ವಿಷಯಗಳನ್ನು ನನ್ನ ಹಿಂದಿನ Budget ಭಾಷಣದಲ್ಲೂ ಹೇಳಿದ್ದೇನೆ. ಈಗಲೂ ಅದನ್ನೂ ಪುನಃ ಹೇಳಬೇಕಾಗಿದೆ. Well Boring Machine ವಿಷಯ ನಮ್ಮಲ್ಲಿ ಕೆಲವು ಭಾವಿಗಳಲ್ಲಿ ಬಂಡೆ ಸಿಕ್ಕಿ ರೈತ ಕಷ್ಟಕ್ಕೆ ಸಿಕ್ಕಿದ್ದಾನೆ. ಪೂರ್ಣಗೊಳಿಸುವ ಶಕ್ತಿ ಅವನಲ್ಲಿ ಇಲ್ಲದಾಗಿದೆ. ದೈಹಿಕ ಶಕ್ತಿ ಇದ್ದರೂ ಆರ್ಥಿಕ ಶಕ್ತಿ ಕುಂದಿ ಹೋಗಿದೆ. Well Boring Machine ಸಹಾಯ ನೀಡಿ ಪುನಃ ರೈತನನ್ನು ಮನುಷ್ಯನನ್ನಾಗಿ ಮಾಡಲೂ ಸಹಾಯ ಮಾಡಿ ಎಂದು ಸಂಬಂಧಪಟ್ಟ ಮಂತ್ರಿಗಳಿಗೆ ಮತ್ತು ಅಧಿಕಾರಿಗಳಿಗೆ ಬರೆದು ಬರೆದು ಸಾಕಾಗಿದೆ. ಅವನಲ್ಲಿದ್ದ ಪೂರ್ತಿ ಹಣವನ್ನು ಅವನು ಖರ್ಚು ಮಾಡಿದ್ದಾನೆ. ಅವನು ಆರ್ಥಿಕವಾಗಿ ಶಕ್ತಿಕುಂದಿದ್ದಾನೆ. ಆದುದರಿಂದ ನಾನೀಗ ಸರ್ಕಾರಕ್ಕೆ ಸಲಹೆ ಮಾಡುವುದೇನೆಂದರೆ : ಅಂಥ ರೈತರಿಗೆ ಸರ್ಕಾರದವರು ವೆಲ್‌ಬೋರಿಂಗ್ ಮಿಷನ್‌ಗಳನ್ನು ಕೊಟ್ಟು ಬಾವಿಗಳನ್ನು ತೆಗೆಸಿ ಅವರಿಂದ ಕಂತು ರೂಪದಲ್ಲಿ ಆ ಸಾಲವನ್ನು ವಸೂಲ್ ಮಾಡಿಕೊಳ್ಳಬೇಕೆಂದು ಹೇಳುತ್ತೇನೆ. ವ್ಯವಸಾಯದ ಮಂತ್ರಿಗಳೇ ನನ್ನ ಜೊತೆಯಲ್ಲಿ ಬರಲಿ ಅಲ್ಲಿರತಕ್ಕ ಸ್ಥಿತಿಗತಿಗಳನ್ನು ನೋಡಿದರೆ ಆಗೇನಾದರೂ ಅವರಿಗೆ ಮನಸ್ಸು ಬರುತ್ತೋ ಇಲ್ಲವೊ, ನೋಡೋಣ.

ಇನ್ನು ಪಂಪ್‌ಸೆಟ್‌ಗಳ ವಿಚಾರಕ್ಕೆ ಬಂದರೆ—ಎಲ್ಲಿ ಎಲಕ್ಟ್ರಿಕ್ ಪೋಲುಗಳಿದ್ದರೆ ಅಲ್ಲಿ ತಂತಿಯಿಲ್ಲ ಎಲ್ಲಿ ತಂತಿ ಇದ್ದರೆ ಅಲ್ಲಿ transformers ಇಲ್ಲ ಇದರ ಅವಸ್ಥೆ ಹೀಗಾಗಿದೆ. ಅಂತೂ ಇಲ್ಲಿಯವರಿಗಾದರೂ ರೈತನಿಗೆ ಈ ವಿಚಾರದಲ್ಲಿ ಸಹಾಯವೇನೂ ದೊರೆತಿಲ್ಲ. ಆದುದರಿಂದ ಸರ್ಕಾರದವರು ಆದಷ್ಟು ಬೇಗ ಈ ಅನುಕೂಲವನ್ನು ರೈತರಿಗೆ ಒದಗಿಸಿಕೊಡಬೇಕೆಂದು ನಾನು ಪ್ರಾರ್ಥಿಸಿಕೊಳ್ಳುತ್ತೇನೆ.

ಇನ್ನು ರೈತನಿಗೆ ಬೇಕಾದ ಕೆಲವು ಉಪಕರಣಗಳನ್ನು ಆತನೇ ಒದಗಿಸಿಕೊಳ್ಳುವುದಕ್ಕೆ ಸರ್ಕಾರದವರು ಸಬ್‌ಸಿಡಿಯನ್ನು ಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಈ ದಿವಸ ರೈತನ ಬೇಳೆಗೇನಾದರೂ ರೋಗ ಬಂದರೆ ಆತನು ಎಕ್ಸ್‌ಟೆನ್‌ಷನ್ ಆಫೀಸರಲ್ಲಿ ಲೆವಲ್ ವರ್ಕರುಗಳಲ್ಲಿ ಹೋಗಿ ಆ ಸ್ಪ್ರೇಯಿಂಗ್ ಮಿಷಿನ್ ತಂದು ಸ್ಪ್ರೇಮಾಡುವ ಹೊತ್ತಿಗೆ ಆತನ ಬೆಳೆಯಲ್ಲಾ ನಾಶವಾಗಿರುತ್ತದೆ. ಆದಕಾರಣ ಇಂಥ ಒಂದು ತೊಂದರೆಯನ್ನು ತಪ್ಪಿಸಲು ರೈತರಿಗೇ ಆ ಸಲಕರಣೆಗಳನ್ನು ತಂದುಕೊಳ್ಳಲು ಸರ್ಕಾರದವರು ಸಾಕಷ್ಟು ಸಬ್‌ಸಿಡಿಯನ್ನು ಕೊಡಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ವಿದ್ಯಾಭ್ಯಾಸದ ಬಗ್ಗೆ ನಾನು ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಈ ಬಾಬಿಗೆ 1965—66 ಸಾಲಿಗೆ ಹೆಚ್ಚು ಹಣವನ್ನೇನೋ ಒದಗಿಸಿದ್ದಾರೆ, ಇದು ಬಹಳ ಸಂತೋಷದ ವಿಚಾರ. ಈ ದಿವಸ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯ ಮಾಡಿದ್ದಾರೆ. ಈ ದಿವಸ ಅಧಿಕ ಸಂಖ್ಯೆಯಲ್ಲಿ ಮಕ್ಕಳೂ ಕೂಡ ಶಾಲೆಗಳಿಗೆ ಬರುತ್ತಿದ್ದಾರೆ. ಆದರೆ ಇದರಲ್ಲಿ ಶೇ : 70 ರಷ್ಟು ಮಾತ್ರ ಸಫಲವಾಗಿದೆ. ಕಾರಣವೇನೆಂದರೆ ಇನ್ನುಳಿದ ತೊಂದರೆ ಶಾಲೆಗಳ ಅಭಾವಕ್ಕೆ ಮೂಲ ಕಾರಣವಾಗಿದೆ. ಇರತಕ್ಕ ಶಾಲೆಗಳನ್ನು ದುರಸ್ತಿ ಮಾಡುವುದೂ ಬಹಳ ಅಗತ್ಯವಾದುದು. ಹೊಸ ಶಾಲೆಗಳನ್ನು ನಿರ್ಮಾಣ ಮಾಡುವುದೇ ಅಲ್ಲದೆ ಹಳೆಯ ಕಟ್ಟಡಗಳ ದುರಸ್ತಿ ಕೂಡ ಬಹಳ ಅತ್ಯಗತ್ಯ. ಈ ದಿವಸ 10-15 ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಕಟ್ಟಿಸಿರತಕ್ಕ ಕಟ್ಟಡಗಳನ್ನು ರಿಪೇರಿ ಮಾಡುವುದಕ್ಕೆ 1–2 ಸಾವಿರ ರೂಪಾಯಿಗಳಿಲ್ಲದೆ, ಅವು ಬಿದ್ದುಹೋಗುತ್ತಿವೆ. ಆದುದರಿಂದ ಇವುಗಳ ರಿಪೇರಿಯ ಜವಾಬ್ದಾರಿಯನ್ನು ಸರ್ಕಾರದವರೇ ವಹಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಈ ದಿವಸ ಇವುಗಳ ರಿಪೇರಿಯ ಹೊಣೆಗಾರಿಕೆಯನ್ನು ಒಬ್ಬರಿಂದ ಇನ್ನೊಬ್ಬರಿಗೆ ವರ್ಗಾಯಿಸುವುದರಲ್ಲಿ ಇದ್ದಾರೆ. ಹಿಂದೆ ಇವುಗಳನ್ನು ಪಿ. ಡಬ್ಳ್ಯು. ಡಿ. ವಹಿಸಿತ್ತು. ಅನಂತರ ತಾಲ್ಲೂಕ್ ಬೋರ್ಡುಗಳಿಗೆ ಇದನ್ನು ವಹಿಸಲಾಗಿತ್ತು. ಈಗ ಅವರು ಪಂಚಾಯ್ತಿಯ ಮೇಲೆ ಹಾಕಿದ್ದಾರೆ. ಹೀಗೆ ಯಾರೊಬ್ಬರೂ ಇದನ್ನು ನಡೆಸುತ್ತಿಲ್ಲ. ಶಾಲೆಗಳೆಲ್ಲಾ ಬಿದ್ದುಹೋಗುತ್ತಿವೆ.

ಹೀಗಾಗಿ ಗಂಡಹೆಂಡಿರ ಜಗಳದಲ್ಲಿ ಕೂಸು ನಾಶವಾದಂತೆ ಆಗಿದೆ. ಆದುದರಿಂದ ಸರ್ಕಾರದವರು ಈ ಶಾಲೆಗಳ ದುರಸ್ತಿಯನ್ನಾದರೂ ನಡೆಸಬೇಕು, ಇಲ್ಲವೇ ಶಾಲೆಗೆ ಬರತಕ್ಕ ಮಕ್ಕಳಿಗೆ ಈ ಶಾಲೆಗಳಿಂದ ಯಾವ ಅಪಾಯವೂ ಆಗದಂತೆ ಒಂದು ಜವಾಬ್ದಾರಿಯನ್ನು ವಹಿಸದಿದ್ದರೆ ಬೇರೇ ಮಾರ್ಗವೇ ಇಲ್ಲ. ನಾನು ಇದನ್ನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ, ಈ ದಿವಸ ಗ್ರಾಮಸ್ಥರು ಈ ಶಾಲೆಗಳ ಅಪಾಯ ಸ್ಥಿತಿಯನ್ನು ನೋಡಿ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿಲ್ಲ. ಅದಕ್ಕಾಗಿ ನಾನು ಇದನ್ನು ಹೇಳಲೇಬೇಕಾಯಿತು.

ಇನ್ನು ಅನೇಕ ಕಡೆ ಜನರು ಖಾಸಗೀ ಹೈಸ್ಕೂಲುಗಳನ್ನು ತೆರೆದಿದ್ದಾರೆ. ಅವುಗಳು ಪ್ರಾರಂಭವಾದ ಮೂರು ವರ್ಷಗಳವರೆಗೂ ಸರ್ಕಾರದವರು ಯಾವ ಸಹಾಯವನ್ನೂ ಮಾಡುವುದಿಲ್ಲವೆಂದು ಹೇಳುತ್ತಿರುವುದರಿಂದ ಇವು ಬಹಳ ಹೀನಸ್ಥಿತಿಯಲ್ಲಿವೆ. ಅದಕ್ಕಾಗಿ ನಾನು ಸಲಹೆ ಮಾಡುವುದೇನೆಂದರೆ : ಇವು ಪ್ರಾರಂಭವಾದ ಮೊದಲನೇ ವರ್ಷದಲ್ಲಿ ಶೇಕಡಾ 90 ರಷ್ಟನ್ನೂ ಅದರ ಮಾರನೇ ವರ್ಷ ಶೇಕಡಾ 75 ರಷ್ಟನ್ನೂ ಆ ಮಾರನೇ ವರ್ಷದಿಂದ ಶೇಕಡಾ 50 ರಷ್ಟನ್ನೂ ಸಹಾಯವಾಡಬೇಕು ಎಂದು ಸಲಹೆಮಾಡುತ್ತೇನೆ. ಇದರ ಕಷ್ಟವೇನಿದ್ದರೂ ಪ್ರಾರಂಭದಲ್ಲಿ ಜಾಸ್ತಿ ಇರುವುದರಿಂದ ಪ್ರಾರಂಭದಲ್ಲಿ ಸರ್ಕಾರದವರು ಸಹಾಯ ನೀಡಲೇಬೇಕೆಂದು ಹೇಳುತ್ತೇನೆ. ಅನಂತರ ಪ್ರತಿ ವರ್ಷವೂ ಸರ್ಕಾರದವರು ಶೇಕಡಾ 50 ರಷ್ಟು ಧನ ಸಹಾಯ ನೀಡುತ್ತಾಹೋದರೆ ಅಲ್ಲಿಗೆ ಇದು ಸರಿಹೋಗುವುದು. ಈ ಖಾಸಗೀ ಶಾಲೆಗಳಿಗೆ ಕೇಳತಕ್ಕ ಡಿಪಾಜಿಟ್ಟನ್ನು ಬೇಕಾದರೆ 5 ಸಾವಿರಕ್ಕೆ 10 ಸಾವಿರ ಕೇಳಿ ನಾನು ಬೇಡವೆನ್ನುವುದಿಲ್ಲ. ಇನ್ನು ಈ ಶಾಲೆಗಳಲ್ಲಿ ಮಕ್ಕಳಿಗೆ ವ್ಯವಸಾಯ ಅಭಿವೃದ್ಧಿಯ ಬಗ್ಗೆ ತಿಳುವಳಿಕೆಯುಂಟಾಗಲು ಇವರಿಗೆ ಅಗತ್ಯವಾದ ತೋಟಗಾರಿಕೆ ಇತ್ಯಾದಿಗಳನ್ನು ಕಲಿಸಬೇಕಾದ್ದು ಅತ್ಯಗತ್ಯ. ಏಕೆಂದರೆ ನಮ್ಮ ದೇಶ ವ್ಯವಸಾಯದ ದೇಶ. ಸರ್ಕಾರದವರು ಇತ್ತ ಕಡೆಗೆ ಹೆಚ್ಚು ಗಮನಕೊಟ್ಟರೆ ಒಳ್ಳೆಯದು, ನಮ್ಮ ರಾಜ್ಯದಲ್ಲಿ ಹೆಚ್ಚು ಆಹಾರ ಧಾನ್ಯಗಳನ್ನು ಒದಗಿಸಿಕೊಳ್ಳಲು ಈ ಶಿಕ್ಷಣ ನಮಗೆ ಅತ್ಯಗತ್ಯ. ಇನ್ನು ಇದೇ ಮಾರ್ಗದಲ್ಲಿ ನಾವು ಮುಂದುವರಿಯಬೇಕಾಗಿದ್ದರೆ ಗ್ರಾಮಾಂತರ ಪ್ರದೇಶದಲ್ಲಿ ಎಲ್ಲೆಲ್ಲಿ ಹೈಸ್ಕೂಲುಗಳಿವೆಯೋ ಅಲ್ಲೆಲ್ಲಾ ಹಾಸ್ಟಲುಗಳನ್ನು ತೆರೆಯುವುದು ಒಳ್ಳೆಯದು.

ಇನ್ನು ನಾನು ಎಜುಕೇಷನ್ ಕೌನ್ಸಿಲ್ಲಿನ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಸರ್ಕಾರದವರು ಎಜುಕೇಷನ್ ಕೌನ್‌ಸಿಲ್ ಎಂಬುದಾಗಿ ಒಂದು ಸಮಿತಿಯನ್ನು ನೇಮಕ ಮಾಡಿದ್ದಾರೆ. ನಾನೂ ಸಹಾ ಇದರಲ್ಲಿ ಒಬ್ಬ ಸದಸ್ಯಿಣಿ. ನಾನು ಇನ್ನು ಎಲ್ಲೋ ಸ್ವಪ್ನದಲ್ಲಿ ಕೇಳಿದಂತಾಗಿದೆ. ಇದರ ಅಧ್ಯಕ್ಷರಾರು, ಅವರೆಲ್ಲಿದ್ದಾರೆ, ಅವರ ಕರ್ತವ್ಯವೇನು ಏಂಬುದು ಇಲ್ಲಿಯವರೆಗೂ ನನಗೆ ಗೊತ್ತಾಗಲಿಲ್ಲ.

ಆಹಾರದ ಬಗ್ಗೆ ಒಂದು ವಿಷಯವನ್ನು ಹೇಳುವುದನ್ನು ಬಿಟ್ಟುಬಿಟ್ಟೆ. ಆಹಾರವನ್ನು ಹಂಚುವ ವಿಧದಲ್ಲಿ ಒಮ್ಮೆ ಕೋ-ಅಪರೇಟೀವ್ ಸೊಸೈಟಿ ಮುಖಾಂತರ ಫೇರ್‌ಪ್ರೈಸ್ ಡಿಪೋಗಳಿಗೆ ಹಂಚುತ್ತೇವೆ ಎಂದು ಹೇಳಿದಿರಿ. ಮತ್ತೊಂದು ಸಾರಿ ಹೋಲ್‌ಸೇಲ್ ವರ್ತಕರ ಮುಖಾಂತರ ಹಂಚುತ್ತೇವೆ ಎಂದು ಹೇಳಿದಿರಿ. ಇದರಿಂದ ಬಹಳ ದಿವಸಗಳಿಂದಲೂ ವ್ಯಾಪಾರ ಮಾಡಿದಂತಹ ವರ್ತಕರಿಗೆ ಕೆಲಸವಿಲ್ಲದಂತಾಗಿದೆ. ಎಲ್ಲಾ ವರ್ತಕರೂ ಅಪ್ರಾಮಾಣಿಕರಲ್ಲ. ಆದ್ದರಿಂದ ಕೆಲವು ಹೋಲ್‌ಸೇಲ್ ವರ್ತಕರಿಗೂ ಕೂಡ ಆಹಾರವನ್ನು ಹಂಚತಕ್ಕ ಅವಕಾಶವನ್ನು ಕಲ್ಪಿಸಿ ಕೊಡಬೇಕು. ಎಲ್ಲವನ್ನೂ ಸೊಸೈಟಿಗಳ ಮೂಲಕವೇ ಹಂಚುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಕೆಲವು ವರ್ತಕರುಗಳಿಗೂ ಕೂಡ ಕೊಡಬೇಕು, ಕೆಲವು ಸೊಸೈಟಿಗಳ ಮುಖಾಂತರ ಕೂಡ ಹಂಚುವಂತಹ ವ್ಯವಸ್ಥೆ ಮಾಡಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಅವಕಾಶಕೊಟ್ಟದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ರುದ್ರಪ್ಪ (ಕಲ್ಗಿ).—ಮಾನ್ಯ ಸಭಾಪತಿಗಳೇ, ಹಣಕಾಸಿನ ಮಂತ್ರಿಗಳಾದ ಜತ್ತಿಯವರು ತಮ್ಮ ಬಡ್ಜೆಟ್ಟನ್ನು ಇವತ್ತಿನ ದಿವಸ ನಮ್ಮ ಮುಂದೆ ಮಂಡಿಸಿದ್ದಾರೆ. ಇದನ್ನು ಸ್ವಾಗತಿಸುತ್ತಾ ಕೆಲವು ವಿಷಯಗಳನ್ನು ಹೇಳಬೇಕೆಂದು ಬಯಸುತ್ತೇನೆ. ರಾಜ್ಯಸರ್ಕಾರದವರು ಮೇಜರ್ ಇಂಡಸ್ಟ್ರೀಸ್‌ಗಳನ್ನು ಸ್ಥಾಪಿಸುವುದರಲ್ಲಿ ಸಾಕಾದಷ್ಟು ಕಾರ್ಯವನ್ನು ಮಾಡಿದ್ದಾರೆ ಮತ್ತು ಮಾಡಲಿಕ್ಕೆ ಹತ್ತಿದ್ದಾರೆ. ಆದರೆ ಸಣ್ಣ ಸಣ್ಣ ಕೈಗಾರಿಕೆಗಳಿಗೆ ಅಷ್ಟೊಂದು ಪ್ರೋತ್ಸಾಹ ಕೊಟ್ಟಿಲ್ಲ ಎಂದು ನನಗೆ ಅನಿಸುತ್ತದೆ. ಹೈದರಾಬಾದು ಕರ್ನಾಟಕದ ವಿಷಯ ಹೇಳಬೇಕೆಂದರೆ ಅಲ್ಲಿ ಸಣ್ಣ ಕೈಗಾರಿಕೆಗಳಿಗೆ ಅಷ್ಟೊಂದು ಪ್ರೋತ್ಸಾಹ ಕೊಟ್ಟಿಲ್ಲ. ಗುಲ್ಬರ್ಗ ಸಿಟಿಯಲ್ಲಿ ಕೆಲವು ಜನ ಕಾರ್ಮಿಕರು ಇದ್ದಾರೆ ; ತಾಮ್ರ ಮತ್ತು ಇನ್ನಿತರ ಕೆಲಸಗಳನ್ನು ಮಾಡತಕ್ಕ ಮಂದಿ ವಿಶೇಷವಾಗಿ ಇದ್ದಾರೆ. ಅವರಿಗೆ ಕೆಲಸ ಇಲ್ಲ, ಅವರಿಗೆ ಸರಿಯಾದಂತಹ ಕಚ್ಚಾ ಸಾಮಾನನ್ನು ಒದಗಿಸುತ್ತಾ ಇಲ್ಲ ಆ ಕಡೆಗೆ ಸರ್ಕಾರ ಹೆಚ್ಚು ಲಕ್ಷ್ಯ ಕೊಟ್ಟಿಲ್ಲ ಎಂದು ಹೇಳಬಹುದು. ಬ್ರಾಸ್‌ವೇರ್ಸ್ ಮಾಡತಕ್ಕ ಅಲ್ಲಿರತಕ್ಕ ಕೆಲಸಗಾರರು ಇಂಡಸ್ಟ್ರಿಯಲ್ ಕೋ-ಅಪರೇಟೀವ್ ಸೊಸೈಟಿ ಮಾಡಿಕೊಂಡಿದ್ದಾರೆ.

(ಶ್ರೀ ಎಸ್. ರುದ್ರಪ್ಪ)

ಅವರಲ್ಲಿ ಸಾಕಾದಷ್ಟು ಹಣ ಕೂಡ ಇದೆ, ಆದರೆ ಅವರಿಗೆ ಬೇಕಾದಂತಹ ಕಚ್ಚಾ ಸಾಮಾನನ್ನು ಒದಗಿಸಿಕೊಳ್ಳಲು ಅವರು ಬೆಂಗಳೂರಿಗೆ ಬರಬೇಕಾಗುತ್ತದೆ. ಇಲ್ಲಿ ಮೂರು ನಾಲ್ಕು ದಿವಸ ಇದ್ದು ಇಲ್ಲಿರತಕ್ಕ ಇಂಡಸ್ಟ್ರಿಯಲ್ ಡೈರೆಕ್ಟರನ್ನು ಭೇಟಿಯಾಗಿ ತಮ್ಮ ಕಾಗದಪತ್ರಗಳನ್ನು ಫಾಲೋ ಅಪ್ ಮಾಡಿ ತಮ್ಮಲ್ಲಿರತಕ್ಕ ಹಣವನ್ನು ಖರ್ಚು ಮಾಡಿಕೊಂಡನಂತರ ಅವರಿಗೆ ಸಾಕಾದಷ್ಟು ಕಚ್ಚಾ ಸಾಮಾನು ಸಿಕ್ಕುತ್ತದೆ. ಇದೇ ರೀತಿ ಗುಲ್ಬರ್ಗಾದಲ್ಲಿ ಇನ್ನಿತರ ಸಣ್ಣ ಕೈಗಾರಿಕೆಗಳು ಇವೆ ಅವುಗಳಿಗೂ ಕೂಡ ಕಚ್ಚಾ ಮಾಲನ್ನು ಪಡೆಯಲು ಬೆಂಗಳೂರಿಗೆ ಬರಬೇಕು, ಸಾಕಾದಷ್ಟು ಹಣ ಖರ್ಚು ಮಾಡಿದನಂತರ ಕಚ್ಚಾ ಮಾಲು ಸಿಕ್ಕುತ್ತದೆ. ಆದರೂ ಕೂಡ ಅದು ಸಾಕಾಗುವುದಿಲ್ಲ. ಆದ್ದರಿಂದ ಅವರು ಮಾಡತಕ್ಕ ಕೈಗಾರಿಕೆಗಳಲ್ಲಿ ಟ್ರಾನ್ಸ್‌ಪೋರ್ಟೇಷನ್ ಚಾರ್ಜಸ್ ಮತ್ತು ಇನ್ನಿತರ ಖರ್ಚುಗಳು ಬಹಳವಾಗಿ ಬೀಳುತ್ತದೆ. ಆ ಯೂನಿಟ್ಟು ಎಕನಾಮಿಕಲ್ ಆಗುತ್ತಾ ಇಲ್ಲ. ಆದ್ದರಿಂದ ಈ ಸಂದರ್ಭದಲ್ಲಿ ನನ್ನ ಒಂದು ಸೂಚನೆ ಏನೆಂದರೆ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಏನಿದೆ ಅವರು ಗುಲ್ಬರ್ಗ, ರಾಯಚೂರು, ಬಿದರ್ ಈ ಭಾಗಗಳಿಗೆ ಅನುಕೂಲವಾಗುವಂತೆ ಒಂದು ಡಿಪೋ ಅನ್ನು ತೆರೆದರೆ ಅನುಕೂಲವಾಗುತ್ತದೆ ಮತ್ತು ಅವರಿಗೆ ಸುಲಭವಾದ ರೀತಿಯಲ್ಲಿ ಕಚ್ಚಾ ಮಾಲು ಸಿಕ್ಕುವುದಕ್ಕೆ ಅವಕಾಶವಾಗುತ್ತದೆ ಎಂದು ಹೇಳುತ್ತೇನೆ. ಇದು ಹೊಸದೇನೂ ಅಲ್ಲ. ಈಗಾಗಲೇ ಬೊಂಬಾಯಿ ಕರ್ನಾಟಕದಲ್ಲಿ ಹುಬ್ಬಳ್ಳಿಯಲ್ಲಿ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಅವರು ಒಂದು ಡಿಪೋ ಅನ್ನು ತೆರೆದಿದ್ದಾರೆ, ಅದರ ಮೂಲಕ ಕಚ್ಚಾ ಮಾಲನ್ನು ಒದಗಿಸುತ್ತಾ ಇದ್ದಾರೆ, ಅದೇ ರೀತಿಯಲ್ಲಿ ಗುಲ್ಬರ್ಗಾದಲ್ಲೂ ಮಾಡಬೇಕೆಂದು ಹೇಳುತ್ತೇನೆ.

ಬಿ. ಡಿ. ಜತ್ತಿ (ಹಣಕಾಸಿನ ಶಾಖೆಯ ಮಂತ್ರಿಗಳು).—ಅದು ಬೊಂಬಾಯಿ ಕರ್ನಾಟಕಕ್ಕೆ ಮಾತ್ರವಲ್ಲ ಹೈದರಾಬಾದು ಮತ್ತು ಬೊಂಬಾಯಿ ಕರ್ನಾಟಕ ಎರಡಕ್ಕೂ ಇದೆ.

ಶ್ರೀ ಎಸ್. ರುದ್ರಪ್ಪ.—ಹೈದರಾಬಾದು ಕರ್ನಾಟಕದವರು ಗುಲ್ಬರ್ಗಾದಿಂದ ಹುಬ್ಬಳ್ಳಿಗೆ ಹೋಗಬೇಕಾದರೆ ಬಹಳ ದೂರ ಆಗುತ್ತದೆ ಮತ್ತು ಟ್ರಾನ್ಸ್‌ಪೋರ್ಟೇಷನ್ ಚಾರ್ಜಸ್ ಜಾಸ್ತಿಯಾಗುತ್ತದೆ. ಏಕೆಂದರೆ ರೈಲ್ವೆದಲ್ಲಿ ಬರಬೇಕಾದರೆ ಹುಬ್ಬಳ್ಳಿಯಿಂದ ಹುಟಗಿಗೆ ಬರಬೇಕಾಗುತ್ತದೆ ಹುಟಗಿಯಿಂದ ಗುಲ್ಬರ್ಗಾಕ್ಕೆ ಬರಬೇಕಾಗುತ್ತದೆ. ಆದ್ದರಿಂದ ಗುಲ್ಬರ್ಗಾಕ್ಕೆ ಒಂದು ಡಿಪೋ ತೆರೆದು ಅನುಕೂಲ ಮಾಡಿ ಕೊಡಬೇಕೆಂದು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಎರಡನೆಯದಾಗಿ ಗುಲ್ಬರ್ಗಾ, ಬಿದರ್ ಮತ್ತು ರಾಯಚೂರಿನಲ್ಲಿ ಎಷ್ಟೋ ಜನ ಸಣ್ಣ ಸಣ್ಣ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲಿಕ್ಕೆ ಮುಂದೆ ಬರುತ್ತಾ ಇದ್ದಾರೆ. ಅವರಿಗೆ 'ಟೆಕ್ನಿಕಲ್ ನೋ ಹೌ' ಸರಿಯಾದ ಸಮಯದಲ್ಲಿ ಸಿಕ್ಕುವುದಿಲ್ಲ, ಆ ದೃಷ್ಟಿಯಿಂದ ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್ ಸರ್ವೀಸ್ ಇನ್‌ಸ್ಟಿಟ್ಯೂಷನ್ ಅವರು ಅವರ ಒಂದು ಬ್ರಾಂಚನ್ನು ಅಲ್ಲಿ ತೆರೆದರೆ ಆ ಜನರಿಗೆ ಟೆಕ್ನಿಕಲ್ ನಾಲೆಡ್ಜನ್ನು ಕೊಡಲಿಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಅಲ್ಲಿ ಅವರು ಒಂದು ಬ್ರಾಂಚನ್ನು ತೆರೆಯಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ನಮ್ಮ ಗುಲ್ಬರ್ಗಾದಲ್ಲಿ 3-4 ವರ್ಷಗಳಿಂದ ಒಂದು ಇಂಡಸ್ಟ್ರಿಯಲ್ ಎಸ್ಟೇಟ್ ಇದೆ, ಅದಕ್ಕೆ ಇದುವರೆಗೂ ಸಹ ಒಬ್ಬರು ಇಂಡಸ್ಟ್ರಿಯಲ್ ಎಸ್ಟೇಟ್ ಆಫೀಸರನ್ನು ಹಾಕಿಲ್ಲ. ಅಲ್ಲಿರತಕ್ಕವರಿಗೆ ಯಾವ ರೀತಿ ಸಣ್ಣ ಸಣ್ಣ ಕೈಗಾರಿಕೆಗಳನ್ನು ಹಾಕಬೇಕು, ಅವರಿಗೆ ಯಾವರೀತಿ ಪ್ರೋತ್ಸಾಹ ಕೊಡಬೇಕು ಎಂಬುದು ಕೂಡ ಗೊತ್ತಿಲ್ಲ. ಮೊದಲು ಒಬ್ಬ ಆಫೀಸರು ಇದ್ದರು ಅವರನ್ನು ಬೆಳಗಾಂ ಡಿವಿಜನ್‌ಗೆ ಹಾಕಿದ್ದಾರೆ. ಆ ಆಫೀಸರು ಇದ್ದ ಕಾಲದಲ್ಲಿ ನಮಗೆ ಎಲೆಕ್ಟ್ರಿಸಿಟಿ ಇಲ್ಲ. ಆದ್ದರಿಂದ ಇಂಡಸ್ಟ್ರಿಯಲ್ ಎಸ್ಟೇಟ್ ಕೆಲಸ ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳುತ್ತಾ ಇದ್ದರು, ಈಗ ನಮಗೆ ಹೈಡಲ್ ಪವರ್ ಬಂದಿದೆ, ಆದರೆ ಆಫೀಸರು ಇಲ್ಲ. ಆದ್ದರಿಂದ ಇಂಡಸ್ಟ್ರಿಯಲ್ ಎಸ್ಟೇಟು ಕೆಲಸ ಪ್ರಾರಂಭ ಮಾಡಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಸರ್ಕಾರದವರು ತೀವ್ರವಾಗಿ ಅಲ್ಲಿಗೆ ಒಬ್ಬ ಇಂಡಸ್ಟ್ರಿಯಲ್ ಎಸ್ಟೇಟ್ ಆಫೀಸರನ್ನು ಪೋಸ್ಟ್ ಮಾಡಬೇಕು ಮತ್ತು ಅಲ್ಲಿಯ ಜನರಿಗೆ ಟೆಕ್ನಿಕಲ್ ನಾಲೆಡ್ಜ್ ಕೊಡಲಿಕ್ಕೆ ಸರಿಯಾದ ಸೂಚನೆ ಕೊಡಬೇಕೆಂದು ಸೂಚನೆ ಮಾಡುತ್ತೇನೆ.

ಮೂರನೆಯದು ಎಂದರೆ, ಗುಲ್ಬರ್ಗಾದಲ್ಲಿ ಹೈಡಲ್ ಪವರ್ ಬಂದ ನಂತರ ಇದುವರೆಗೂ 8-10 ಪಂಪ್ ಸೆಟ್‌ಗಳನ್ನು ಕೊಟ್ಟಿದ್ದಾರೆ. ಅಲ್ಲಿಯ ಅಧಿಕಾರಿಗಳನ್ನು ಕೇಳಿದ್ದಕ್ಕೆ ನಮಗೆ ಸರಿಯಾದ ಸರ್ವೆ ಸ್ಟಾಫ್ ಇಲ್ಲ ಸರ್ವೆ ಮಾಡಲಿಕ್ಕೆ ಅನುಕೂಲ ಇಲ್ಲ ಆದ್ದರಿಂದ ಹೆಚ್ಚಿನ ಪ್ರಮಾಣದಲ್ಲಿ ಪಂಪ್ ಸೆಟ್‌ಗಳನ್ನು ಕೊಡಲಿಕ್ಕೆ ಆಗುವುದಿಲ್ಲ ಎಂದು ಹೇಳಿದರು. ಈ ಸಂದರ್ಭದಲ್ಲಿ ನಾನು ಮಾಡುವ ಸೂಚನೆ ಏನೆಂದರೆ ಬಳ್ಳಾರಿಯಲ್ಲಿ ಒಂದು ಸರ್ವೆ ಸೆಕ್ಷನ್ ಇದೆ, ಅವರಿಗೆ ಸಾಕಾದಷ್ಟು ಕೆಲಸ ಇಲ್ಲ ಆ ಸರ್ವೆ ಸಬ್‌ಡಿವಿಜನ್ ಅನ್ನು ಗುಲ್ಬರ್ಗಾ ಡಿವಿಜನ್‌ಗೆ ವರ್ಗಾವಣೆ ಮಾಡಿ ಎಲ್ಲಾ ಹಳಿ

ಗಳನ್ನೂ ಸರ್ವೆ ಮಾಡಿ ಎಸ್ಟಿಮೇಟ್ ಮಾಡಿದ್ದೇ ಆದರೆ ಅಲ್ಲಿಯ ಜನರಿಗೆ ಎಲೆಕ್ಟ್ರಿಕ್ ಪಂಪ್ ಸೆಟ್ ಗಳನ್ನು ಕೊಡಲಿಕ್ಕೆ ಅನುಕೂಲವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಈಗಾಗಲೇ ಮಾನ್ಯ ಸದಸ್ಯರಾದ ಎಂ. ಆರ್ ಪಾಟೀಲ್ ಅವರು ಕೆಲವೊಂದು ಸೂಚನೆಗಳನ್ನು ಮಾಡಿದ್ದಾರೆ ಅವು ಬಹಳ ಸೂಕ್ತವಾಗಿದೆ ಎಂದು ನನಗೆ ಅನಿಸುತ್ತದೆ. ಏಕೆಂದರೆ, ಈಗ ಲ್ಯಾಂಡ್ ರೆವಿನ್ಯೂ ಹಾಕಬೇಕೆಂದು ನಮ್ಮ ಈ ಮನೆಯು ಮುಂದೆ ರೆವಿನ್ಯೂ ಸೆಟ್ಲಮೆಂಟ್ ರಿಪೋರ್ಟನ್ನು ಇಟ್ಟಿದ್ದೀರಿ. ಇದರಿಂದ ಸರ್ಕಾರಕ್ಕೆ ಸುಮಾರು ಮೂರೂವರೆ ಕೋಟಿ ರೂಪಾಯಿಗಳಿಂದ 7 ಕೋಟಿ ರೂಪಾಯಿಗಳವರೆಗೂ ಬರುವ ಅಂದಾಜು ಮಾಡಲಾಗಿದೆ. ಶ್ರೀಮಾನ್ ಪಾಟೀಲ್ ಅವರು ಹೇಳಿದಂತೆ ರೈತರ ಮೇಲೆ ಆಕ್ಟ್ರಾಯ್ ಮತ್ತು ಇತರ ಟ್ಯಾಕ್ಸ್‌ಗಳು ಹೆಚ್ಚಾಗಿವೆ. ಅವನ್ನೆಲ್ಲಾ ವಜಾಮಾಡಿ ಇನ್‌ಕಂ ಟ್ಯಾಕ್ಸ್ ಕೊಡುವಂತೆ ಅವರೂ ಕೊಡಲು ಏರ್ಪಾಡು ಮಾಡಬೇಕೆಂದು ಸೂಚನೆ ಮಾಡಿದರು ಅದನ್ನು ನಾನು ಬೆಂಬಲ ಮಾಡುತ್ತೇನೆ. ಎರಡನೆಯದು ಎಂದರೆ, ನಮ್ಮ ಅಸೆಂಬ್ಲಿ ಮುಂದೆ ಅರ್ಬನ್ ಇಂಮೂವಬಲ್ ಪ್ರಾಪರ್ಟಿ ಟ್ಯಾಕ್ಸ್ ತರಬೇಕು. ಮಾನ್ಯ ಮಂತ್ರಿಗಳು ಈ ದಿಶೆಯಲ್ಲಿ ತೀವ್ರ ವಿಚಾರ ಮಾಡಿ ಅದರಿಂದ ಎಷ್ಟು ಹಣ ಬರಬೇಕೋ ಅದನ್ನು ಬರಮಾಡಿಕೊಂಡರೆ ರಿವಿಜನ್ ಸೆಟ್ಲಮೆಂಟ್ ಇಂದ ಬರಬೇಕಾದ ಹಣವನ್ನು ಕಂಪೆನ್‌ಸೇಟ್ ಮಾಡಿಕೊಳ್ಳಲಿಕ್ಕೆ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ. ಮೂರನೆಯದು ಎಂದರೆ ಮೋಟಾರು ಕಾರುಗಳ ಮೇಲೆ ಏಕೆ ಟ್ಯಾಕ್ಸ್ ಹಾಕಬಾರದು ಎಂದು ಕೇಳಿದರು, ಅದು ಸೂಕ್ತವಾದ ಸಲಹೆಯಾಗಿದೆ. ಅದನ್ನು ಆರ್ಥಿಕ ಮಂತ್ರಿಗಳು ವಿಚಾರ ಮಾಡಿ ಇಂತಹ ಕೆಲವು ಟ್ಯಾಕ್ಸ್‌ಗಳನ್ನು ತಂದರೆ ಅನೇಕರು ಒಪ್ಪುತ್ತಾರೆ ಎಂದು ನನಗೆ ಅನಿಸುತ್ತದೆ.

5-30 P.M.

ಮಾನ್ಯ ಹಣಕಾಸಿನ ಮಂತ್ರಿಗಳು ಮಿತವ್ಯಯ ಮಾಡುವ ಸಂಬಂಧದಲ್ಲಿ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಹೈದರಾಬಾದ್ ಕರ್ಣಾಟಕದ ಬಗ್ಗೆ ಹೇಳಬೇಕಾದರೆ, ಅಲ್ಲಿ 30 ಜನ ಡೆಪ್ಯುಟಿ ತಹಸೀಲ್ದಾರರುಗಳಿದ್ದಾರೆ. ಅದಕ್ಕೆ ಸಮನಾದ ಹುದ್ದೆಗಳು ಬೊಂಬಾಯಿ ಕರ್ಣಾಟಕದ ಭಾಗ ದಲ್ಲಾಗಲೀ, ಮೈಸೂರು ಭಾಗದಲ್ಲಾಗಲೀ ಇಲ್ಲ. ಅವರು ಹೈದರಾಬಾದು ಸರ್ಕಾರದಿಂದ ಬಂದವರು. ಅವರಿಗೆ ಹೆಚ್ಚು ಕೆಲಸವಿರುವುದಿಲ್ಲ. ಆದುದರಿಂದ ಈ ಹುದ್ದೆಗಳನ್ನು ರದ್ದು ಮಾಡಿದರೆ ಸರ್ಕಾರಕ್ಕೆ ಉಳಿತಾಯವಾಗುತ್ತದೆ. ಸರ್ಕಾರದವರು ಡೆಪ್ಯುಟಿ ತಹಸೀಲ್ದಾರ್ ಹುದ್ದೆಗಳನ್ನು ರದ್ದು ಮಾಡಬೇಕೆಂದು ಸೂಚನೆ ಮಾಡುತ್ತೇನೆ.

ಒಕ್ಕಲುತನದ ಬಗ್ಗೆ ಹೇಳುವುದಾದರೆ ಒಕ್ಕಲುತನದ ಇಲಾಖೆ ಹೈದರಾಬಾದು ಕರ್ಣಾಟಕದಲ್ಲಿ ತೃಪ್ತಿಕರವಾಗಿ ಕೆಲಸ ಮಾಡುತ್ತಿಡೆ ಎನ್ನುವುದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ಹೋದ ವರ್ಷ ಪ್ಯಾಕೇಜ್ ಪ್ರೋಗ್ರಾಂ ಅನ್ನು ಜವಾರಿ ಮತ್ತು ದ್ವಿದಳ ಧಾನ್ಯಗಳ ಬೆಳೆಗಳ ಅಭಿವೃದ್ಧಿಗಾಗಿ ಮಂಜೂರು ಮಾಡಿದರು. ಇದುವರೆಗೂ ಅಲ್ಲಿಗೆ ಸಿಬ್ಬಂದಿಯನ್ನು ಕೊಟ್ಟಿಲ್ಲ. ಪ್ರೋಗ್ರಾಂ ಕಾಗದದಲ್ಲಿದೆ ಎಂದ ಹೇಳಬಯಸುತ್ತೇನೆ. ಗುಲ್ಬರ್ಗ ಜಿಲ್ಲೆಯಲ್ಲಿ ಒಕ್ಕಲುತನದ ಖಾತೆಯು ಯಾವರೀತಿಯಲ್ಲಿ ಕೆಲಸ ಮಾಡುತ್ತಿದೆ ಎನ್ನುವುದಕ್ಕೆ ಇದು ಒಂದು ನಿದರ್ಶನ ಎಂದು ಹೇಳಬಯಸುತ್ತೇನೆ.

ಲೋಕೋಪಯೋಗಿ ಇಲಾಖೆಯಲ್ಲಿ ಈ ವರ್ಷದ ಬಜೆಟ್ ನೋಡಲಿಕ್ಕಾಗಿ ಹೊಸ ರಸ್ತೆಗಳನ್ನಾಗಲೀ, ಹೊಸ ಸಣ್ಣ ಸಣ್ಣ ನೀರಾವರಿ ಕಾಮಗಾರಿಗಳನ್ನಾಗಲೀ ತೆಗೆದುಕೊಂಡಿಲ್ಲ. ಹೋದ ವರ್ಷವೂ ಕೂಡ ಗುಲ್ಬರ್ಗದಲ್ಲಿ ಯಾವ ಹೊಸ ರಸ್ತೆಯನ್ನಾಗಲೀ, ಸಣ್ಣ ಸಣ್ಣ ನೀರಾವರಿ ಕೆಲಸಗಳನ್ನಾಗಲೀ ತೆಗೆದುಕೊಂಡಿರುವುದಿಲ್ಲ. ಸಪ್ಲಿಮೆಂಟರಿ ಬಜೆಟ್ಟಿನಲ್ಲಾದರೂ ಹೊಸ ರಸ್ತೆಗಳು ಮತ್ತು ಸಣ್ಣ ಸಣ್ಣ ನೀರಾವರಿ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಸೂಚನೆ ಮಾಡುತ್ತೇನೆ. ನಮ್ಮಲ್ಲಿ ಮೇಜರ್ ಅಥವಾ ಮೀಡಿಯಂ ಪ್ರಾಜೆಕ್ಟ್‌ಗಳಾವುವೂ ಇಲ್ಲ. ನಮಗೆ ಇರುವ ಒಂದೇ ಒಂದು ಪ್ರಾಜೆಕ್ಟ್ ಎಂದರೆ ಅಪ್ಪರ್ ಕೃಷ್ಣ ಪ್ರಾಜೆಕ್ಟ್. ನಮ್ಮಲ್ಲಿರುವ ರಸ್ತೆಗಳ ಪ್ರಮಾಣವನ್ನು ತೆಗೆದುಕೊಂಡರೆ ಅದು ನೂರಕ್ಕೆ ಒಂದು ಅಥವಾ ಎರಡರಷ್ಟು ಆಗುತ್ತದೆ. ಆದ್ದರಿಂದ ಹೆಚ್ಚು ರಸ್ತೆಗಳನ್ನು ಮತ್ತು ಸಣ್ಣ ನೀರಾವರಿ ಕೆಲಸಗಳನ್ನು ಸಪ್ಲಿಮೆಂಟರಿ ಬಜೆಟ್‌ನಲ್ಲಾದರೂ ಸೇರಿಸಿ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಹಣಕಾಸಿನ ಮಂತ್ರಿಗಳು ಹೊಸ ತೆರಿಗೆಗಳನ್ನು ಹಾಕದೆ ಹೆಚ್ಚು ಹಣವನ್ನು ವಿದ್ಯಾಭ್ಯಾಸಕ್ಕೆ ಇಟ್ಟಿರುವುದಕ್ಕಾಗಿ ಅವರಿಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಕೆ. ಪುಟ್ಟಯ್ಯ (ಮೈಸೂರು ನಗರ—ಉತ್ತರ).—ಮಾನ್ಯ ಅಧ್ಯಕ್ಷರೇ, 1965-66ರ ಆಯ್ಯವ್ಯಯ ಪಟ್ಟಿಯ ಮೇಲೆ ಮಾತನಾಡುತ್ತಾ ನಮ್ಮ ದೇಶದ ಹಣಕಾಸಿನ ಪರಿಸ್ಥಿತಿ ಎಷ್ಟರ

(ಶ್ರೀ ಬಿ. ಕೆ. ಪುಟ್ಟಯ್ಯ)

ಮಟ್ಟಿಗಿದೆ ಎನ್ನುವುದನ್ನು ಹೇಳುವುದಕ್ಕೆ ಬಯಸುತ್ತೇನೆ. ಕಳೆದ ವರ್ಷ ಉಳಿತಾಯದ ಬಜೆಟ್ಟನ್ನು ತೋರಿಸಿದಂಥ ಹಣಕಾಸಿನ ಸಚಿವರು ಈ ವರ್ಷ ಖೋತಾ ಬಜೆಟ್ಟನ್ನು ತೋರಿಸಿದ್ದಾರೆ. ಮಾನ್ಯ ಸಚಿವರು ಬಹಳ ಜಾಣತನದ ಬಜೆಟ್ಟನ್ನು ಮಂಡಿಸಿದ್ದಾರೆ. ನಾನು ಅದಕ್ಕೆ ಒಪ್ಪುತ್ತೇನೆ. ಎಲ್ಲಿ ಬಯ್ಗುಳ ಬೀಳುತ್ತದೆಯೋ ಅಂಥ ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗಿಲ್ಲ. ಅದೂ ಒಂದು ಜಾಣತನ. ಹಣಕಾಸಿನ ಮಂತ್ರಿಗಳು ಅವರ ಭಾಷಣದಲ್ಲಿ ಆಹಾರ, ಕೈಗಾರಿಕೆ ಹಾಗೂ ವಿದ್ಯಾಭ್ಯಾಸ ವಿಷಯಗಳನ್ನು ಮಾತ್ರ ಪ್ರಸ್ತಾಪ ಮಾಡಿದ್ದಾರೆ. ಕೆಲವೊಂದನ್ನು ಪೂರ್ತಿಯಾಗಿ ಬಿಟ್ಟಿದ್ದಾರೆ. ಇವುಗಳಿಗೆ ಸಂಬಂಧಪಟ್ಟ ಅಂಕಿ ಅಂಶಗಳನ್ನು ವಿವರವಾಗಿ ಕೊಟ್ಟು ತಪ್ಪುಗಳನ್ನು ನೀವೇ ಊಹೆ ಮಾಡಿಕೊಳ್ಳಿ ಎನ್ನುವಂತೆ ಆಸ್ಪದ ಮಾಡಿಕೊಟ್ಟಿದ್ದಾರೆ. ಅದಕ್ಕೇ ಜಾಣತನದ ಬಜೆಟ್ ಎಂದು ನಾನು ಹೇಳಿದ್ದು. ಜೊತೆಗೆ ಈ ವರ್ಷದ ಖೋತಾ ಬಜೆಟ್ಟಿನ ಬಗ್ಗೆ ಹೇಳಬೇಕಾದರೆ ಕಳೆದ ಸಾರಿ 310 ಲಕ್ಷ ರೂಪಾಯಿ ಖೋತಾ ಆಗಿದ್ದು ಈ ವರ್ಷದ ಖೋತಾ 391 ಲಕ್ಷ ರೂಪಾಯಿ, ಎರಡೂ ಸೇರಿ 731 ಲಕ್ಷ ರೂಪಾಯಿಗಳ ಖೋತಾ ಇದೆ ಎಂದು ಹೇಳಿದ್ದಾರೆ? ಈ ಅಂಕಿ ಅಂಶಗಳ ಪ್ರಕಾರ ನೋಡುವುದಾದರೆ ಅವರು ಹೊಸ ತೆರಿಗೆಗಳನ್ನು ಹಾಕುವುದಕ್ಕೆ ಹಿಂದೆ ಹೋದರೋ ಅಥವಾ ಆ ಪಕ್ಷದ ಸದಸ್ಯರು ಮತ್ತು ಈ ಕಡೆಯ ಸದಸ್ಯರು ಹಾಕಿದ ಒತ್ತಡದಿಂದ ಸ್ವಲ್ಪ ಜಗ್ಗಿದರೋ ಎಂದು ಆಲೋಚನೆ ಮಾಡುವ ಕಾಲ ಬಂದಿದೆ. ಇದೂ ಅಲ್ಲದೆ ಸರ್ಕಾರಕ್ಕೆ ಇರುವ ಸಾಲವನ್ನು ಬಹಳ ವಿವರವಾಗಿ ಹೇಳಿದ್ದಾರೆ. ಸುಮಾರು 1964ರ ಕೊನೆಯವರೆಗೆ 227 ಕೋಟಿ ರೂಪಾಯಿಗಳ ಸಾಲವನ್ನು ಕೊಡಬೇಕಾಗಿತ್ತು ಎಂದು ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಜೊತೆಗೆ 1964-65ನೆ ಇಸವಿಯಲ್ಲೂ ಕೂಡ ಸುಮಾರು 60-70 ಕೋಟಿ ಆದರೆ 300 ಕೋಟಿ ರೂಪಾಯಿಗಳನ್ನು ನಾವು ತಲೆಯ ಮೇಲೆ ಹೊತ್ತುಕೊಂಡಿದ್ದೇವೆ ಎಂದು ವಿವರವಾದ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಕಾಂಗ್ರೆಸ್ ಸರ್ಕಾರ ಆಡಳಿತಕ್ಕೆ ಬಂದಲಾಗಾಯ್ತು 37 ಕೋಟಿ ರೂಪಾಯಿಗಳ ನಿಧಿ ಇದ್ದುದನ್ನು ಖರ್ಚು ಮಾಡಿ ಜೊತೆಗೆ 300 ಕೋಟಿ ರೂಪಾಯಿಗಳ ಸಾಲವನ್ನು ನಮ್ಮ ತಲೆಯ ಮೇಲೆ ಹೇರಿ ಇಷ್ಟು ವರ್ಷಗಳಲ್ಲಿ ಬಂದಿರುವ ಹಣವನ್ನೆಲ್ಲ ಖರ್ಚು ಮಾಡಿದರೂ ಕೂಡ ಎಷ್ಟರಮಟ್ಟಿಗೆ ಪ್ರೋಗ್ರೆಸ್ ನಡೆದಿದೆ ಎಂದರೆ ಅದಕ್ಕೂ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಒಂದಕ್ಕೊಂದನ್ನು ಹೋಲಿಸಿದರೆ ಏನೂ ಒಳ್ಳೆಯದು ನಡೆದಿಲ್ಲ ಎಂದು ಅವರೇ ವ್ಯಕ್ತಪಡಿಸಿದ್ದಾರೆ.

ಸ್ವಾಮಿ, ಈ ಸರ್ಕಾರ ಬಂದಂಥ ಕಾಲದಲ್ಲಿ ರಾಮರಾಜ್ಯ, ಸುಖೀ ರಾಜ್ಯವನ್ನು ನಿರ್ಮಾಣ ಮಾಡುತ್ತೇವೆಂದು ಕೂಗಿದರು. ಆಗ ನಾವೂ ನಿಮ್ಮ ಜೊತೆಗೆ ಸೇರಿ ಕೂಗು ಹಾಕಿದೆವು. ಆದರೆ ಇವತ್ತು ನಾವು ನೋಡುವುದು ಎಲ್ಲರ ತಲೆಯ ಮೇಲೆಯೂ ಕೂಡ ಸಾಲದ ಹೊರೆಯನ್ನು ಹಾಕಿದ್ದಾರೆ? ಕಳೆದ ಸಾರಿ ಆಹಾರದ ವಿಷಯದಲ್ಲಿ ಸರ್ಕಾರ ಎದುರಿಸಿರತಕ್ಕ ಸಮಸ್ಯೆಗಳನ್ನು ಕೊಂಚ ಮಟ್ಟಿಗೆ ಉಲ್ಲೇಖಿಸಿದ್ದಾರೆ. ನಾನು ಒಂದು ಮಾತನ್ನು ಹೇಳುವುದಾದರೆ ಈ ಮಂತ್ರಿ ಮಂಡಲದಲ್ಲಿ ಒಬ್ಬರಿಗೊಬ್ಬರಿಗೆ ಸಹಕಾರವಿಲ್ಲ, ಒಬ್ಬರ ಸಹಾಯ ಇನ್ನೊಬ್ಬರಿಗೆ ಇಲ್ಲ ಎನ್ನುವುದು ಚೆನ್ನಾಗಿ ಅರ್ಥವಾಗುತ್ತದೆ. ಒಬ್ಬರು ಒಂದು ರೀತಿ ಮಾಡಿದರೆ ಇನ್ನೊಬ್ಬರು ಇನ್ನೊಂದು ರೀತಿ ಮಾಡುತ್ತಾರೆ. ಇದರಿಂದ ಜನಗಳಿಗೆ ಏನು ತೊಂದರೆಯಾಯಿತು ಎನ್ನುವ ಕಹಿ ವಾತಾವರಣವನ್ನು ಕೂಡ ನೋಡಿದ್ದೇವೆ. ಇಂಥ ಸರ್ಕಾರ ಸುಖೀ ರಾಜ್ಯವನ್ನಾಗಲೀ, ಅಥವಾ ರಾಮರಾಜ್ಯವನ್ನಾಗಲೀ ಕಟ್ಟುತ್ತದೆ ಎನ್ನುವುದಾದರೆ ಅದು ಬರೀ ಕನಸಾದೀತು. ಕಳೆದ ವರ್ಷದ ಆಹಾರ ಪರಿಸ್ಥಿತಿಯಲ್ಲಿನ ಅನುಭವಗಳ ಕಹಿ ವಾತಾವರಣವನ್ನು ಉಲ್ಲೇಖಿಸಿ ಒಂದು ಮಾತನ್ನು ಹೇಳಿದ್ದಾರೆ. ಕಳೆದ ವರ್ಷ ಏನೇನು ಜನತೆ ತೊಂದರೆಗಳನ್ನು ಅನುಭವಿಸಿದ್ದಾರೋ ಅವನ್ನು ಈ ವರ್ಷ ಅನುಭವಿಸತಕ್ಕ ಆವಶ್ಯಕತೆ ಬರಲಾರದು ಎಂದು ಹೇಳಿದ್ದಾರೆ. ಅದಕ್ಕಾಗಿಯೇ ಐದು ಕೋಟಿ ರೂಪಾಯಿಗಳನ್ನು ಸೊಸೈಟಿಗಳಿಗೂ ಇನ್ನು ಒಂದು ಕೋಟಿ ರೂಪಾಯಿಗಳನ್ನು ಡೈರೆಕ್ಟರ್ ಸಾಹೇಬರಿಗೆ ಕೊಟ್ಟಿರುತ್ತಾರೆ.

ಶ್ರೀ ರಾಮಕೃಷ್ಣ ಹೆಗ್ಗಡೆ.—ಅವರು ಸರಿಯಾಗಿ ಹೇಳಿಲ್ಲ. ಒಂದು ಕೋಟಿ ರೂಪಾಯಿಗಳನ್ನು ಕೋ-ಆಪರೇಟಿವ್ ಸೊಸೈಟಿಗಾಗಿ ಕೊಡುತ್ತಾರೆ. ಆದರೆ ಷೇರು ಬಂಡವಾಳ ಬೆಳೆಸಲಿಕ್ಕೆ ಸುಮಾರು ಐದು ಕೋಟಿ ರೂಪಾಯಿಗಳನ್ನಾದರೂ ತೆಗೆದುಕೊಳ್ಳಬಹುದು.

ಶ್ರೀ ಬಿ. ಕೆ. ಪುಟ್ಟಯ್ಯ.—ಇನ್ನೂ 20 ಕೋಟಿ ರೂಪಾಯಿಗಳನ್ನು ಕೊಡುವುದಕ್ಕೆ ತಯಾರಿದ್ದೇವೆಂದು ಒಪ್ಪಿಕೊಂಡಿದ್ದಾರೆ, ನಿಜ. ಸರ್ಕಾರ ಯಾವುದಕ್ಕೆ ಕೈಹಾಕುತ್ತಾರೋ ಅಲ್ಲಿ ಇಲ್ಲದಿದ್ದ ಕಿತಾಪತಿ ಬರುತ್ತದೆಂಬುದನ್ನು ಮನಗಾಣಬೇಕು ಏಕೆಂದರೆ ಇವರು ಬಹಳ ಸಾವಧಾನವಾಗಿ ಕೇಳುತ್ತಾರೆ. ಕೇಳುವ ಸಹನೆ ಇವರಿಗಿದೆ, ಆದರೆ ಅನುಭವಿಸುವಾಗ ಇವರ ಕೈ ನಡೆಸುತ್ತಾರೆ,

ಅದಕ್ಕಾಗಿಯೇ ಬಹುಶಃ ತೆರಿಗೆಗಳನ್ನು ಈ ವರ್ಷ ಹಾಕದೆ ಇರುವುದೆಂದು ಕಾಣುತ್ತದೆ. ಅದೇ ಕಾರಣದಿಂದ ಎಷ್ಟು ಕೊಟ್ಟರೂ ಸಹಕಾರ ಸಂಘಗಳವರು ಖರ್ಚು ಮಾಡುತ್ತಾರೆ. ತೆರಿಗೆಗಳನ್ನು ಹಾಕದೇ ಇರುವುದರಿಂದ ಅವನ್ನು ಹೇಗೋ ಮೇಂಟೇನ್ ಮಾಡುತ್ತೇವೆಂದು ಹೇಳಿದರೂ ಬಹುಶಃ ಇವರ ಸಹಪಾಟಿಗಳೇ ಅದಕ್ಕೆ ಒಪ್ಪಲಿಲ್ಲವೆಂದು ನಾನು ಭಾವಿಸುತ್ತೇನೆ.

ಇನ್ನು ವ್ಯವಸಾಯದ ಬಗ್ಗೆ ಕೆಲವು ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಕಳೆದ ವರ್ಷಗಳಲ್ಲಿ ಅಂದರೆ 1963-64 1964-65ರಲ್ಲಿ ಎಷ್ಟು ಸಾಗುವಳಿಯಾಯಿತು ಎಂಬುದನ್ನು ಕೊಟ್ಟಿದ್ದಾರೆ. ಒಂದು ಕಡೆ ಹೆಚ್ಚಾಗಿಯಾಗಿದೆ ಎಂದು ಅಂಕಿ ಅಂಶಗಳನ್ನು ಕೊಡುತ್ತಾ ಆಹಾರೋತ್ಪನ್ನದಲ್ಲಿ ಏತಕ್ಕೆ ಕಮ್ಮಿಯಾಯಿತು ಎಂಬುದನ್ನೂ ಸಹ ಕೊಟ್ಟಿದ್ದಾರೆ. ಶೇಕಡ 2ರಷ್ಟು ಕಡಮೆ ಎಂದು ಕೊಟ್ಟಿದ್ದಾರೆ. ಇದಕ್ಕೆ ಕಾರಣವೇನೆಂಬುದನ್ನು ಸಂಬಂಧಪಟ್ಟ ಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳಬೇಕು ಎಂಬುದಾಗಿ ನಾನು ಹೇಳುತ್ತೇನೆ. ಆಹಾರದ ಬಗ್ಗೆ ಇವರು ಬಂದರಲಾಗಾಯಿತು ಮನಸ್ಸಿಗೆ ಅಂಟಿಸಿಕೊಂಡಿಲ್ಲ. ಈ ವಿಚಾರದಲ್ಲಿ ನನ್ನ ಮಾನ್ಯ ಸ್ನೇಹಿತರಾದ ಶ್ರೀಮಾನ್ ಎಂ. ಆರ್. ಪಾಟೀಲ್ ಅವರು ಬಹಳ ಚೆನ್ನಾಗಿ ಹೇಳಿದರು. ವ್ಯವಸಾಯ ಉತ್ಪನ್ನಗಾರರು ಶೇ 70 ರಷ್ಟಿರುವ ಕಡೆ ಈ ವರ್ಷ ಶೇ 2 ರಷ್ಟು ಕಡಮೆ ಆಗಿದೆ. ಕೈಗಾರಿಕೆ ಕ್ಷೇತ್ರದಲ್ಲಿ ಶೇ 60 ರಷ್ಟು ವರಮಾನವಿರುವ ಕಡೆಗಳಲ್ಲಿ ಕೇವಲ ಶೇ 30ರಷ್ಟು ಮಾತ್ರ ಈಗ ಆಗಿದೆ. ಈಗ ಒಂದನ್ನೊಂದು ಹೋಲಿಸಿ ನೋಡಿದರೆ ವ್ಯವಸಾಯದ ಬಗ್ಗೆ ಇವರು ಏನು ಕರ್ತವ್ಯವನ್ನು ಮಾಡಬೇಕಾಗಿತ್ತೊ, ಅದನ್ನು ಅಲ್ಲಿ ಲೋಪ ಮಾಡಿದ್ದಾರೆಂಬುದು ಇಲ್ಲಿ ಎದ್ದು ಕಾಣುತ್ತವೆ. ಇವರು ಇದಕ್ಕಾಗಿ ದುಡಿಯಲಿಲ್ಲವೆಂಬುದಾಗಿ ನಾವು ಇವರನ್ನು ಎಚ್ಚರಿಸಬೇಕಾಗುತ್ತದೆ. ದುಡಿಮೆ ಅಗತ್ಯ. ಏಕೆಂದರೆ ಎಲ್ಲಾ ಪೋರ್ಟ್‌ಫೋಲಿಯೋಗಳಲ್ಲಿ ಮಂತ್ರಿಗಳು ಮತ್ತು ಉಪಮಂತ್ರಿಗಳು ಇದ್ದಾರೆ. ಯಾವುದಕ್ಕೆ ಬೇಕೋ ಅದರಲ್ಲಿ ಯಾರೂ ಇಲ್ಲ. ಇದರಿಂದಲೇ ಇವರಲ್ಲಿ ಎಷ್ಟರಮಟ್ಟಿಗೆ ರೈತರಮೇಲೆ ಸಹಾನುಭೂತಿ ಇದೆಯೆಂಬುದು ಅರ್ಥವಾಗುತ್ತದೆ. ನಮ್ಮ ಬಾಳ್ವೆ ಚೆನ್ನಾಗಿ ಇರಬೇಕಾದರೆ ಆಹಾರೋತ್ಪನ್ನ ಚೆನ್ನಾಗಿ ಆಗಬೇಕು, ಇಲ್ಲದಿದ್ದರೆ ದೇಶಕ್ಕೆ ಸುಭಿಕ್ಷವಿಲ್ಲವೆಂದು ಹೇಳುತ್ತಿರುವ ಜನರೇ ಏಕೆ ಈ ರೀತಿ ಈ ಬಗ್ಗೆ ಇಷ್ಟು ನಿಧಾನಮಾಡುತ್ತಿದ್ದಾರೋ ನನಗಂತೂ ಅರ್ಥವಾಗುತ್ತಿಲ್ಲ. ಜೊತೆಗೆ ನಿನ್ನೆ ಒಂದು ರಿವಿಷನ್ ಅಫ್ ಸೆಟಲ್‌ಮೆಂಟ್ ಎಂಬುದಾಗಿ ಬೇರೆ ತಂದಿದ್ದಾರೆ. ಒಳ್ಳೆಯದನ್ನು ಮಾಡುವುದಕ್ಕೆ ಹೋಗಿ ಜೊತೆಗೆ ಕೆಟ್ಟದ್ದು ಮಾಡುವುದಕ್ಕೆ ಹೋಗಿದ್ದಾರೆ. ಈ ವಿಷಯದಲ್ಲಿ ಸರ್ಕಾರ ಬಹಳ ಹಿಂದಿದೆ. ನಾವು ಏನು ಹೇಳಿದ್ದೇವೋ ಅದಕ್ಕಿಂತಲೂ ಹೆಚ್ಚಿಗೆ ಆವರ ಪಕ್ಷದವರ ಕಡೆ ಹೇಳುತ್ತಿದ್ದಾರೆ. ಇವರು ಏನು ಮಾಡಿದರೂ ಅವರು ಸ್ವಾಗತಿಸುತ್ತಾರೆ. ಇವರನ್ನು ಮುಂದೆಯೂ ಉಳಿಸಲಿಕ್ಕಾದರೂ ಎಲ್ಲಕ್ಕೂ ಸ್ವಾಗತ ಮಾಡುತ್ತಾರೆ. ಇಲ್ಲದಿದ್ದರೆ ಅವರಿಗೆ ಕಾಂಗ್ರೆಸ್ ಟಿಕೆಟ್ ಇಲ್ಲ. ಇವರ 17 ವರ್ಷಗಳ ಅಧಿಕಾರದಲ್ಲಿ ದೇಶಕ್ಕೆ ಹಾಗೂ ಜನತೆಗೆ ಯಾವ ತರಹ ಸುಖವಿಲ್ಲ ಅಥವಾ ಅನುಕೂಲಗಳಿಲ್ಲ. ಬಡವನಿಗೇ ಆಗಲೀ, ಮಧ್ಯಮವರ್ಗದವನಿಗಾಗಲೀ ಅಥವಾ ಹಣವಂತನಿಗೇ ಆಗಲಿ ಯಾರಿಗೂ ಕೂಡ ಜೀವನದಲ್ಲಿ ಹಿತವಿಲ್ಲ, ಸುಖವಿಲ್ಲ ಮತ್ತು ಸೌಖ್ಯವಿಲ್ಲ. ಇಂಥಾ ಒಂದು ಆಡಳಿತಕ್ಕೆ ಇವರು ಇಳಿಯಬೇಕಾದರೆ ಇವರಲ್ಲಿ ಏನೋ ದೋಷಗಳಿವೆ ಎಂಬುದನ್ನು ಇವರೇ ಚೆನ್ನಾಗಿ ಅರಿವು ಮಾಡಿಕೊಳ್ಳಬೇಕಾಗಿದೆ. ಈ ಸಭೆಯ ಸದಸ್ಯರಾಗಿರುವವರು ಮೇಲಿಂದ ಮೇಲೆ ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡುತ್ತಲೇ ಇದ್ದಾರೆ. ಇವರು ಎಲ್ಲಿ ತಪ್ಪು ಮಾಡುತ್ತಿದ್ದಾರೆ ಎನ್ನುವ ಬಗ್ಗೆ ಆಗಾಗ್ಗೆ ಈ ಸಭೆಯ ಎಲ್ಲ ಸದಸ್ಯರೂ ಸರ್ಕಾರಕ್ಕೆ ಮಾಹಿತಿ ಕೊಡುತ್ತಿದ್ದಾರೆ. ಆದರೆ ಅವರ ಪಕ್ಷದ ಸದಸ್ಯರ ಒಂದು ಮೆಜಾರಿಟಿಯಿಂದ ಬಹುಶಃ ಇವರು ಈ ಸ್ಥಿತಿಗೆ ಇಳಿದಿದ್ದಾರೆ. ನಮ್ಮ ಮಾತು ಅವರ ಇಷ್ಟವೇನೆಂದರೆ, ದೇಶದಲ್ಲಿರತಕ್ಕ ಬಡತನವನ್ನು ಹೋಗಲಾಡಿಸಬೇಕೆಂಬುದು ಆಗಿದೆ. ಆ ಒಂದು ಜವಾಬ್ದಾರಿಯನ್ನು ನಾವು ಮತ್ತು ಇವರು ಹೊಂದಿದ್ದೇವೆ. ಆದರೆ ಆ ಬಗ್ಗೆ ಹೋಗುತ್ತಿರುವ ಮಾರ್ಗ ಇವರದು ಬಹಳ ತಪ್ಪಾಗಿದೆ. ಇವರು ಸಾಲ ಮಾಡಿದಂತಹ ಕಾಲದಲ್ಲಿ ಸುಮಾರು 237 ಕೋಟಿ ರೂಪಾಯ ಗಳ ಪೈಕಿ ನ್ಯಾಯವಾಗಿ ಎಷ್ಟು ಖರ್ಚು ಮಾಡಿದ್ದಾರೆ, ವ್ಯವಸಾಯ ಬಾಬಗೇ ಎಷ್ಟು ಖರ್ಚು ಮಾಡಿದ್ದಾರೆಂಬುದು ಬಹು ಮುಖ್ಯವಾದ ವಿಷಯ. ಏಕೆಂದರೆ, ಇವರು ಮೊದಲನೆಯ, ಎರಡನೆಯ ಮತ್ತು ಮೂರನೆಯ ಪಂಚವಾರ್ಷಿಕ ಯೋಜನೆಗಳಲ್ಲಿ ಸುಮಾರು 400 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚಿಗೆ ಖರ್ಚು ಮಾಡಿದ್ದಾರೆ. ಹೀಗೆ ಅವರು ಏನು ಖರ್ಚು ಮಾಡಿದ್ದಾರೋ ಅದರ ಪ್ರತಿಫಲ ನಮಗೆ ಬಂದಿಲ್ಲ. ಅದನ್ನು ಅವರೂ ಒಪ್ಪಿಕೊಳ್ಳುತ್ತಾರೆ, ನಾವೂ ಒಪ್ಪಿಕೊಳ್ಳುತ್ತೇವೆ. ಈ ವಿಚಾರದಲ್ಲಿ ನಾವು ಎಷ್ಟೋ ಸಾರಿ ಸರ್ಕಾರದವರನ್ನು ಒತ್ತಾಯ ಮಾಡುತ್ತಿದ್ದರೂ ಅದನ್ನು ಬದಿಗೊತ್ತಿ ಅವರ ಮನಸ್ಸಿಗೇ ಅಂಟಿಸಿಕೊಂಡಿಲ್ಲ. ಆ ರೀತಿ ಮನಸ್ಸಿಗಾದರೂ ಅಂಟಿಸಿಕೊಂಡು ಕೆಲಸ ಕಾರ್ಯಗಳನ್ನು ಮಾಡುತ್ತಾ ಇಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅದು ಅಂಟಿಕೊಂಡಿಲ್ಲ, ಅವರು ಎಣ್ಣೆ ಹಚ್ಚಿಕೊಂಡಿದ್ದಾರೆ.

ಶ್ರೀ ಬಿ. ಕೆ. ಪುಟ್ಟಯ್ಯ.—ನಾವೂ ಹಾಗೆಯೇ ತಿಕ್ಕಿಕೊಂಡು ಬಂದಿದ್ದೇವೆ.

ಇನ್ನು ವ್ಯವಸಾಯದ ಬಗ್ಗೆ ಬಹಳವಾಗಿ ಹೇಳುವುದಾದರೆ, ಈ ಇಲಾಖೆಯಲ್ಲಿ ಪರಿಪೂರ್ಣವಾದ ಪರಿಶೋಧನೆ ಬಹಳ ಅಗತ್ಯವೆಂದು ನಾನಾದರೂ ಭಾವಿಸುತ್ತೇನೆ. ಈಗ ಇದನ್ನು ನಾಲ್ಕೈದು ಭಾಗಗಳಾಗಿ ಮಾಡಿದರೆ ಒಳ್ಳೆಯದು. ಸುಮಾರು 100 ಎಕರೆ ಮೇಲಿನ ಜಮೀನ್‌ದಾರರು ಎಷ್ಟು ಜನರಿದ್ದಾರೆ, 50 ಎಕರೆ, 10 ಎಕರೆ ಹಾಗೂ 5 ಎಕರೆ ಜಮೀನ್‌ದಾರರು ಎಷ್ಟು ಜನರಿದ್ದಾರೆ, ಅಲ್ಲದೆ ಐದು ಎಕರೆಗಳಿಗೆ ಕೆಳಪಟ್ಟು ಎಷ್ಟು ಜನರಿದ್ದಾರೆಂಬ ಬಗ್ಗೆ ಅಂಕಿ ಅಂಶಗಳನ್ನು ಈಗ ತಿಳಿದುಕೊಳ್ಳಬೇಕಾಗಿದೆ. ಆ ಅಂಕಿ ಅಂಶಗಳು ಸರ್ಕಾರದಲ್ಲಿವೆ. ಅದು ರಿವಿಜನ್ ಆಫ್ ಅಸೆಸ್‌ಮೆಂಟ್‌ನಲ್ಲಿಯೂ ಬಂದಿದೆ. ಬಹುಶಃ ತೆರಿಗೆ ಹಾಕುವುದಕ್ಕಾಗಿ ಬಂದಿಲ್ಲ. ಆದ್ದರಿಂದ ಈಗ ಈ ಕೆಲಸಕ್ಕಾದರೂ ಅನುಕೂಲವಾಗುತ್ತದೆಂದು ನಾನಾದರೂ ಭಾವಿಸುತ್ತೇನೆ. ಇದರಿಂದಾದರೂ ಸರಿಯಾದ ಅಂಕಿ ಅಂಶಗಳು ಸಿಗಲಿ ಎಂಬುದಾಗಿ ನಾನು ಹೇಳುತ್ತೇನೆ. ಈಗ ರೈತನಾದವನಿಗೆ ಒಂದು ಎಕರೆಯಿಂದ ಐದು ಎಕರೆಯೊಳಗೆ ಜಮೀನು ಇದ್ದರೆ ಆತ ಸುಲಭವಾಗಿ ತನ್ನ ಜೀವನವನ್ನು ಬಗೆಹರಿಸುವುದಕ್ಕೆ ಸಾಧ್ಯವೇ ಎಂಬುದು ಪ್ರಾಮುಖ್ಯವಾದ ವಿಷಯ, ಶೇಕಡ 70ರಷ್ಟು ರೈತರು ಇರುವ ದೇಶದಲ್ಲಿ 5 ಎಕರೆಗಳಿಗೊಳಪಟ್ಟಂಥ ಜಮೀನ್ದಾರರು ಇದ್ದರೆ ಅವರ ಸ್ಥಿತಿಗತಿ ಏನಾಗಿರುತ್ತದೆಂಬುದನ್ನು ಬಹು ಮುಖ್ಯವಾಗಿ ತೆಗೆದುಕೊಂಡು ಶ್ರೀಮಾನ್ ಎಂ. ಆರ್. ಪಾಟೀಲ್ ಅವರು ಎಲ್ಲಾ ವಿಶದವಾಗಿ ಇಲ್ಲಿ ಹೇಳಿದ್ದಾರೆ. ಅಂತಹವರಿಗೆ ಯಾವ ರೀತಿಯಲ್ಲೂ ತೆರಿಗೆ ಬೀಳಬಾರದೆಂಬುದಾಗಿ ಹೇಳುವವರಲ್ಲಿ ನಾನೂ ಒಬ್ಬ. ಐದು ಎಕರೆ ಜಮೀನಿನೊಳಗೊಳಪಟ್ಟಿರುವವರಿಗೆ ಜಮೀನು ಕಂದಾಯವಾಗಲೀ ಹಾಕಬಾರದು. ಅದು ಅವನ ಜೀವನಕ್ಕೆ ಸಾಕಾಗುವುದಿಲ್ಲ. ಆ ಒಂದು ದಾರಿಯಲ್ಲಿ ಸಾಗಿದರೆ ಬಹುಶಃ ರೈತರು ಮುಂದೆ ಬಂದು ವ್ಯವಸಾಯ ಮಾಡುವುದಕ್ಕೆ ಪ್ರಯತ್ನಪಡುತ್ತಾರೆಂದು ನಾನಾದರೂ ಭಾವಿಸುತ್ತೇನೆ. ಇನ್ನು ವ್ಯವಸಾಯ ಇಲಾಖೆಯನ್ನು ಪರಿಶೋಧನೆ ಮಾಡುವಕಾಲದಲ್ಲಿ ಕೆಲವು ಕಡೆಗಳಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ತುಂಗಭದ್ರಾ ಹಾಗೂ ಶರಾವತಿ ಪ್ರಾಜೆಕ್ಟುಗಳ ಬಗ್ಗೆ ಬೇಕಾದಷ್ಟು ಹಣವನ್ನು ಖರ್ಚುಮಾಡಿದ್ದಾರೆ. ಅದನ್ನು ಖರ್ಚುಮಾಡುವುದು ದೊಡ್ಡದಲ್ಲ. ಅದನ್ನು ಕಾರ್ಯಗತ ಮಾಡತಕ್ಕದ್ದು ಬಹು ಪ್ರಾಮುಖ್ಯವಾದ ವಿಷಯ. ಆರೀತಿ ಖರ್ಚುಮಾಡುವಬಗ್ಗೆ ಎಷ್ಟು ಜಮೀನುಗಳು ನಮಗೆ ಬರುತ್ತವೆ ಎನ್ನುವ ವಿಚಾರದಲ್ಲಿ ನಮ್ಮಲ್ಲಿ ಲೆಖ್ಖಗಳಿವೆ. ಆದರೆ ರೈತನಿಗೆ ಕೊಡತಕ್ಕ ಅನುಕೂಲಗಳನ್ನು ಕಲ್ಪಿಸದ ಹೊರ್ತು ಅವನ ಉಳುಮೆ ಕೆಲಸ ಸರಿಹೊಂದಿಸಿಕೊಂಡು ವ್ಯವಸಾಯ ಮಾಡಲು ಬರುವುದಿಲ್ಲ. ಈ ವಿಷಯವನ್ನು ವಿವರವಾಗಿ ಹೇಳಿದ್ದಾರೆ. ಬೇರೆ ಕ್ಷೇತ್ರದಿಂದ ಬರತಕ್ಕ ಉತ್ಪತ್ತಿಯ ವಿವರಣೆಯನ್ನು ಕೊಟ್ಟು ಹೇಳಿದ್ದಾರೆ. ಒಟ್ಟಿನಲ್ಲಿ ವ್ಯವಸಾಯ ಕೆಲಸದ ಮೇಲಿರತಕ್ಕ ವ್ಯಾಮೋಹ ನಮ್ಮ ರೈತರಿಗೆ ಇತ್ತೀಚೆಗೆ ಬಹಳ ಕಡಿಮೆಯಾಗಿದೆ. ವ್ಯವಸಾಯ ಕಸುಬಿನಲ್ಲಿ ಉತ್ಪನ್ನ ಬಹಳ ಕಡಿಮೆಯಾಗಿರುವ ದೃಷ್ಟಿಯಿಂದ ಮತ್ತ ಶರಾವತಿ ಹಾಗೂ ತುಂಗಭದ್ರಾ ಪ್ರಾಜೆಕ್ಟುಗಳಿಗೆ ಬೇಕಾದಷ್ಟು ಕೋಟ್ಯಾಂತರ ರೂಪಾಯಿಗಳನ್ನು ಹಾಕಿರುವುದರಿಂದ ಜಮೀನು ಹಂಚಿಕೆಯ ಕಾರ್ಯ ನ್ಯಾಯವಾಗಿ ಆಗಬೇಕೆಂದು ನಾನು ಪ್ರಾರ್ಥನೆಮಾಡುತ್ತೇನೆ. ಸರ್ಕಾರಿ ಜಮೀನುಗಳು ಬೇಕೆಂಬುದಾಗಿ ಅನೇಕರು ಮಂತ್ರಿಗಳಲ್ಲಿ ಹೋಗಿ ಒತ್ತಾಯಮಾಡುತ್ತಿದ್ದಾರೆ, ಹಾಗೂ ಡೆಪ್ಯುಟಿ ಕಮಿಷನರುಗಳಲ್ಲಿಯೂ ಒತ್ತಾಯಮಾಡುತ್ತಿದ್ದಾರೆ. ಅಂತಹವರು ಸಿಟಿಯಲ್ಲಿ ವಾಸಮಾಡುತ್ತಿದ್ದರೂ ಅವರಿಗೆ ಹಳ್ಳಿಗಳಲ್ಲಿ ಆ ಜಮೀನುಗಳನ್ನು ಕೊಡುತ್ತಿದ್ದಾರೆ. ಆ ಪದ್ಧತಿ ಕೂಡಲೇ ಹೋಗಬೇಕು. ಯಾರು ಗ್ರಾಮಗಳಲ್ಲಿ ವಾಸಮಾಡುತ್ತಾರೆ ಅಂತಹವರಿಗೆ ಅಲ್ಲಿ ಜಮೀನುಗಳನ್ನು ಕೊಡಬೇಕು. ಉದಾಹರಣೆಗೆ ಹೇಳುವುದಾದರೆ, ಮೈಸೂರಿನಲ್ಲಿ ವಾಸಮಾಡತಕ್ಕ ಒಬ್ಬವ್ಯಕ್ತಿಗೆ ಉಳ್ಳಲ್ಲಿ ಗ್ರಾಮದಲ್ಲಿ ಜಮೀನು ಕೊಟ್ಟಿದ್ದಾರೆ. ಅದೇನು ಅದನ್ನು ದಾಕ್ಷಿಣ್ಯಕ್ಕೇ ಕೊಟ್ಟಿದ್ದಾರೋ ಏನೋಗೊತ್ತಿಲ್ಲ. ಇಂತಹಪದ್ಧತಿ ಕೂಡಲೇ ಹೋಗಬೇಕು.

ಹಳ್ಳಿಯಲ್ಲಿರತಕ್ಕ ಒಬ್ಬ ಸಣ್ಣ ರೈತನಿಗೆ ಅನುಕೂಲವಾಗಬೇಕು ಎನ್ನುವ ದೃಷ್ಟಿಯಿಂದ ಕೆಲಸ ಮಾಡಬೇಕು. 5 ಎಕರೆಯ ಕೆಳಗಡೆ ಜಮೀನು ಇಟ್ಟುಕೊಂಡಿರತಕ್ಕ ರೈತನಿಗೆ ಮತ್ತೆ 5-6 ಎಕರೆ ಜಮೀನು ಸಿಕ್ಕುವುದಾದರೆ ಅವನು ಆ ಜಮೀನನ್ನು ಮಾಡಬಲ್ಲ. ಮೈಸೂರು ಸಿಟಿಯಲ್ಲಿರತಕ್ಕ ಒಬ್ಬರಿಗೆ ಉಳ್ಳಹಳ್ಳಿ ಎಂಬ ಊರಿನಲ್ಲಿ ಜಮೀನು ಸಿಕ್ಕಿದೆ. ಈಗ ಅವರು ಏನುಮಾಡುತ್ತಿದ್ದಾರೆಂದರೆ, ಅವರು ಆ ಜಮೀನನ್ನು ಮಾರಾಟಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಹಿಂದೆ ಯಾರೋ ಒಬ್ಬರು ರಾಜಕೀಯ ಸಂತ್ರಸ್ತರು ಎಂದು ಅವರಿಗೆ ಸರ್ಕಾರದವರು 5 ಎಕರೆ ಜಮೀನನ್ನ ಕೊಟ್ಟರು. ಕಳೆದ ವರ್ಷ ಅವರು ಆ ಜಮೀನನ್ನು 12 ಸಾವಿರ ರೂಪಾಯಿಗಳಿಗೆ ಮಾರಾಟಮಾಡಿದ್ದಾರೆ. ಉಳುವವನಿಗೆ ಭೂಮಿ ಇಲ್ಲ. ಮೈಸೂರು ಸಿಟಿಯಲ್ಲಿ ರೈಲ್ವೆ ಆಫೀಸಿನಲ್ಲಿ ಕೆಲಸಮಾಡತಕ್ಕ ನೌಕರರಿಗೆ ಜಮೀನನ್ನು ಕೊಟ್ಟಿದ್ದಾರೆ. ಇಂಥಾತಪ್ಪನ್ನು ಸರ್ಕಾರದವರು ಮಾಡುತ್ತಿದ್ದಾರೆ. ಯಾರು ಹಳ್ಳಿಯಲ್ಲಿದ್ದು

ಕೊಂಡು ಜಮೀನು ಇಲ್ಲದೆ ತೊಂದರೆ ಪಡುತ್ತಿದ್ದಾರೆಯೋ ಅಂಥಾರೈತರಿಗೆ ಜಮೀನು ಸಿಕ್ಕಿದರೆ ಅವರು ವ್ಯವಸಾಯಮಾಡಿದರೆ ಬಹುಶಃ ಆಹಾರದ ಪರಿಸ್ಥಿತಿ ಸ್ವಲ್ಪ ಉತ್ತಮ ಆದೀತು ಎಂದು ನಾನು ಭಾವಿಸುತ್ತೇನೆ.

ಇನ್ನು ಶರಾವತಿಯ ಬಗ್ಗೆ ಇಷ್ಟೊಂದು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿರುವಾಗ ಆ ಪ್ರಾಜೆಕ್ಟಿನ ಕೆಳಗಡೆ ನೀರಾವರಿ ಅಗತ್ಯ ಜಮೀನನ್ನು ಜನಗಳಿಗೆ ಸರಕಾರದವರು ಕೊಡತಕ್ಕಂಥ ಸಂದರ್ಭದಲ್ಲಿ ಈ ಒಂದು ಪದ್ಧತಿಯನ್ನು ಅನುಸರಿಸುವುದಾದರೆ ಬಹಳ ಅನುಕೂಲವಾಗುತ್ತದೆ ಎಂದು ನಾನು ಅಪೇಕ್ಷಿಸುತ್ತೇನೆ. ಈ ಸಾರಿ ಮಾನ್ಯ ಹಣಕಾಸಿನ ಸಚಿವರ ಭಾಷಣದಲ್ಲಿ ಕೆಲವು ವಿಷಯಗಳನ್ನು ಹೇಳುವುದನ್ನು ಕೈಬಿಟ್ಟಿದ್ದಾರೆ. ಕಳೆದ ವರ್ಷ ಸೊಸೈಟಿಗಳ ಬಗ್ಗೆ 23 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದರು. ಬಾವಿಗಳಿಗೆ ಬೇಕಾದಷ್ಟು ದುಡ್ಡನ್ನು ಕೊಟ್ಟಿದೇವೆಂದು ಹೇಳಿದ್ದರು. ಈ ಸಾರಿ ಈ ಪುಸ್ತಕದಲ್ಲಿ ಕೋ-ಆಪರೇಟಿವ್ ಸೊಸೈಟಿಗಳ ಬಗ್ಗೆ ಒಂದು ವಾಕ್ಯವನ್ನು ಕೂಡ ಹೇಳಿಲ್ಲ. ಹೆಲ್ತ್ ಬಗ್ಗೆ ಮತ್ತು ಪೋಲೀಸ್ ಇಲಾಖೆಯ ಬಗ್ಗೆ ಏನೂ ಹೇಳಿಲ್ಲ. ಇದನ್ನೆಲ್ಲಾ ನೋಡಿದರೆ ಮಂತ್ರಿಮಂಡಲದಲ್ಲಿ ಒಬ್ಬರಿಗೊಬ್ಬರಿಗೆ ಸಹಕಾರ ಸಿಕ್ಕಲಿಲ್ಲ ಎಂಬುದು ನನಗೆ ಅರ್ಥವಾಗುತ್ತದೆ. ಅಂತೂ ಅದು ಎಷ್ಟರ ಮಟ್ಟಿಗೆ ಸುಳ್ಳೋ ಅಥವಾ ನಿಜವೋ ನನಗೆ ಗೊತ್ತಿಲ್ಲ. ಆಹಾರದ ವಿಷಯ, ಕೈಗಾರಿಕೆ ಮತ್ತು ವಿದ್ಯಾಭ್ಯಾಸ ಈ ಮೂರು ವಿಷಯಗಳ ಬಗ್ಗೆ ಬಹಳ ವಿವರವಾಗಿ ಹೇಳಿದ್ದಾರೆ. ಬಾಕಿ ವಿಷಯವನ್ನು ಟಚ್ ಮಾಡುವುದಕ್ಕೆ ಹೋಗಿಲ್ಲ. ಎರಡನೆಯ ಭಾಗದಲ್ಲಿ ಅದರ ವಿವರವನ್ನು ಕೊಟ್ಟಿರಬಹುದು.

ಇನ್ನು ವಿದ್ಯಾಭ್ಯಾಸದ ಬಗ್ಗೆ ಹೇಳುವುದಾದರೆ, ಇದರಲ್ಲಿ ಸ್ವಲ್ಪ ಮಟ್ಟಿಗೆ ಮುಂದುವರಿದಿದ್ದಾರೆ. ಇದರಲ್ಲಿ ಯಾವ ವಿಷಯದಲ್ಲಿ ಮುಂದುವರಿದಿದ್ದಾರೆಂದರೆ ದುಡ್ಡು ಖರ್ಚುಮಾಡುವುದರಲ್ಲಿ ಮುಂದುವರಿದಿದ್ದಾರೆ. ಕಳೆದ ವರ್ಷ ಈ ಬಾಬಿಗೆ 21 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದರು. ಈ ವರ್ಷ ಆ ಬಾಬಿಗೆ 25 ಕೋಟಿ ರೂಪಾಯಿಗಳನ್ನು ಖರ್ಚುಮಾಡಬೇಕೆಂದು ಉದ್ದೇಶವನ್ನು ಇಟ್ಟುಕೊಂಡಿದ್ದಾರೆ. ಆದರೆ ಯಾವ ಕಾರ್ಯವನ್ನು ನಿರ್ವಹಿಸಬೇಕು ಎಂಬ ಬಗ್ಗೆ ಮಾತ್ರ ಸರ್ಕಾರದವರು ತಪ್ಪು ಹೆಜ್ಜೆಯನ್ನಿಟ್ಟಿದ್ದಾರೆ ಎಂದು ನಾನು ಹೇಳುತ್ತೇನೆ. ಪ್ರೈಮರಿ ವಿದ್ಯಾಭ್ಯಾಸದ ಬಗ್ಗೆ ಯಾವ ಆತಂಕವೂ ಇಲ್ಲದೆ ದೇಶದಲ್ಲಿ ವಿದ್ಯಾಭ್ಯಾಸವನ್ನು ಏರ್ಪಾಡು ಮಾಡಿದ್ದಾರೆ. ಸೆಕೆಂಡರಿ ವಿದ್ಯಾಭ್ಯಾಸವನ್ನು ಫ್ರೀಯಾಗಿ ಕೊಡುತ್ತೇವೆಂದು ಮಾನ್ಯ ವಿದ್ಯಾಮಂತ್ರಿಗಳು ಹೇಳಿದ್ದಾರೆ. ಆದರೆ ಆ ಬಗ್ಗೆ ಇದರಲ್ಲಿ ಏನೂ ಹೇಳಿಲ್ಲ.

ಶ್ರೀ ಎಸ್. ನಿಜಲಿಂಗಪ್ಪ.—ಸರ್ಕಾರದವರು ಅದನ್ನು ಯೋಚನೆ ಮಾಡುತ್ತಿದ್ದಾರೆಂದು ಹೇಳಿದ್ದಾರೆ, ಕೊಡುತ್ತೇವೆಂದು ಹೇಳಿಲ್ಲ.

ಶ್ರೀ ಬಿ. ಕೆ. ಪುಟ್ಟಯ್ಯ.—ಯೋಚನೆ ಮಾಡುತ್ತೇವೆಂದು ಹೇಳುವುದು ಮತ್ತು ಕೊಡುತ್ತೇವೆಂದು ಹೇಳುವುದು ಎರಡೂ ಒಂದೇ, ಆ ಬಗ್ಗೆ ಶೀಘ್ರವಾಗಿ ಒಂದು ನಿರ್ಧಾರಕ್ಕೆ ಬರಬೇಕು. ಬಡವರಿಗೆ ಅನುಕೂಲವಾಗುವಂತೆ ಬೇಗ ಅದನ್ನು ಜಾರಿಗೆ ತರಬೇಕು. ಇನ್ನೊಂದು ಕಡೆ ಬಿ.ಎ.ಎಲ್.ಎಲ್.ಬಿ. ಓದುವವರಿಗೆ ಸ್ಕಾಲರ್‌ಷಿಪ್ ಕೊಡುತ್ತೇವೆ ಎಂದು ಹೇಳಿದ್ದಾರೆ. ಬಿ.ಎ.ಎಲ್.ಎಲ್.ಬಿ. ಓದುವವರಿಗೆ ಅನುಕೂಲಮಾಡಿಕೊಟ್ಟರೆ ಸೋಷಿಯಲಿಸ್ಟಿಕ್ ಪ್ಯಾಟರ್ನ್ ಆಗುತ್ತದೆಯೇ? ತಾವು ಮಾಡತಕ್ಕ ಕಾರ್ಯವನ್ನು ಪ್ರತಿಯೊಬ್ಬರೂ ಕೂಡ ಎಚ್ಚರಿಕೆಯಿಂದ ನೋಡುವವರಾಗಿದ್ದಾರೆ. ತಾವು ತಪ್ಪು ಹೆಜ್ಜೆ ಇಡುವುದನ್ನು ತಮ್ಮ ಪಕ್ಷದವರೇ ಟೀಕೆ ಮಾಡುತ್ತಾರೆ.

ಒಬ್ಬ ಮಾನ್ಯ ಸದಸ್ಯರು.—ಎಲ್ಲಿ ಹೊರಗಡೆ ಟೀಕೆ ಮಾಡುತ್ತಾರೆಯೇ?

ಶ್ರೀ ಬಿ. ಕೆ. ಪುಟ್ಟಯ್ಯ.—ಈ ಸಭೆಯ ಒಳಗಡೆಯೂ ಟೀಕೆ ಮಾಡುತ್ತಾರೆ. ಇಷ್ಟಾದರೂ ಕೂಡ ಸರ್ಕಾರದವರು ಏತಕ್ಕೆ ಎಚ್ಚರಿಕೆಯನ್ನು ವಹಿಸಲಿಲ್ಲ. ಎಂದು ನನಗೆ ವ್ಯಸನವಾಗುತ್ತಿದೆ. ಇದರ ಬಗ್ಗೆ ತಾವು ಆಲೋಚನೆ ಮಾಡಬೇಕು. ಈಗ ಸರ್ಕಾರದವರು ಕೆಲವು ಯೋಜನೆಗಳನ್ನು ಮಾಡುತ್ತಾರೆ. ಆದರೆ ಅವುಗಳನ್ನು ಎಷ್ಟರಮಟ್ಟಿಗೆ ಕಾರ್ಯಗತ ಮಾಡುತ್ತಾರೆ ಎಂಬುದನ್ನು ನೋಡುವುದಾದರೆ, ಈಗ 832 ಯೋಜನೆಗಳನ್ನು ತಯಾರು ಮಾಡಿದ್ದಾರೆ, ಅವುಗಳ ಪೈಕಿ ಕಾರ್ಯಗತ ಮಾಡಿರುವುದು ಎಷ್ಟು ಎಂದರೆ 220 ಯೋಜನೆಗಳು. 80-90 ಯೋಜನೆಗಳು ಬೇರೆ ಬೇರೆ ಸ್ಟೇಜಿನಲ್ಲಿವೆ 100-120 ಯೋಜನೆಗಳು ಇಲ್ಲಿಯೇ ಮುಳುಗಿ ಹೋಗುತ್ತವೆ. ಇಂಥಾ ಒಂದು ಪರಿಸ್ಥಿತಿ ಉಂಟಾಗಿದೆ. ದೇಶದಲ್ಲಿ ಅಭಿವೃದ್ಧಿಯನ್ನು ಸಾಧನೆ ಮಾಡುವುದಕ್ಕೆ ಯೋಜನೆಗಳು ಬಹಳ ಅಗತ್ಯ ಎಂದು ನಾವು ಎಲ್ಲರೂ ಕೂಡ ಈ ಸಭೆಯಲ್ಲಿ ಒಪ್ಪಿಕೊಂಡಿದ್ದೇವೆ. ಆದರೆ ಆ ಯೋಜನೆಗಳು ಕಾರ್ಯಗತವಾಗುವುದರಲ್ಲಿ ಬಹಳ ವ್ಯತ್ಯಾಸಗಳಾಗುತ್ತಿವೆ. ಆದ್ದರಿಂದ ಅದನ್ನು ಸರಿಪಡಿಸಿಕೊಳ್ಳಬೇಕೆಂದು ನಾವು ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡಬೇಕಾಗುತ್ತದೆ. ನಾನು ಮೊದಲೇ

(ಶ್ರೀ ಬಿ. ಕೆ. ಪುಟ್ಟಯ್ಯ)

ಹೇಳಿದ ಹಾಗೆ 832 ಯೋಜನೆಗಳ ಪೈಕಿ 220 ಯೋಜನೆಗಳನ್ನು ಇಂಟ್ರಡ್ಯೂಜ್ ಮಾಡಿದ್ದಾರೆ. ಕೆಲವು ಎಸ್ಟ್ಯಾಬ್ಲಿಷ್ ಸ್ಟೇಜಿನಲ್ಲಿವೆ, ಉಳಿದವುಗಳನ್ನು ಕಾರ್ಯಗತ ಮಾಡಲು ದುಡ್ಡು ಇಲ್ಲದೆ ಪರದಾಡುವ ಸ್ಥಿತಿಯಲ್ಲಿದೆ. ಇವರು ಇನ್ನೂ 600 ಚಿಲ್ಲರೆ ಯೋಜನೆಗಳನ್ನು ಕಾರ್ಯಗತ ಮಾಡಬೇಕಾಗಿದೆ. ಇನ್ನು 10 ಪಂಚವಾರ್ಷಿಕ ಯೋಜನೆಗಳಾದರೂ ಇವರ ಕೈಯ್ಯಲ್ಲಿ ಅವುಗಳನ್ನು ಕಾರ್ಯಗತ ಮಾಡುವುದಕ್ಕೆ ಆಗುತ್ತದೆಯೋ ಇಲ್ಲವೋ ಗೊತ್ತಿಲ್ಲ. ಈ ಒಂದು ಪರಿಸ್ಥಿತಿಯಲ್ಲಿ ನಮ್ಮ ದುಡ್ಡು ಹಾಳಾಗುತ್ತಿದೆ. ಈಗ ನಮ್ಮ ದೇಶಕ್ಕೆ ಇರತಕ್ಕಂಥ 300 ಕೋಟಿ ರೂಪಾಯಿಗಳ ಸಾಲದ ಹೊರೆ ಏನಿದೆ ಅದು ಬಹುಶಃ ಮುಂದಿನ ಪಂಚವಾರ್ಷಿಕ ಯೋಜನೆಯಲ್ಲಿ 500 ಅಥವಾ 600 ಕೋಟಿ ರೂಪಾಯಿಗಳವರೆಗೆ ಹೋಗುತ್ತದೆ. ಆಗ ಅದನ್ನು ಕೊಡಬೇಕಾದವರು ನಾವು ನೀವು ಸೇರಿ ಕಷ್ಟಪಡಬೇಕಾಗುತ್ತದೆ. ನಾವು ಸಾಲ ಮಾಡುವ ರೀತಿಯಲ್ಲಿ ನಿರೀಕ್ಷಣೆ ಮಾಡಬೇಕಾದ್ದು ಅಗತ್ಯ. ಅದು ಇಲ್ಲದೆ ಸಾಲ ಮಾಡಿಕೊಂಡು ಹೋದರೆ ಕಷ್ಟ. ನಮ್ಮ ಹತ್ತಿರ ದುಡ್ಡಿದ್ದರೂ ಅಷ್ಟೆ, ನಿಮ್ಮ ಹತ್ತಿರ ದುಡ್ಡು ಇದ್ದರೂ ಅಷ್ಟೆ, ಜೇಬಿನಲ್ಲಿ ದುಡ್ಡು ಇದ್ದರೆ ಅದು ಖರ್ಚಾಗಿ ಹೋಗುತ್ತದೆ. ಸರ್ಕಾರದ ದುಡ್ಡು ಎಷ್ಟು ಬೇಗ ಖರ್ಚಾಗುತ್ತದೆ ಎಂಬುದನ್ನು ಸ್ವಲ್ಪ ಆಲೋಚನೆ ಮಾಡಿ. ದುಡ್ಡನ್ನು ಖರ್ಚುಮಾಡುವ ಕಾಲದಲ್ಲಿ ನಾವು ಆಲೋಚನೆ ಮಾಡಿ ನಿಜವಾಗಿ ಅದು ಜನಗಳಿಗೆ ಹೊರೆ ಆಗದಂತೆ ನೋಡಿ ಖರ್ಚು ಮಾಡುವುದು ಅಗತ್ಯ ಎಂದು ನಾನು ಹೇಳುತ್ತೇನೆ.

ಇನ್ನು ಸ್ವಾಮಿ, ಸರ್ಕಾರದವರು ಕೆಲವು ಕಮಿಟಿಗಳನ್ನ ಮಾಡಿದ್ದಾರೆ. ಆ ಕಮಿಟಿಗಳಲ್ಲಿ ಆಡಳಿತ ಪಕ್ಷದವರೇ ಇರಬೇಕೆಂದು ಏನಾದರೂ ತೀರ್ಮಾನ ಮಾಡಿಕೊಂಡಿದ್ದಾರೆಯೇ? ಅಧಿಕಸಂಖ್ಯೆಯಲ್ಲಿ ಅವರೇ ಇರಲಿ, ಆದರೆ ಅದರಲ್ಲಿ 4-5 ಜನ ಇರುವ ಕಡೆ ವಿರೋಧಪಕ್ಷದ ಮಾನ್ಯ ಸದಸ್ಯರನ್ನು ಒಬ್ಬರಿಗೆ ಸೇರಿಸಿಕೊಂಡರೆ ಹೆಚ್ಚು ತಪ್ಪು ಮಾಡುವುದಕ್ಕೆ ಅವಕಾಶವಾಗುವುದಿಲ್ಲ. ಅವರು ಸರ್ಕಾರದವರನ್ನು ಎಚ್ಚರಿಸುವುದಕ್ಕೆ ಅವಕಾಶ ಇರುತ್ತದೆ. ಆದ್ದರಿಂದ ಅಂಥಾ ಒಂದು ವ್ಯವಸ್ಥೆ ಆಗಬೇಕು ಎಂದು ನಾನು ಹೇಳುತ್ತೇನೆ. ಮೊನ್ನೆತಾನೆ ಹೌಸಿಂಗ್‌ಬೋರ್ಡ್ ಎಂದು ಮಾಡಿದ್ದಾರೆ ಅಲ್ಲಿಯೂ ರಾಜಕೀಯವನ್ನ ತಂದಿದ್ದಾರೆ ಅದಕ್ಕೆ ಒಬ್ಬರು ಚೇರ್ಮನ್ ಮಾಡಿದ್ದಾರೆ. ಮತ್ತು ವಿಧಾನ ಸಭೆಯ ಸದಸ್ಯರು ಅದಕ್ಕೆ ಮೆಂಬರಾಗಿದ್ದಾರೆ. ಮೈಸೂರಿನಲ್ಲಿರತಕ್ಕ ಕಮಿಟಿಗೆ ಬೆಂಗಳೂರು ಸಿಟಿ ಇಂಪ್ರೂವ್‌ಮೆಂಟ್ ಬೋರ್ಡಿನ ಚೇರ್ಮನರು ಮೆಂಬರಾಗಿದ್ದಾರೆ. ಇಂಥಾ ಒಂದು ಪರಿಸ್ಥಿತಿಗೆ ಇಳಿಸಿದ್ದಾರೆ. ಇಷ್ಟೊಂದು ದಾಕ್ಷಿಣ್ಯಕ್ಕೆ ಒಳಗಾಗುತ್ತಿದ್ದಾರೆ. ಮೈಸೂರು ಸಿಟಿ ಹೌಸಿಂಗ್ ಬೋರ್ಡ್ ಯೋಜನೆಯ ಕಮಿಟಿಯಲ್ಲಿ ಬೆಂಗಳೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನ ಚೇರ್ಮನರು ಮೆಂಬರಾಗಿದ್ದಾರೆ. ಮೈಸೂರು ಸಿಟಿಯ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನ ಚೇರ್ಮನ್ ಅವರು ಅದಕ್ಕೆ ಮೆಂಬರಾಗಿಲ್ಲ. ಇಂಥಾ ಒಂದು ಅವ್ಯವಸ್ಥೆಗೆ ಇಳಿಯಬೇಕಾದರೆ ರಾಜಕೀಯ ಪ್ರಭಾವಕ್ಕೆ ಎಷ್ಟರಮಟ್ಟಿಗೆ ಒಳಗಾಗುತ್ತಿದ್ದಾರೆ ಎಂಬುದನ್ನು ನಾವು ಪ್ರಶ್ನೆ ಮಾಡಬೇಕಾಗುತ್ತದೆ.

Mr. DEPUTY SPEAKER.—The House will now rise and meet tomorrow at 1 p.m.

The House adjourned at Six of the Clock to meet again at one of the Clock on Friday, the 5th March 1965.